॥ ಜೈ ಶ್ರೀ ಗುರುದೇವ್ ॥





ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)

# ಗಿರಿ ಕುಸುಮ

## ವಾರ್ಷಿಕ ಸಂಚಿಕೆ 2020-21



**ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ನ್ಯಾಕ್ ಸಂಸ್ಥೆಯಿಂದ 'ಬಿ++' ಗ್ರೇಡ್ ಮಾನ್ಯತೆ ಪಡೆದಿದೆ)

ನಾಗಮಂಗಲ, ಮಂಡ್ಯ ಜಿಲ್ಲೆ – 571432





ಮಹಾಸ್ವಾಮೀಜಿಯವರು ಕಾಲೇಜಿಗೆ ಭೇಟಿ ನೀಡಿದ ಸಂದರ್ಭ








ವಾರ್ಷಿಕ ಸಂಚಿಕೆಯ ಸಂಪಾದಕ ಮಂಡಳಿ

॥ ಜೈ ಶ್ರೀ ಗುರುದೇವ್ ॥





ಭೈರವೈಕ್ಯ ಪದ್ಮಭೂಷಣ ಪರಮಪೂಜ್ಯ ಜಗದ್ಗುರು

## ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು

ಸಂಸ್ಥಾಪಕ ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)

# ಗಿರಿ ಕುಸುಮ












॥ ಜೈ ಶ್ರೀ ಗುರುದೇವ್ ॥



ಪರಮಪೂಜ್ಯ ಜಗದ್ಗುರು


ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು

ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)



**ಪೂಜ್ಯ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಯವರು**

ಪ್ರಧಾನ ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)



**ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರು**

ಪ್ರಧಾನ ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಮಠ



# ದಿವ್ಯ ಸಂದೇಶ

ಶಿಕ್ಷಣವೆಂದರೆ ಚಾರಿತ್ರ್ಯದ ನಿರ್ಮಾಣ. ಆದರೆ ಚಾರಿತ್ರ್ಯ ನಿರ್ಮಾಣಕ್ಕಾಗಿ ಶಿಕ್ಷಣ ಎಂಬ ಧ್ಯೇಯ ಮರೆಯಾಗುತ್ತಿರುವ ಇಂದಿನ ದಿನಮಾನದಲ್ಲಿ ಶಿಕ್ಷಣವನ್ನು ಕೇವಲ ಔದ್ಯೋಗೀಕರಣಗೊಳಿಸಿ ಅದನ್ನು ಕೇವಲ ಪಠ್ಯವಿಷಯಗಳಿಗಷ್ಟೇ ಸೀಮಿತಗೊಳಿಸಲಾಗಿದೆ. ಆದರೆ ಶಿಕ್ಷಣ ಎಂಬುದು ಕೇವಲ ಪಠ್ಯವಿಷಯವಲ್ಲ, ಅದು ಅರಿವಿನ ಬೆಳಕಾಗಬೇಕು. ಅದರ ಗುರಿ ಆತ್ಮಸಾಕ್ಷಾತ್ಕಾರವಾಗಬೇಕು. ಆ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶದ ಬಡ ವಿದ್ಯಾರ್ಥಿಗಳಲ್ಲಿ ಜ್ಞಾನದೀವಿಗೆಯನ್ನು ಪಸರಿಸಿ ಅವರಿಗೂ ಉನ್ನತ ಶಿಕ್ಷಣವನ್ನು ನೀಡಿ ವಿದ್ಯಾರ್ಥಿಗಳನ್ನು ಆಧುನಿಕವಾಗಿ ನಿರ್ಮಿಸುವುದರ ಜೊತೆಗೆ ಆಧ್ಯಾತ್ಮಿಕ ತಳಹದಿಯನ್ನೂ ಭದ್ರವಾಗಿ ಹಾಕಬೇಕೆಂಬ ಸದಾಶಯದಿಂದ ನಮ್ಮ ಪರಮಪೂಜ್ಯ ಗುರುಗಳಾದ **ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ.ಬಾಲಗಂಗಾಧರನಾಥ ಮಹಾಸ್ವಾಮಿಗಳವರು** ನಾಲ್ಕು ದಶಕಗಳ ಹಿಂದೆಯೇ ನಾಗಮಂಗಲದಂತಹ ಹಿಂದುಳಿದ ಪ್ರದೇಶದಲ್ಲಿ **ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜನ್ನು** ಪ್ರಾರಂಭಿಸಿದರು. ಈ ಸಂಸ್ಥೆಯು ಅಂದಿನಿಂದಲೂ ಪರಮಪೂಜ್ಯ ಗುರೂಜಿರವರ ಸದಾಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮುನ್ನಡೆಯುತ್ತಿರುವುದು ನಮಗೆ ಬಹಳ ಸಂತಸವನ್ನುಂಟು ಮಾಡಿದೆ.

ವಿದ್ಯಾರ್ಥಿಗಳನ್ನು ಇಂದಿನ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಸಜ್ಜುಗೊಳಿಸುವ ಆತುರದಲ್ಲಿ ನಮ್ಮ ಸನಾತನ ಪರಂಪರೆಯನ್ನು ಮರೆಯಬಾರದು. ಇಂದಿನ ಆಧುನಿಕ ಜ್ಞಾನ ಮತ್ತು ಸನಾತನ ಜ್ಞಾನ ಪರಂಪರೆಗಳೆರಡರ ನಡುವೆ ಸಮನ್ವಯತೆಯನ್ನು ಸಾಧಿಸಬೇಕು. ಜ್ಞಾನ ವಿಜ್ಞಾನಗಳೆರಡರ ಸಮನ್ವಯತೆ ಹೊಂದಿರುವ ಶಿಕ್ಷಣ ಇಂದಿನ ಅಗತ್ಯವಾಗಿದೆ. ಆಧ್ಯಾತ್ಮಿಕದೊಂದಿಗೆ ಶಿಕ್ಷಣವನ್ನು ಬೋಧಿಸಿದಾಗ ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಯಶಸ್ಸು ಗಳಿಸುವುದು ಸುಲಭ ಸಾಧ್ಯವಾಗುತ್ತದೆ ಎಂಬುದನ್ನು ಶಿಕ್ಷಕರು ಅರಿತುಕೊಳ್ಳಬೇಕು. ಏಕೆಂದರೆ ವೈಜ್ಞಾನಿಕ ಬೆಳವಣಿಗೆ ನಮ್ಮ ಹೊರ ಜಗತ್ತಿಗೆ ಕಾಣುವ ಬಹುದೊಡ್ಡ ಮಹಲು. ಆದರೆ ಆ ದೊಡ್ಡ ಮಹಲು ಭದ್ರವಾಗಿ ನಿಲ್ಲಲು ಆಧ್ಯಾತ್ಮದ ತಳಹದಿ ಇರಬೇಕು. ಭದ್ರವಾದ ತಳಹದಿ ಇಲ್ಲದ ಯಾವುದೇ ಕಟ್ಟಡ ಹೆಚ್ಚು ಕಾಲ ನಿಲ್ಲುವುದಿಲ್ಲ. ಆ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳೂ, ಶಿಕ್ಷಕರೂ ಆತ್ಮಾವಲೋಕನ ಮಾಡಿಕೊಂಡು, ಮಕ್ಕಳಲ್ಲಿ ಆಧುನಿಕ ಶಿಕ್ಷಣದ ಜೊತೆ ಜೊತೆಗೆ ಸನಾತನ ಜೀವನ ಮೌಲ್ಯಗಳನ್ನೂ ಮೈಗೂಡಿಸುವ ಮೂಲಕ ಅವರನ್ನು ಸತ್ಪ್ರಜೆಗಳನ್ನಾಗಿ ರೂಪಿಸಬೇಕು. ವಿದ್ಯಾರ್ಥಿಗಳ ಭವಿಷ್ಯವನ್ನು, ತನ್ಮೂಲಕ ಇಡೀ ದೇಶದ ಭವಿಷ್ಯವನ್ನು ರೂಪಿಸುವವರು ಶಿಕ್ಷಕರು. ಶಾಲೆಗಾಗಿ ಉತ್ತಮ ಕಟ್ಟಡ, ವಿದ್ಯಾರ್ಜನೆಗೆ ಸಕಲ ಸೌಕರ್ಯ.... ಹೀಗೆ ಏನೆಲ್ಲ ಇದ್ದರೂ ಸಮರ್ಥರಾದ ಯೋಗ್ಯ ಶಿಕ್ಷಕರು ಹಾಗೂ ಉತ್ತಮ ವಿದ್ಯಾರ್ಥಿವೃಂದ ಇಲ್ಲದೇ ಹೋದರೆ ಯಾವುದೇ ವಿದ್ಯಾಸಂಸ್ಥೆ ನಿರೀಕ್ಷಿತ ಯಶಸ್ಸನ್ನು ಗಳಿಸಲಾಗದು.

ಪ್ರಸ್ತುತ ಸಂಸ್ಥೆಯು ವಾರ್ಷಿಕೋತ್ಸವವನ್ನಾಚರಿಸುತ್ತಿರುವ ಶುಭ ಸಂದರ್ಭದಲ್ಲಿ ಪ್ರತಿವರ್ಷದಂತೆ **'ಗಿರಿ ಕುಸುಮ'** ಸ್ಮರಣ ಸಂಚಿಕೆಯನ್ನು ಪ್ರಕಾಶಿಸುತ್ತಿರುವುದು ಸಮಯೋಚಿತವಾಗಿದೆ. ಇದು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಪ್ರಕಾಶಿಸಲು ಉತ್ತಮ ಮಾಧ್ಯಮ. ಈ ಸಂಚಿಕೆಯು ಶಿಕ್ಷಣ ಸಂಸ್ಥೆಯು ಬೆಳೆದು ಬಂದ ಬಗೆಯನ್ನು ದಾಖಲಿಸುವ ಜೊತೆಗೆ ಜ್ಞಾನ ವಿಜ್ಞಾನ, ಧರ್ಮ, ಕಲೆ, ಸಂಸ್ಕೃತಿ ಹಾಗೂ ಜೀವನ ಮೌಲ್ಯಗಳಿಂದೊಡಗೂಡಿದ ಅತ್ಯುತ್ತಮ ಲೇಖನಗಳಿಂದ ಕೂಡಿ ಸರ್ವಾಂಗ ಸುಂದರವಾಗಿ ಮೂಡಿ ಬರಲೆಂದೂ, ಸಂಸ್ಥೆಯ ಸೇವಾಕಾರ್ಯಗಳು ಮತ್ತಷ್ಟು ವಿಸ್ತೃತಗೊಳ್ಳಲೆಂದು ಆಶಿಸುತ್ತಾ, ಹಮ್ಮಿಕೊಂಡಿರುವ ಸಮಾರಂಭವು ಯಶಸ್ವಿಯಾಗಿ ನೆರವೇರಲೆಂದು ತುಂಬು ಹೃದಯದಿಂದ ಹಾರೈಸುತ್ತೇವೆ.

ಇಂತು ಭಗವತ್ಸೇವೆಯಲ್ಲಿ

**(ಡಾ॥ ನಿರ್ಮಲಾನಂದನಾಥ ಸ್ವಾಮೀಜಿ)**

ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ



**ಡಾ. ಎನ್. ಎಸ್. ರಾಮೇಗೌಡ,** ಎಂ.ಎಸ್ಸಿ, ಪಿಎಚ್.ಡಿ.,
ಸಿ.ಇ.ಒ., ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)



**ಡಾ. ಬಿ.ಕೆ. ಲೋಕೇಶ,** ಎಂ.ಎ, ಪಿಎಚ್.ಡಿ.,
ಪ್ರಾಂಶುಪಾಲರು



ಭಾಷಾ
ವಿಭಾಗದ
ಅಧ್ಯಾಪಕರು



ಕಲಾ
ವಿಭಾಗದ
ಅಧ್ಯಾಪಕರು



ವಾಣಿಜ್ಯ
ವಿಭಾಗದ
ಅಧ್ಯಾಪಕರು



ವಿಜ್ಞಾನ
ವಿಭಾಗದ
ಅಧ್ಯಾಪಕರು



ಅಧ್ಯಾಪಕೇತರ
ಸಿಬ್ಬಂದಿ ವರ್ಗ



ಕಾಲೇಜಿನ
ಸ್ಕೌಟ್ಸ್ ರೇಂಜರ್
ಮತ್ತು
ರೋವರ್ಸ್ ತಂಡ



ತೃತೀಯ ವರ್ಷದ ಬಿ.ಎ. 'ಎ' ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಎ. 'ಬಿ' ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಎಸ್ಸಿ., ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಕಾಂ. 'ಎ' ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಕಾಂ. 'ಬಿ' ವಿಭಾಗದ ವಿದ್ಯಾರ್ಥಿಗಳು



ತೃತೀಯ ವರ್ಷದ ಬಿ.ಕಾಂ. 'ಸಿ' ವಿಭಾಗದ ವಿದ್ಯಾರ್ಥಿಗಳು

ತೃತೀಯ
ವರ್ಷದ
ಬಿ.ಬಿ.ಎ.
ವಿದ್ಯಾರ್ಥಿಗಳು





ಎಂ.ಕಾಂ.,
ವಿದ್ಯಾರ್ಥಿಗಳು



ಕೊರೊನಾದ ಸಂಕಷ್ಟ ನಿವಾರಣೆಯನ್ನು ಕೋರಿ ಏರ್ಪಡಿಸಿದ್ದ ಗಣಪತಿ ಹೋಮ



ರಸಾಯನಶಾಸ್ತ್ರ ಪ್ರಯೋಗಾಲಯ



ಭೌತಶಾಸ್ತ್ರ ಪ್ರಯೋಗಾಲಯ



ಭೂಗೋಳಶಾಸ್ತ್ರ ವಿಭಾಗದ
ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿವರಣೆ



ಕಂಪ್ಯೂಟರ್ ಲ್ಯಾಬ್‌ನಲ್ಲಿ
ಅಧ್ಯಯನನಿರತ ವಿದ್ಯಾರ್ಥಿಗಳು



ಗ್ರಂಥಾಲಯದಲ್ಲಿ
ಅಧ್ಯಯನಶೀಲ ವಿದ್ಯಾರ್ಥಿಗಳು



ಇ-ಗ್ರಂಥಾಲಯ ಸೌಲಭ್ಯ
ಬಳಸುತ್ತಿರುವ ವಿದ್ಯಾರ್ಥಿಗಳು



ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ
ಪೂರ್ವಪರಿಚಯ ಕಾರ್ಯಕ್ರಮ



ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ
ವಿದ್ಯಾರ್ಥಿಗಳ ವಿಜ್ಞಾನ ಮಾದರಿಗಳ ಪ್ರದರ್ಶನ



ಅಗ್ನಿಶಾಮಕ ದಳದವರಿಂದ ಅಗ್ನಿ ಅವಘಡದಿಂದ
ಪಾರಾಗುವುದರ ಬಗ್ಗೆ ಜಾಗೃತಿ ಕಾರ್ಯಕ್ರಮ



ಹಿರಿಯ ವಿದ್ಯಾರ್ಥಿಗಳ
ಸಮಾಗಮ ಕಾರ್ಯಕ್ರಮ



ನ್ಯಾಕ್ ಪೂರ್ವಸಿದ್ಧತೆ
ಕುರಿತಾದ ಕಾರ್ಯಾಗಾರ



ಮಳೆ ನೀರು ಸಂರಕ್ಷಣೆ ಕುರಿತಾದ
ಉಪನ್ಯಾಸ ಕಾರ್ಯಾಗಾರ



ಪೋಷಕರು – ಉಪನ್ಯಾಸಕರ ಸಭೆ



ಮತದಾರರ ದಿನದ ಪ್ರಯುಕ್ತ ಪ್ರತಿಜ್ಞಾವಿಧಿ ಬೋಧನೆ



ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಅತಿಥಿ ಗಣ್ಯರಿಂದ ಗಿಡ ನೆಡುವ ಕಾರ್ಯಕ್ರಮ



ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಕೋವಿಡ್ ವ್ಯಾಕ್ಸಿನೇಷನ್ ಅಭಿಯಾನ



ಅಂಬೇಡ್ಕರ್ ಜಯಂತಿ ಪ್ರಯುಕ್ತ ಪೌರ ಕಾರ್ಮಿಕರಿಗೆ ಸನ್ಮಾನ ಕಾರ್ಯಕ್ರಮ



ಮಹಿಳಾ ಸಿಬ್ಬಂದಿಯವರಿಗೆ ನೀಡಿದ ಬಾಗಿನ ಕಾರ್ಯಕ್ರಮ



2020–21ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ ಮತ್ತಿತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಮತ್ತು ಕುವೆಂಪು ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮ



2019–20ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ



ಪ್ರಾಂಶುಪಾಲರು ಮತ್ತು ದೈಹಿಕ ಶಿಕ್ಷಕರೊಂದಿಗೆ ಕಾಲೇಜಿನ ಕ್ರೀಡಾ ಸ್ಪರ್ಧಾಳುಗಳು



ಕಾಲೇಜಿನಲ್ಲಿ ನಡೆದ ಮಾಂಡವ್ಯ ವಲಯದ ಕಬ್ಬಡಿ ಸ್ಪರ್ಧೆ



ಕಾಲೇಜಿನಲ್ಲಿ ನಡೆದ ಯೋಗ ಕಾರ್ಯಕ್ರಮ



ನುಡಿನಮನ ಮತ್ತು ರಾಜ್ಯಮಟ್ಟದ
ಅಂತರ್ಜಾಲ ಕವಿಗೋಷ್ಠಿ ಕಾರ್ಯಕ್ರಮ



ಮಂಕುತಿಮ್ಮನ ಕಗ್ಗ ಕುರಿತಾದ ರಾಜ್ಯಮಟ್ಟದ
ಅಂತರ್ಜಾಲ ವಿಚಾರ ಸಂಕಿರಣ




ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ ಏರ್ಪಡಿಸಿದ್ದ
ರಾಷ್ಟ್ರಮಟ್ಟದ ಅಂತರ್ಜಾಲ ವಿಚಾರ ಸಂಕಿರಣ



ಅರ್ಥಶಾಸ್ತ್ರ ವಿಭಾಗದ ವತಿಯಿಂದ ಏರ್ಪಡಿಸಿದ್ದ
ರಾಜ್ಯಮಟ್ಟದ ಅಂತರ್ಜಾಲ ವಿಚಾರ ಸಂಕಿರಣ



ರಾಜ್ಯಶಾಸ್ತ್ರ ವಿಭಾಗದ ವತಿಯಿಂದ
'ಗಾಂಧಿಯ ಗ್ರಾಮಸ್ವರಾಜ್ಯ ಪರಿಕಲ್ಪನೆ' ಕುರಿತಾದ
ಏರ್ಪಡಿಸಿದ್ದ ರಾಜ್ಯಮಟ್ಟದ ಅಂತರ್ಜಾಲ ವಿಚಾರ ಸಂಕಿರಣ



ಇತಿಹಾಸ ವಿಭಾಗದ ವತಿಯಿಂದ ಏರ್ಪಡಿಸಿದ್ದ
ರಾಜ್ಯಮಟ್ಟದ ಅಂತರ್ಜಾಲ ವಿಚಾರ ಸಂಕಿರಣ



ಭೂಗೋಳಶಾಸ್ತ್ರ ವಿಭಾಗದ ವತಿಯಿಂದ ಏರ್ಪಡಿಸಿದ್ದ
ರಾಜ್ಯಮಟ್ಟದ ಅಂತರ್ಜಾಲ ವಿಚಾರ ಸಂಕಿರಣ



ಸಮಾಜಶಾಸ್ತ್ರ ವಿಭಾಗದ ವತಿಯಿಂದ ಏರ್ಪಡಿಸಿದ್ದ
ರಾಜ್ಯಮಟ್ಟದ ಅಂತರ್ಜಾಲ ವಿಚಾರ ಸಂಕಿರಣ

# ಗಿರಿ ಕುಸುಮ

## 2020-21ನೇ ಸಾಲಿನ ವಾರ್ಷಿಕ ಸಂಚಿಕೆ

ಪ್ರಧಾನ ಸಂಪಾದಕರು

**ಡಾ. ಬಿ.ಕೆ. ಲೋಕೇಶ**

ಸಂಪಾದಕರು

**ಡಾ. ಎಂ.ಕೆ. ಮಂಜುನಾಥ**

ಸಂಪಾದಕ ಮಂಡಳಿ

**ಪ್ರೊ. ಬಿ.ಎಸ್.ರಾಮಕೃಷ್ಣೇಗೌಡ**

**ಶ್ರೀ ಎಂ.ಪಿ.ಸುನೀಲ್‌ಕುಮಾರ್**

**ಶ್ರೀಮತಿ ನವೇರಿಯಾ ಬಾನು**

**ಶ್ರೀಮತಿ ಜಿ. ಜ್ಯೋತಿಲಕ್ಷ್ಮಿ**

**ಶ್ರೀಮತಿ ಎಸ್. ಯೋಗಿತ**

**ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
ನಾಗಮಂಗಲ, ಮಂಡ್ಯ ಜಿಲ್ಲೆ – 571432
**ವೆಬ್‌ಸೈಟ್**: www.saccngm.org / www.saccngm.edu.in
**ಇ-ಮೇಲ್**: saccngm@gmail.com

# ಕಾಲೇಜಿನ ಪರಿಚಯ

ಪುರಾಣ ಪ್ರಸಿದ್ಧ ಶ್ರೀ ಆದಿಚುಂಚನಗಿರಿ ಮಠವು ಅನ್ನ ದಾಸೋಹಕ್ಕೆ ಹೆಸರುವಾಸಿಯಾಗಿರುವಂತೆಯೇ ದಿನಾಂಕ: 13-12-1973ರಂದು **'ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್'** ಸ್ಥಾಪಿಸುವುದರ ಮೂಲಕ ಜ್ಞಾನ ದಾಸೋಹಕ್ಕೆ ನಾಂದಿಯಾಯಿತು. ಈಗ ಟ್ರಸ್ಟ್‌ನ ಅಧೀನದಲ್ಲಿ ಪೂರ್ವ ಪ್ರಾಥಮಿಕ ಹಂತದಿಂದ ವೈದ್ಯಕೀಯ-ತಾಂತ್ರಿಕ ಶಿಕ್ಷಣದವರೆಗೆ 500ಕ್ಕೂ ಹೆಚ್ಚು ಶಾಲಾ ಕಾಲೇಜುಗಳು ನಾಡಿನಾದ್ಯಂತ ಲಕ್ಷಾಂತರ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿವೆ. ಇಂತಹ ಪ್ರಸಿದ್ಧ ಶಿಕ್ಷಣ ಸಂಸ್ಥೆಗಳಲ್ಲಿ **'ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು'** ಪ್ರಥಮವಾಗಿ ಸ್ಥಾಪಿತವಾದ ಸಂಸ್ಥೆಯಾಗಿದೆ.

ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಸುಸಜ್ಜಿತ ಕಟ್ಟಡದೊಂದಿಗೆ 1975ರಲ್ಲಿ ಪ್ರಾರಂಭವಾದ ಈ ಕಾಲೇಜು ಸಮಾಜಕ್ಕೆ ವಿವಿಧ ಆಯಾಮಗಳಲ್ಲಿ ಸೇವೆ ಸಲ್ಲಿಸುತ್ತಿದೆಯಲ್ಲದೆ, ರಾಷ್ಟ್ರಕ್ಕೆ ಅನೇಕ ಪ್ರತಿಭೆಗಳನ್ನು ಕೊಡುಗೆಯಾಗಿ ನೀಡಿದೆ. ಬಿ.ಎ., ಬಿ.ಕಾಂ., ಪದವಿ ತರಗತಿಗಳೊಂದಿಗೆ ಪ್ರಾರಂಭಗೊಂಡ ಈ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 108 ರಿಂದ 1027ಕ್ಕೆ ತಲುಪಿದೆ. ಜೊತೆಗೆ 2006-2007ನೇ ಸಾಲಿನಲ್ಲಿ ಬಿ.ಎಸ್ಸಿ., ತರಗತಿಯನ್ನು ಹಾಗೂ 2011-12ನೇ ಸಾಲಿನಲ್ಲಿ ಬಿ.ಬಿ.ಎ., ತರಗತಿಗಳನ್ನು ಪ್ರಾರಂಭಿಸಲಾಗಿದೆ. 2014-15ನೇ ಸಾಲಿನಲ್ಲಿ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ತರಗತಿಗಳನ್ನು(ಎಂ.ಕಾಂ.,) ಪ್ರಾರಂಭಿಸಲಾಗಿದೆ.

ಶಿಕ್ಷಣ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಭೈರವೈಕ್ಯ ಯುಗಯೋಗಿ, ಪದ್ಮಭೂಷಣ, ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಕೃಪಾಶೀರ್ವಾದ ಹಾಗೂ ಪ್ರಸ್ತುತ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿರುವ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಈ ಕಾಲೇಜು ಪ್ರವರ್ಧಮಾನಗೊಳ್ಳುತ್ತಿದೆ. ಸೇವಾ ಮನೋಭಾವದ ಪ್ರಾಂಶುಪಾಲರು, ಸಮರ್ಥ ಅಧ್ಯಾಪಕರು ಹಾಗೂ ನೌಕರ ವರ್ಗದವರು ಕಾಲೇಜಿನ ಸರ್ವಾಂಗೀಣ ಪ್ರಗತಿಗಾಗಿ ದುಡಿಯುತ್ತಿದ್ದಾರೆ.

ಪ್ರತಿ ತಾಲ್ಲೂಕು ಕೇಂದ್ರಕ್ಕೆ ಒಂದು ಪ್ರಥಮದರ್ಜೆ ಕಾಲೇಜು ಎಂಬ ಸರ್ಕಾರದ ನೀತಿಗೆ ಅನುಗುಣವಾಗಿ ಈ ಕಾಲೇಜು 1988ರಲ್ಲಿ ಶ್ರೀಕ್ಷೇತ್ರದಿಂದ ನಾಗಮಂಗಲಕ್ಕೆ ಸ್ಥಳಾಂತರಗೊಂಡಿತು. ಸುಸಜ್ಜಿತ ತರಗತಿ ಕೊಠಡಿಗಳು, ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಕಂಪ್ಯೂಟರ್ ಲ್ಯಾಬ್‌ಗಳು, 25 ಸಾವಿರಕ್ಕೂ ಹೆಚ್ಚು ಪುಸ್ತಕಗಳಿರುವ ಡಿಜಿಟಲ್‌ಗೊಂಡಿರುವ ಗ್ರಂಥಾಲಯ, ಅತ್ಯಾಧುನಿಕ ಸೌಲಭ್ಯವುಳ್ಳ ವಿಚಾರ ಸಂಕಿರಣ ಸಭಾಂಗಣದಿಂದ ಕೂಡಿರುವ ಈ ಕಾಲೇಜು ಈಗ ನ್ಯಾಕ್ ಸಂಸ್ಥೆಯಿಂದ 'ಬಿ++' ಗ್ರೇಡ್ ಮಾನ್ಯತೆಯನ್ನು ಪಡೆದುಕೊಂಡಿದೆಯಲ್ಲದೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ರೂಪಿಸುವುದರ ಮೂಲಕ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಅನೇಕ ರ್‍ಯಾಂಕ್ ಹಾಗೂ ಚಿನ್ನದ ಪದಕಗಳನ್ನು ಗಳಿಸಿಕೊಂಡಿದೆ. 48 ಅಧ್ಯಾಪಕರು ಹಾಗೂ 15 ಅಧ್ಯಾಪಕೇತರರು ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಕರ್ತವ್ಯವನ್ನು ನಿರ್ವಹಿಸುವುದರ ಮೂಲಕ ಈ ಕಾಲೇಜನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದ್ದಾರೆ.

# SRI ADICHUNCHANAGIRI COLLEGE OF ARTS, COMMERCE AND SCIENCE

## Nagamangala - 571432

**VISION :**

- ☞ To advance the course of education and diffusion of knowledge without distinction of caste and creed.
- ☞ To continue as a distinguished Institution fostering an atmosphere of nationalism, secular outlook, and scientific temper with humility, Integrity and Social concern.
- ☞ To create an ideal human being full of knowledge, love, and respect for society and ready to serve the nation with sacrifice and universal brotherhood.

**MISSION :**

- ☞ To develop physical, mental, moral, social and spiritual qualities among the students.
- ☞ Upliftment of economically and socially backward classes.
- ☞ To prepare students for higher education.

**OBJECTIVES :**

- ☞ Enabling the students to be the responsible citizens of the Country.
- ☞ Providing suitable teaching-learning and evaluation programme.
- ☞ To prepare the rural students for National and International competitive jobs.
- ☞ To promote higher education in the field of humanities, Commerce, Basic Science, Management, Computer Science and IT.
- ☞ To enhance the quality of teaching-learning process through continuous use of ICT.
- ☞ To cater to the needs of industry by equipping students with various skills.
- ☞ Growth & development of the community through creating a sense of civic consciousness.

# ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ (ರಿ)

## ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ನಾಗಮಂಗಲ, ಮಂಡ್ಯ ಜಿಲ್ಲೆ – 571432


## ಟ್ರಸ್ಟಿಗಳು

| | |
|---|---|
| ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ | ಅಧ್ಯಕ್ಷರು |
| ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ | ಪ್ರಧಾನ ಕಾರ್ಯದರ್ಶಿಗಳು |
| ಶ್ರೀ ಶ್ರೀ ಪ್ರಕಾಶನಾಥ ಸ್ವಾಮೀಜಿ | ಸದಸ್ಯರು |
| ಶ್ರೀ ಜಿ. ಗೋವಿಂದರಾಜು | ಸದಸ್ಯರು |
| ಶ್ರೀ ಡಿ. ದೇವರಾಜು | ಸದಸ್ಯರು |

## ಕಾಲೇಜು ಆಡಳಿತ ಮಂಡಳಿ

| | |
|---|---|
| ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ | ಅಧ್ಯಕ್ಷರು |
| ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ | ಪ್ರಧಾನ ಕಾರ್ಯದರ್ಶಿಗಳು |
| ಡಾ. ಬಿ.ಕೆ. ಲೋಕೇಶ | ಪ್ರಾಂಶುಪಾಲರು ಮತ್ತು ಕಾರ್ಯದರ್ಶಿ |
| ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿ | ಸದಸ್ಯರು |
| ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮೀಜಿ | ಸದಸ್ಯರು |
| ಶ್ರೀ ಹೆಚ್.ಟಿ.ಕೃಷ್ಣೇಗೌಡ | ಸದಸ್ಯರು |
| ಪ್ರೊ. ಬಿ.ಎಸ್. ರಾಮಕೃಷ್ಣೇಗೌಡ | ಸದಸ್ಯರು |
| ಶ್ರೀಮತಿ ಪವಿತ್ರ.ವೈ.ಕೆ., ವಿಶ್ವವಿದ್ಯಾನಿಲಯದ ನಾಮ ನಿರ್ದೇಶನ | ಸದಸ್ಯರು |
| ಅಧ್ಯಕ್ಷರು, ಪುರಸಭೆ, ನಾಗಮಂಗಲ | ಸದಸ್ಯರು |

# ಬೋಧಕ – ಬೋಧಕೇತರರು

**ಡಾ. ಬಿ.ಕೆ. ಲೋಕೇಶ,** ಎಂ.ಎ., ಪಿಎಚ್.ಡಿ.,

**ಪ್ರಾಂಶುಪಾಲರು**

**ಕನ್ನಡ ವಿಭಾಗ :**

**ಡಾ.ಎಂ.ಕೆ.ಮಂಜುನಾಥ,** ಎಂ.ಎ., ಎಂ.ಫಿಲ್., ಬಿ.ಇಡಿ., ಪಿಹೆಚ್.ಡಿ., ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಪಿ.ಜ್ಯೋತಿಲಕ್ಷ್ಮಿ,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಭೂಲಕ್ಷ್ಮಿ ಹೆಚ್.ಆರ್,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಇಂಗ್ಲಿಷ್ ವಿಭಾಗ :**

**ಎಂ.ಪಿ.ಸುನೀಲ್‌ಕುಮಾರ್,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಬಿ.ಜೆ.ಶ್ರೀಕಂಠ,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಎಸ್.ಎನ್.ಮಂಗಳಮ್ಮ,** ಎಂ.ಎ., ಸಹಾಯಕ ಪ್ರಾಧ್ಯಾಪಕರು

**ಆರ್.ಎಸ್.ನಿಸರ್ಗ,** ಎಂ.ಎ. ಸಹಾಯಕ ಪ್ರಾಧ್ಯಾಪಕರು

**ಇತಿಹಾಸ ವಿಭಾಗ :**

**ಎ.ಬಿ.ಪವಿತ್ರ,** ಎಂ.ಎ., ಎಂ.ಫಿಲ್., (ಪಿಎಚ್.ಡಿ.) ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಕೆ.ಜಿ.ರವಿವರ್ಮ,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಕೆ.ಬಿ. ಚಂದ್ರಕಲಾ,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಅರ್ಥಶಾಸ್ತ್ರ ವಿಭಾಗ :**

**ಡಾ.ಬಿ.ಕೆ.ಲೋಕೇಶ,** ಎಂ.ಎ., ಪಿಎಚ್.ಡಿ., ಸಹ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಟಿ.ಎಂ.ಮೋಹನ್‌ಕುಮಾರ್ ನಾಯ್ಕ್,** ಎಂ.ಎ., ಸಹಾಯಕ ಪ್ರಾಧ್ಯಾಪಕರು

**ಎಸ್.ಶೋಭ,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಆರ್. ಮೋಹನ ಕುಮಾರ,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ರಾಜ್ಯಶಾಸ್ತ್ರ ವಿಭಾಗ :**

**ಪ್ರೊ. ಬಿ.ಎಸ್. ರಾಮಕೃಷ್ಣೇಗೌಡ,** ಎಂ.ಎ., ಸಹ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಹೆಚ್.ಎಸ್. ವಿನಯ್‌ಕುಮಾರ್,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಸಮಾಜಶಾಸ್ತ್ರ ವಿಭಾಗ :**

**ಬಿ.ಹೆಚ್.ಕಾವ್ಯ,** ಎಂ.ಎ., ಬಿ.ಇಡಿ., (ಪಿಎಚ್.ಡಿ.,) ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು

**ಜಿ.ಕೆ.ಕುಮಾರ,** ಎಂ.ಎ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಎನ್.ಆರ್.ದೇವಾನಂದ,** ಎಂ.ಎ., ಸಹಾಯಕ ಪ್ರಾಧ್ಯಾಪಕರು

**ಭೂಗೋಳಶಾಸ್ತ್ರ ವಿಭಾಗ :**

**ಡಾ.ಎಂ.ರವಿಕುಮಾರ್,** ಎಂ.ಎ., ಪಿಎಚ್.ಡಿ., ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಜಿ.ರಾಜಣ್ಣ,** ಎಂ.ಎ., ಸಹಾಯಕ ಪ್ರಾಧ್ಯಾಪಕರು

**ವಾಣಿಜ್ಯಶಾಸ್ತ್ರ ವಿಭಾಗ :**

**ಡಾ.ಶ್ರೇಯಸ್‌ಕೃಷ್ಣನ್,** ಎಂ.ಕಾಂ., ಪಿಎಚ್.ಡಿ., ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಎಂ.ಲಲಿತಮ್ಮ,** ಬಿ.ಕಾಂ., ಎಲ್.ಎಲ್.ಬಿ., ಸಹಾಯಕ ಪ್ರಾಧ್ಯಾಪಕರು

**ಹೆಚ್.ಆರ್.ತ್ರಿವೇಣಿ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಎನ್.ಕೆ.ಹರೀಶ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಹೆಚ್.ಎಸ್.ಶ್ರೀನಿವಾಸನ್,** ಎಂ.ಬಿ.ಎ., ಸಹಾಯಕ ಪ್ರಾಧ್ಯಾಪಕರು

**ಬಿ.ಕೆ.ಅಶ್ವತ್‌ಕುಮಾರ್,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಪಿ.ಸುನೀತ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಪುಟ್ಟಲಿಂಗಮ್ಮ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಎಂ.ಅರ್ಪಿತ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಆರ್.ಪಲ್ಲವಿ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಎನ್.ಎಂ. ಲಕ್ಷ್ಮಿ,** ಎಂ.ಕಾಂ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಎನ್. ನೇಹಾಬಾನು,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಸಿ.ಕೆ. ಪೂಜಾ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಕೆ.ಎಸ್.ಲಾವಣ್ಯ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ಎನ್. ಆರ್. ವೇದಾವತಿ,** ಎಂ.ಕಾಂ., ಸಹಾಯಕ ಪ್ರಾಧ್ಯಾಪಕರು

**ರಂಜಾನ ಅರ್ಫೈನ್,** ಎಂ.ಕಾಂ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ವಾಣಿಶ್ರೀ ಕೆ.,** ಎಂ.ಕಾಂ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ಭೌತಶಾಸ್ತ್ರ ವಿಭಾಗ :**

**ಎಸ್.ಬೋರೇಗೌಡ,** ಎಂ.ಎಸ್ಸಿ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಸಿ.ಟಿ.ಚಂದ್ರಶೇಖರ,** ಎಂ.ಎಸ್ಸಿ., ಬಿ.ಇಡಿ., ಸಹಾಯಕ ಪ್ರಾಧ್ಯಾಪಕರು

**ರಸಾಯನಶಾಸ್ತ್ರ ವಿಭಾಗ :**

**ಮೇಘನಾ ಬಿ ವಿ,** ಎಂ.ಎಸ್ಸಿ., ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು

**ಶ್ವೇತಾ ಎಸ್,** ಎಂ.ಎಸ್ಸಿ., ಸಹಾಯಕ ಪ್ರಾಧ್ಯಾಪಕರು

## ಗಣಿತಶಾಸ್ತ್ರ ವಿಭಾಗ :

| | |
|---|---|
| **ಬಿ.ಜೆ.ದೀಪಾ,** ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು |
| **ಎ.ಜೆ.ಶರತ್‌ಬಾಬು,** ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

## ಗಣಕ ವಿಜ್ಞಾನ ವಿಭಾಗ :

| | |
|---|---|
| **ಎಂ.ಗುಣವತಿ,** ಎಂ.ಎಸ್ಸಿ., | ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು |

## ದೈಹಿಕ ಶಿಕ್ಷಣ ವಿಭಾಗ :

| | |
|---|---|
| **ಕೆ.ಬಿ.ಮಂಜುನಾಥ,** ಎಂ.ಪಿ.ಇಡಿ., | ದೈಹಿಕ ಶಿಕ್ಷಣ ಬೋಧಕರು |

## ಸ್ನಾತಕೋತ್ತರ ವಿಭಾಗ (ಎಂ.ಕಾಂ.) :

| | |
|---|---|
| **ನವೇರಿಯಾ ಬಾನು,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು |
| **ಎಸ್.ಯಶಸ್ವಿನಿ,** ಎಂ.ಕಾಂ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| **ಪಿ. ಇಂದುಶ್ರೀ,** ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |

## ಗ್ರಂಥಾಲಯ ವಿಭಾಗ :

| | |
|---|---|
| **ಕವಿತಾ ಬಿ.ಎಲ್,** ಎಂ.ಎಲ್ಐಎಸ್ಸಿ., | ಗ್ರಂಥಪಾಲಕರು |
| **ಎನ್.ಟಿ. ವಿಜಯಕುಮಾರ,** ಎಂ.ಎ., ಎಂ.ಲಿಬ್.ಸೈನ್ಸ್., | ಗ್ರಂಥಾಲಯ ಸಹಾಯಕರು |

# ಅಧ್ಯಾಪಕೇತರ ವರ್ಗ

| | |
|---|---|
| **ಹೆಚ್.ಆರ್.ಪಲ್ಲವಿ,** ಎಂ.ಎ, ಬಿ.ಇಡಿ., | ಕಛೇರಿ ಅಧೀಕ್ಷಕರು |
| **ಎಂ.ಎಸ್.ರವೀಂದ್ರಕುಮಾರ್,** ಎಂ.ಎಸ್ಸಿ., ಬಿ.ಇಡಿ., | ದ್ವಿತೀಯದರ್ಜೆ ಸಹಾಯಕರು |
| **ಪಿ.ಜ್ಯೋತಿ,** ಎಂ.ಕಾಂ., | ಅಕೌಂಟೆಂಟ್ |
| **ಎಸ್. ಯೋಗಿತ,** ಎಂ.ಎ, ಬಿ.ಇಡಿ., | ಕಂಪ್ಯೂಟರ್‌ಆಪರೇಟರ್ |
| **ಪಲ್ಲವಿ ಪಿ.ಬಿ,** ಬಿ.ಎ., | ಕಂಪ್ಯೂಟರ್ ಆಪರೇಟರ್ |
| **ಲೋಕೇಶ** | ಅಟೆಂಡರ್ |
| **ದಾಸಯ್ಯ** | ಜವಾನರು |
| **ಎನ್.ಆರ್.ಲೋಕೇಶ** | ಅಟೆಂಡರ್ |
| **ಎಂ.ಶಿವನಾಯಕ** | ಜವಾನರು |
| **ಪಾರ್ವತಿಬಾಯಿ** | ಆಯಾ |
| **ಮಹಾಲಕ್ಷ್ಮಮ್ಮ** | ಆಯಾ |
| **ಶಾರದ** | ಆಯಾ |

# ಸಂಪಾದಕೀಯ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಚುಂಚನಗಿರಿಯಲ್ಲಿ ಉತ್ತರ–ದಕ್ಷಿಣವಾಗಿ ಹಬ್ಬಿರುವ ಮಲೆಯ ಮಧ್ಯದಲ್ಲಿ ಕಂಗೊಳಿಸುತ್ತಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಅನ್ನದಾನಿ ಮಠವೆಂದೇ ಹೆಸರಾಗಿದೆ. ಪರಮಪೂಜ್ಯ ಜಗದ್ಗುರು ಯುಗಯೋಗಿ ಭೈರವೈಕ್ಯ ಪದ್ಮಭೂಷಣ ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಶ್ರೀಮಠದ ಸಿದ್ದಸಿಂಹಾಸನಾದೀಶ್ವರರಾದ ಮೇಲೆ ಶ್ರೀಮಠದ ಕೀರ್ತಿ ಉತ್ತುಂಗ ಶಿಖರಕ್ಕೇರಿದೆ. ಶ್ರೀ ಗುರುಪರಂಪರೆಯಲ್ಲಿ ಸಾಧುಸಂತರುಗಳು ತಪಸ್ವಿಗಳು ಅನುಷ್ಠಾನವಾಗಿ ಜೀವನದ ಪರಮಗುರಿಯನ್ನು ಸಾಧಿಸಿದ ದಿವ್ಯ ಧರ್ಮಪೀಠವಾದ ಶ್ರೀ ಆದಿಚುಂಚನಗಿರಿ ಮಠದ ಆಶ್ರಯದಲ್ಲಿ ಕಾರ್ಯಪ್ರವೃತ್ತವಾಗಿರುವ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನಲ್ಲಿ ಸ್ಥಾಪನೆಗೊಂಡಿರುವ 500ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳ ಪೈಕಿ ಮೂಡಿರುವ ಚೊಚ್ಚಲ ಕುಸುಮ ನಮ್ಮ ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು. 1975ರಲ್ಲಿ ಸ್ಥಾಪನೆಯಾದ ನಮ್ಮ ಕಾಲೇಜಿಗೆ 46 ಸಂವತ್ಸರಗಳು ಪೂರ್ಣಗೊಂಡಿದೆ.

ನಮ್ಮ ಕಾಲೇಜೊಂದು 'ಮಠಛಾತ್ರಾದಿ ನಿಲಯ'. ಉಪನ್ಯಾಸಕರೂ, ವಿದ್ಯಾರ್ಥಿಗಳೂ ಒಂದುಗೂಡಿ, ವಿದ್ಯಾರ್ಥಿಗಳ ಸ್ವಾಭಾವವನ್ನರಿತು ಅದಕ್ಕೆ ತಕ್ಕಂತೆ ಜ್ಞಾನಸಾಧನಕ್ಕಾಗಿ ಪುಸ್ತಕಾದಿ ಸಾಮಾಗ್ರಿಗಳನ್ನು, ಉಪದೇಶಗಳನ್ನು ಏರ್ಪಡಿಸಿ ಗೊತ್ತಾದ ನಿಯಮದೊಡನೆ ಅವೆಲ್ಲವೂ ಸರಿಯಾಗಿ ವಿನಿಯೋಗವಾಗಿ ನಡೆನುಡಿಗಳು ಏಕರೂಪವಾಗಿ ಆಗುವಂತೆ ಮಾಡುವುದೇ ನಮ್ಮ ಜ್ಞಾನದೇಗುಲದ ಮೂಲಭೂತ ಉದ್ದೇಶ. ಮಂಡ್ಯ ಜಿಲ್ಲೆಯ ಗ್ರಾಮೀಣ ಸೊಗಡಿನ ತಾಲ್ಲೂಕು ನಾಗಮಂಗಲ. ಇಂದಿಗೂ ನಾಗರೀಕತೆಯಿಂದ ವಂಚಿತವಾಗಿರುವ ಗ್ರಾಮೀಣ ಬದುಕಿನಿಂದ ನಮ್ಮ ವಿದ್ಯಾರ್ಥಿಗಳು ನಮ್ಮ ಕಾಲೇಜಿಗೆ ಬರುತ್ತಿದ್ದು, ಇಂತಹ ದೀನದುರ್ಬಲ ವಿದ್ಯಾರ್ಥಿಗಳಿಗೆ ಕನಿಷ್ಠ ಖರ್ಚಿನಲ್ಲಿ ಶಿಸ್ತುಬದ್ಧ ಮತ್ತು ಮೌಲ್ಯಧಾರಿತ ಉನ್ನತ ಶಿಕ್ಷಣ ನೀಡುವ ಮೂಲಕ ಅವರು ಸಮಾಜದ ಅಗತ್ಯಗಳಿಗೆ ಸ್ಪಂದಿಸುವಂತೆ ಮಾಡುವುದೇ ನಮ್ಮ ಕಾಲೇಜಿನ ಗುರಿ. ಕಾಲೇಜು ಸ್ಥಾಪನೆಯಾದಾಗಿನಿಂದ ನುರಿತ ಪ್ರಾಂಶುಪಾಲರು, ಪ್ರಾಧ್ಯಾಪಕರು ಹಾಕಿದ ಭದ್ರಬುನಾದಿಯ ಮೇಲೆ ನಿಂತಿರುವ ನಮ್ಮ ಕಾಲೇಜಿನಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಅಧ್ಯಾಪಕರ ಯುವತಂಡ ಕಾಲೇಜಿನಲ್ಲಿ ಶಿಸ್ತನ್ನು ಮೂಡಿಸುವಲ್ಲಿ ನಿರತವಾಗಿದೆ.

ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ತಪಸ್ವಿಗಳೂ ಶ್ರೀಮಠದ 72ನೇ ಸಿದ್ದಸಿಂಹಾಸನಾಧೀಶ್ವರರಾದ ಶ್ರೀಮನ್ನಿರಂಜನ ಪ್ರಣವಸ್ವರೂಪಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಆಶೀರ್ವಾದದಿಂದ,

ನಮ್ಮ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಹಾಗೂ ಶ್ರೀಮಠದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಕಾಲೇಜಿಗೆ ದಕ್ಷ ಆಡಳಿತ ಮಂಡಳಿಯನ್ನು ರಚಿಸಲಾಗಿದೆ. ಈ ಆಡಳಿತ ಮಂಡಳಿಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಬದ್ಧರಾದ ಸಮರ್ಪಕ ಭಾವದ ವ್ಯಕ್ತಿಗಳಿದ್ದು, ಸಂಸ್ಥೆಗೆ ನಿಷ್ಠರಾದ ಬದ್ಧತೆಯುಳ್ಳ ವಿಧೇಯ ನೌಕರವರ್ಗ, ಉತ್ಸುಕರಾದ ಸಹಕಾರ ಸ್ಫೂರ್ತಿಯ ಮತ್ತು ಗುಣಾತ್ಮಕ ಫಲಿತಾಂಶ ಸಾಧನೆಗೈಯುವ ಗ್ರಾಮೀಣ ವಿದ್ಯಾರ್ಥಿಕುಸುಮಗಳಿವೆ. ವಿದ್ಯಾರ್ಥಿಗಳಲ್ಲಿ ಶಿಸ್ತು, ಸದ್ವರ್ತನೆಯನ್ನು ಸಾಧಿಸುವ ಮೂಲಕ ಕಾಲೇಜು ಗುಣಾತ್ಮಕ ಶಿಕ್ಷಣ ನೀಡುವ ವಿಶಿಷ್ಟ ಲಕ್ಷಣ ಪಡೆದಿದೆ.

ಹಸಿರುಮಯವಾಗಿರುವ ವಾತಾವರಣದಲ್ಲಿ 4 ಭಾಗದಲ್ಲಿ ಭದ್ರತಾಗೋಡೆಯ ಮಧ್ಯದಲ್ಲಿ ಸುಸಜ್ಜಿತ ಕಟ್ಟಡ, ಸಭಾಂಗಣ, ಅತ್ಯುತ್ತಮವಾದ ತರಗತಿ ಕೊಠಡಿಗಳು, ವ್ಯವಸ್ಥಿತವಾದ ಪ್ರಯೋಗಾಲಯಗಳ ಜೊತೆಗೆ ಕ್ರೀಡಾ ಸಾಮಾಗ್ರಿಗಳನ್ನೊಳಗೊಂಡ ಉನ್ನತ ಮಟ್ಟದ ಮೂಲಭೂತ ಸೌಕರ್ಯಗಳು ಕಾಲೇಜಿನಲ್ಲಿ ಇವೆ. ನಮ್ಮ ಕಾಲೇಜಿಗೆ 3 ಬಾರಿ ನ್ಯಾಕ್ ಸಮಿತಿ ಭೇಟಿ ನೀಡಿದ್ದು, ನ್ಯಾಕ್‌ನಿಂದ 'ಬಿ++' ಶ್ರೇಣಿ ಲಭ್ಯವಾಗಿದೆ. 2019ರ ಅವಧಿಯಲ್ಲಿ ದೇಶದಲ್ಲಿ ಕೋವಿಡ್ ತನ್ನ ಕದಂಬ ಬಾಹುವನ್ನು ಚಾಚಿದ್ದರೂ, ಶ್ರೀ ಆದಿಚುಂಚನಗಿರಿ ಕ್ಷೇತ್ರಾಧಿದೇವತೆಗಳ ಹಾಗೂ ಸಾಧುಸಂತರುಗಳ ದಿವ್ಯಾಶೀರ್ವಾದದಿಂದ ಕಾಲೇಜಿನಲ್ಲಿ ಏರ್ಪಡಿಸಿದ್ದ ಸುರಕ್ಷತಾ ಕ್ರಮಗಳಿಂದಾಗಿ ನಮ್ಮ ಕಾಲೇಜಿನ ಯಾವುದೇ ವಿದ್ಯಾರ್ಥಿ ಹಾಗೂ ಸಿಬ್ಬಂದಿಯವರ ಮೇಲೆ ಇದರ ಹಾನಿ ಕಂಡುಬಂದಿಲ್ಲ. ಕಾಲೇಜಿನಲ್ಲಿ ಪ್ರತಿವರ್ಷ ಶೇಕಡಾ 100ಕ್ಕೆ 100 ಅಂಕ ಪಡೆದವರಿಗೆ ಕಾಲೇಜಿನಲ್ಲಿ ಗೌರವಿಸುತ್ತಾ ಬಂದಿದ್ದು, ಇದು ನಮ್ಮ ಬೋಧಕ ಸಿಬ್ಬಂದಿಯ ಬೋಧನಾ ದಕ್ಷತೆಗೆ ಹಿಡಿದ ಕೈಗನ್ನಡಿಯಾಗಿದೆ. ನಮ್ಮ ಗ್ರಾಮೀಣ ವಿದ್ಯಾರ್ಥಿಗಳು ಶೈಕ್ಷಣಿಕ ಶಿಸ್ತನ್ನು ಹೊಂದಿದ್ದು, ಅತ್ಯುತ್ತಮ ಫಲಿತಾಂಶ ನೀಡುತ್ತ ಬಂದಿದ್ದಾರೆ.

2020–21ನೇ ಸಾಲಿನಲ್ಲಿ ಕೋವಿಡ್ ಮಧ್ಯದಲ್ಲಿಯೇ ಕಾಲೇಜಿನಲ್ಲಿ ಅಂತರ್‌ಜಾಲದ ಮೂಲಕ ಒಂದು ರಾಜ್ಯಮಟ್ಟದ ಕವಿಗೋಷ್ಠಿ ಏರ್ಪಡಿಸಿ, ಯುವ ಪ್ರತಿಭಾವಂತ ಕವಿಗಳಿಗೆ ಪ್ರೋತ್ಸಾಹ ನೀಡುವ ಮೂಲಕ ನಮ್ಮ ಕಾಲೇಜಿನ ಸಾಹಿತ್ಯ ಹಿರಿಮೆಯನ್ನು ಕಾಲೇಜು ಮೆರೆದಿದೆ. ಕೋವಿಡ್ ನಮ್ಮ ಕ್ರಿಯಾಶೀಲತೆಗೆ ಅಡ್ಡಿಯೇನಲ್ಲ ಎಂಬುದಕ್ಕೆ 2020–21ನೇ ಸಾಲಿನಲ್ಲಿ ನೆರವೇರಿದ ಕಾರ್ಯಕ್ರಮಗಳು ಸಾಬೀತುಪಡಿಸಿವೆ. ಈ ಅವಧಿಯಲ್ಲಿ ಒಂದು ರಾಷ್ಟ್ರಮಟ್ಟದ ವಿಚಾರಸಂಕಿರಣ, ಒಂದು ಅಂತರ್‌ರಾಷ್ಟ್ರೀಯ ಮಟ್ಟದ ವಿಚಾರಸಂಕಿರಣ, ಮೂರು ರಾಷ್ಟ್ರಮಟ್ಟದ ಅಂತರ್‌ಜಾಲ ವಿಚಾರಸಂಕಿರಣಗಳು ಹಾಗೂ ಏಳು ರಾಜ್ಯಮಟ್ಟದ ಅಂತರ್‌ಜಾಲ ವಿಚಾರ ಸಂಕಿರಣಗಳು ಜರುಗಿರುವುದು ಇದಕ್ಕೆ ಸಾಕ್ಷೀಭೂತವಾಗಿದೆ.

ಪ್ರತಿನಿತ್ಯ ಬೆಳಗಿನ ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾಲೇಜಿನ ಚಟುವಟಿಕೆಗಳು ಆರಂಭವಾಗುತ್ತಿದ್ದು, ಕಾಲೇಜಿನಲ್ಲಿ ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ಸ್ಕೌಟ್ & ಗೈಡ್ಸ್ ಮತ್ತು ರೆಡ್‌ಕ್ರಾಸ್ ಚಟುವಟಿಕೆಗಳು ಸಕ್ರಿಯವಾಗಿವೆ.

2020–21ನೇ ಸಾಲಿನಲ್ಲಿ ಇದೆಲ್ಲಾ ಸವಿನೆನಪಿಗಾಗಿ 'ಗಿರಿ ಕುಸುಮ' ಎಂಬ ವಾರ್ಷಿಕ ಸಂಚಿಕೆಯು ಪ್ರಕಟಗೊಂಡು ನಿಮ್ಮ ಕೈಸೇರಿದೆ. ಗ್ರಾಮೀಣ ಸೊಗಡಿನ ಸುಸಂಸ್ಕೃತ ಪರಿಸರದಲ್ಲಿ ಬೆಳೆದು ಕಾಲೇಜಿನ ಸೌಲಭ್ಯಗಳನ್ನು ಬಳಸಿಕೊಂಡು ತಮ್ಮ ಕೀರ್ತಿಯನ್ನು ನಾಡಿನಾದ್ಯಾಂತ ಪ್ರಸರಿಸಲಿರುವ ಪ್ರತಿಭಾವಂತ ವಿದ್ಯಾರ್ಥಿಗಳ ಮತ್ತು ಕಾಲೇಜಿನ ಪ್ರತಿಭಾವಂತ ಸಿಬ್ಬಂದಿಗಳ ಕವನ, ಲೇಖನ, ವಿಮರ್ಶೆ, ಚುಟುಕುಗಳನ್ನೊಳಗೊಂಡು ಪರಮಪೂಜ್ಯ ಮಹಾಸ್ವಾಮೀಜಿಯವರ ದಿವ್ಯಾಶೀರ್ವಾದವನ್ನೊಳಗೊಂಡಂತೆ 'ಗಿರಿಕುಸುಮ' ಸರ್ವಾಂಗ ಸುಂದರವಾಗಿ ಹೊರಹೊಮ್ಮಿದೆ.

ಶತಮಾನದಲ್ಲಿ ಸಾಧಿಸಲಾಗುವುದನ್ನು ಕೇವಲ 2 ದಶಕಗಳಲ್ಲಿ ಸಾಧಿಸಿ ಪವಾಡ ಮೆರೆದು ನಮ್ಮೆಲ್ಲರಿಗೆ ವಿದ್ಯೆ, ಬುದ್ಧಿ ಮತ್ತು ಬದುಕನ್ನು ನೀಡಿದ ಕರ್ಮಯೋಗಿ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಭೈರವೈಕ್ಯ ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರನ್ನು ಸ್ಮರಿಸುತ್ತ, 'ಗಿರಿಕುಸುಮ'ವು ಅರಳಿ ರಾರಾಜಿಸಲು ತಮ್ಮ ದಿವ್ಯಾನುಗ್ರಹ ನೀಡಿದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಪಾದಪದ್ಮಂಗಳಿಗೆ ಅನಂತ ಪ್ರಣಾಮಗಳನ್ನು ಸಲ್ಲಿಸುತ್ತೇವೆ. ನಮ್ಮ ಕಾಲೇಜಿನ ಅಭಿವೃದ್ಧಿಗಾಗಿ ಸರ್ವರೀತಿಯಲ್ಲಿಯೂ ಸಲಹೆ–ಮಾರ್ಗದರ್ಶನ ನೀಡುತ್ತಾ ಆಶೀರ್ವದಿಸುತ್ತಾ ಬಂದಿರುವ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಗಳಿಗೆ, ಶ್ರೀಮಠದ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಗಳಿಗೆ ಹಾಗೂ ಶ್ರೀ ಆದಿಚುಂಚನಗಿರಿ ಶಾಖಾ ಮಠಗಳ ಸಾಧುಸಂತರುಗಳಿಗೂ ಹೃತ್ಪೂರ್ವಕ ಪ್ರಣಾಮಗಳು.

ನಮ್ಮ ಕಾಲೇಜಿನಲ್ಲಿ ಸುದೀರ್ಘ ಸೇವೆಸಲ್ಲಿಸಿ, ಸಮರ್ಪಣ ಮನೋಭಾವದಿಂದ ದುಡಿದು ನಿವೃತ್ತಿಗೊಂಡಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರರ ವಿಶ್ರಾಂತ ಜೀವನ ಸಂತೋಷವಾಗಿರಲೆಂದು ಹಾರೈಸುತ್ತಾ, ನಮ್ಮ ಕಾಲೇಜಿನ ಎಲ್ಲಾ ಕಾರ್ಯಕ್ರಮಗಳು ಉತ್ತಮವಾಗಿ ನಡೆಯಲು ಸಹಕರಿಸಿದ ಆಡಳಿತ ಮಂಡಳಿ, ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು, ಪೋಷಕರು, ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರ ಮತ್ತು ಸಾರ್ವಜನಿಕರಿಗೆ ಧನ್ಯತಾ ವಂದನೆಗಳು.

**ಡಾ.ಬಿ.ಕೆ.ಲೋಕೇಶ**
ಪ್ರಾಂಶುಪಾಲರು



ಎಂ.ಬಿ.ಎ & ಎಂ.ಕಾಂ.
ಸ್ನಾತಕೋತ್ತರ ಪದವಿ ಪ್ರವೇಶ
ಕುರಿತಾದ
ಪೂರ್ವಪರಿಚಯ ಕಾರ್ಯಕ್ರಮ





ಮತದಾರರ ದಿನಾಚರಣೆ
ಅಂಗವಾಗಿ ಏರ್ಪಡಿಸಿದ್ದ
ಪ್ರಬಂಧ ಸ್ಪರ್ಧೆ



ಮಳೆ ನೀರು ಸಂರಕ್ಷಣೆ
ಕುರಿತಾದ ಉಪನ್ಯಾಸ
ಕಾರ್ಯಗಾರ

# ಪರಿವಿಡಿ

## ಕನ್ನಡ ವಿಭಾಗ


| | | |
|---|---|---|
| ಮೌಲ್ಯಯುತ ಶಿಕ್ಷಣ | ಜಿ. ಜ್ಯೋತಿಲಕ್ಷ್ಮಿ | 01 |
| ವ್ಯಕ್ತಿತ್ವ | ಎನ್.ಕೆ ಹರೀಶ್ | 03 |
| ವಚನ ಸಾಹಿತ್ಯದಲ್ಲಿನ ಕಾಯಕ ಪರಿಕಲ್ಪನೆ | ಡಾ. ಎಂ.ಕೆ. ಮಂಜುನಾಥ | 05 |
| ಇರುವುದೆಲ್ಲವ ಬಿಟ್ಟು ಇಲ್ಲದೆಡೆಗೆ ತುಡಿಯುವುದೇ ಜೀವನ | ಮೋಹನ್‌ಕುಮಾರ್ ನಾಯ್ಕ್ ಟಿ.ಎಂ | 11 |
| ಯೋಗಾಸನ (ಕವಿತೆ) | ದಿವ್ಯ ಎನ್.ವಿ | 12 |
| ಬದುಕೆಂದರೆ | ಬೋರೇಗೌಡ .ಎಸ್ | 13 |
| ನಾವು ಕನ್ನಡಿಗರು (ಕವಿತೆ) | ಲಿಖಿತ್ ಚಂದನ್ ಟಿ.ಡಿ | 14 |
| ಮೂಢನಂಬಿಕೆಯೆನ್ನುವ ಆಚರಣೆಗಳಲ್ಲಿ ಅಡಗಿರುವ ವೈಜ್ಞಾನಿಕತೆ | ಸಿ.ಟಿ ಚಂದ್ರಶೇಖರ್ | 15 |
| ಸಾವಿರ ವರ್ಷಗಳ ಹಿಂದೆಯೇ ಗಗನಯಾನದ ಪರಿಚಯ ಭಾರತೀಯರಿಗೆ ತಿಳಿದಿತ್ತಾ...? | ರವಿವರ್ಮ ಕೆ.ಜಿ | 17 |
| ಸಮಯ (ಕವಿತೆ) | ದೇವರಾಜ್ ಕೆ | 19 |
| ಗಣಿತದ ಪರಿಚಯ ಮತ್ತು ಮಹತ್ವ | ದೀಪ ಬಿ.ಜೆ | 20 |
| ಸಂವಿಧಾನ ಶಿಲ್ಪಿ (ಕವಿತೆ) | ಕಾವ್ಯಪಿ.ವೈ | 21 |
| ಕಾಲದ ಮಹತ್ವ | ಭೂಲಕ್ಷ್ಮಿ .ಹೆಚ್.ಆರ್ | 22 |
| ವೀರಯೋಧರಿಗೆ ನಮನ (ಕವಿತೆ) | ಸಹನ ಆರ್ | 23 |
| ಹೆಣ್ಣು ಭ್ರೂಣ ಹತ್ಯೆ – ಸಮಸ್ಯೆ ಮತ್ತು ಸವಾಲು | ಕಾವ್ಯ.ಬಿ.ಹೆಚ್ | 24 |
| ಚುಟುಕುಗಳು | ಸಿಂಧು ಎಂ | 25 |
| ಯಾರೂ ಕದಿಯದ ಆಸ್ತಿ ಶಿಕ್ಷಣ | ಚಂದನ.ಎಂ.ಎಸ್ | 26 |
| ಚಡಪಡಿಕೆಯೇಕೆ..? (ಕವಿತೆ) | ಬೋರೇಗೌಡ ಎಸ್ | 27 |
| ಭಾಷೆಯ ಮಹತ್ವ ಮತ್ತು ನಮ್ಮ ಭಾಷೆ ಕನ್ನಡ | ಮಮತಾ ಡಿ.ಆರ್ | 28 |

| | | |
|---|---|---|
| ನಮ್ಮ ಕಾಲೇಜಿನ ಅನುಭವ | ಅನುಷ ಟಿ. ಇ | 30 |
| ನಿನ್ಕೈಹಿಡಿದು (ಕವಿತೆ) | ಚಂದನ ಎಂ.ಎಸ್ | 31 |
| ಗೌರವ ತಂದವರು | ಅರ್ಪಿತ ವಿ.ಆರ್ | 32 |
| ಚುಟುಕುಗಳು | ಗಿರೀಶ. ಎಂ. ಕಡಕೋಳ | 33 |
| ಬದಲಾವಣೆಯತ್ತ ಮುಖ ಮಾಡೋಣ | ಕಾವ್ಯ ಬಿ.ಎಂ | 34 |
| ನನ್ನ ಸವಿಗನ್ನಡ (ಕವಿತೆ) | ಡಾ.ಎಂ.ಕೆ.ಮಂಜುನಾಥ | 35 |
| ಕಣ್ಣೀರು ನನ್ನ ಗುರು | ಸಿಂಧು ವಿ ಜಿ | 36 |
| ಬೆಲೆ ಕಟ್ಟಲಾಗದ ಪ್ರೀತಿ | ಸಹನ ಆರ್ | 37 |
| ದೇಶವೆಂದರೆ ಜನರು | ಪ್ರದೀಪ್‌ಕುಮಾರ್‌ಗೌಡ .ಎಸ್ | 38 |
| ನಾಡಪ್ರಭು ಕೆಂಪೇಗೌಡ (ಕವಿತೆ) | ಉದಯ್‌ಕುಮಾರ್ .ಕೆ.ಎಸ್ | 39 |
| ಆಸೆಯ ಮಡಿಕೆ | ಮಮತ ಆರ್ | 40 |
| ಅನುಭವ | ಬಿಂದುಶ್ರೀ ಕೆ.ಆರ್ | 42 |
| ನನ್ನ ಪ್ರೀತಿಯ ಅಪ್ಪ... (ಕವಿತೆ) | ಅನುಷ ಟಿ. ಇ | 43 |
| ಅಂದು ಎಲ್ಲವನ್ನೂ ಕೊಟ್ಟವರಿಗೆ ಇಂದು ಯಾರೂ ಇಲ್ಲ | ಮಂದಾರ .ಆರ್ | 44 |
| ಮರೆಯಲಾಗದ ಸ್ನೇಹ | ಯಶೋಧ ಕೆ. ಆರ್ | 46 |
| ಕಳ್ಳನ ಕಥೆ | ಪ್ರಿಯಾಂಕ ಕೆ.ಆರ್ | 47 |
| ನಮ್ಮ ರೈತರು | ಸಂಜಯ್ ಎಸ್ | 48 |
| ವನ ಮಹೋತ್ಸವ (ಕವಿತೆ) | ಚಂದನ ಕೆ | 49 |
| ಕರೋನ ಯುಗ | ಪವಿತ್ರ ಬಿ.ಪಿ | 50 |
| ಆರೋಗ್ಯವಂತ ದೇಹಕ್ಕೆ ಸಮತೋಲನ ಆಹಾರ ಅವಶ್ಯಕ | ಸಂಧ್ಯಾ ಎಂ.ಜಿ | 52 |
| 'ನಿರ್ಮಾ ಡಿಟರ್‌ಜೆಂಟ್' ಜನಮಾನಸದಲ್ಲಿ ನೆಲೆ ಪಡೆದ ಕಥೆ | ಮಂಜುಳ ಬಿ.ಆರ್ & ಕುಸುಮ ಕೆ.ಆರ್. | 54 |
| ಕೊರೊನಾ (ಕವಿತೆ) | ಶಶಿಕಲಾ.ಕೆ.ಎನ್ | 56 |

| | | |
|---|---|---|
| ಅನ್ನದಾತನ ವೇದನೆ (ಕವಿತೆ) | ಶೋಭ ಎಸ್ | 57 |
| ಕನ್ನಡ (ಕವಿತೆ) | ಚಂದನ ಕೆ | 58 |
| ನನ್ನವಳು (ಕವಿತೆ) | ಚಂದ್ರಶೇಖರ್ ಕೆ.ಎಸ್ | 59 |
| ನಲುಗಿ ಹೋದ ಉಸಿರು (ಕವಿತೆ) | ದಿವ್ಯ ಡಿ | 61 |
| ದೇವರಿಗೊಂದು ಅರ್ಜಿ (ಕವಿತೆ) | ನಿರ್ಮಲ ಕೆ.ಎನ್ | 62 |
| ಮಾತು (ಕವಿತೆ) | ಸಂಜಯ್ ಎಸ್ | 63 |
| ಮಗುವೊಂದಾಗಬೇಕಿತ್ತು ನಾ.. (ಕವಿತೆ) | ಚಂದನ ಎಂ.ಎಸ್ | 64 |
| ಸಾವಲ್ಲೂ ನೀ ಕಾಣು ಸಗ್ಗವ... (ಕವಿತೆ) | ಕುಮಾರ ಜಿ.ಕೆ | 65 |
| ಚುಟುಕುಗಳು | ಅಶ್ವತ್‌ಕುಮಾರ್ ಬಿ.ಕೆ | 66 |
| ಆಕಾಶ–ಭೂಮಿ ಎಂಬ ಪ್ರೇಮಿಗಳ ಕಥೆ (ಕವಿತೆ) | ರಮ್ಯ ಬಿ.ಪಿ | 67 |
| ಅನ್ನದಾತ (ಕವಿತೆ) | ಉದಯ್‌ಕುಮಾರ್ ಕೆ.ಎಸ್ | 68 |
| ಚುಟುಕುಗಳು | ಸಿಂಧು ಯು.ಟಿ, | 69 |
| ಚುಟುಕುಗಳು | ಗಿರೀಶ ಎಂ. ಕಡಕೋಳ | 69 |


## ENGLISH SECTION


| | | |
|---|---|---|
| Challenges Leads to Opportunities | M.P. Sunilkumar | 70 |
| Benefaction of Vedic Era Towards Gender Equalities: An Epitome | Naveriya Banu | 72 |
| Predominance of Teaching | B.J.Shrikanta | 75 |
| Mother Earth | S.N. Mangalamma | 76 |
| The Lost Continents of Mu and Lemuria | Chethana D.S | 77 |
| “We aren't same....” | Chandana M.S | 79 |
| A Story of Two Successful Women Entrepreneurs in India | Sudha & Bindhushree A.N | 80 |
| Digital Currency | Chandana H.M & Harshith H.R | 81 |
| First in India (Women) | Vinutha Y.V & Shilpa C.S | 83 |

## ವರದಿ ವಿಭಾಗ

ರಾಷ್ಟ್ರೀಯ ಸೇವಾ ಯೋಜನೆಯ 2020–21ನೇ ಸಾಲಿನ ವಾರ್ಷಿಕ ವರದಿ 85


ವಿಜ್ಞಾನ ವಿಭಾಗದ 2020–21ನೇ ಸಾಲಿನ ವಾರ್ಷಿಕ ವರದಿ 87

2020–21ನೇ ಸಾಲಿನ ವಾರ್ಷಿಕ ಕ್ರೀಡಾ ವರದಿ 89

ಸ್ಕೌಟ್ಸ್ ಮತ್ತು ಗೈಡ್ಸ್‌ನ 2020–21ನೇ ಸಾಲಿನ ವಾರ್ಷಿಕ ವರದಿ 90

ಸಾಂಸ್ಕೃತಿಕ ವೇದಿಕೆಯ 2020–21ನೇ ಸಾಲಿನ ವಾರ್ಷಿಕ ವರದಿ 92

Industrial Visit Report 94



# ಮೌಲ್ಯಯುತ ಶಿಕ್ಷಣ

– ಜಿ. ಜ್ಯೋತಿಲಕ್ಷ್ಮಿ, ಸಹಾಯಕ ಪ್ರಾಧ್ಯಾಪಕಿ

'ಮನುಷ್ಯನ ವ್ಯಕ್ತಿತ್ವವು ಶಿಕ್ಷಣದಿಂದ ಬಯಲಿಗೆ ಬರುತ್ತದೆ' : **ಸ್ವಾಮಿ ವಿವೇಕಾನಂದ**

'ಕೈ ಕೆಸರಾದರೆ ಬಾಯಿ ಮೊಸರು', 'ಕಾಯಕವೇ ಕೈಲಾಸ' ಎಂಬ ಸತ್ಯವಾಕ್ಯಗಳಂತೆ ಮನಃಪೂರ್ವಕವಾಗಿ ಪ್ರಾಮಾಣಿಕವಾಗಿ ಮಾಡುವ ಕಾಯಕದ ಫಲ ಅಧಿಕವಾಗಿ ಇರುತ್ತದೆ. ಕಾಯಕದಿಂದ ಶ್ರದ್ಧಾಪೂರ್ವಕ, ವಿನಯಪೂರ್ವಕ ಜೀವನ ಸಾಧ್ಯವಾಗುವುದರೊಂದಿಗೆ ದೈಹಿಕ ಸ್ವಾಸ್ಥ್ಯ, ಮಾನಸಿಕ ನೆಮ್ಮದಿ ದೊರೆಯುವುದು.

ಹಿಂದಿನ ಕಾಲದಲ್ಲಿ ಗುರುಕುಲದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೂ ಮೊದಲು ಕಾಯಕವು ಮೊದಲಾಗುತ್ತಿತ್ತು. 'ಗುರುವಿನ ಕೃಪೆ ದೊರಕುವ ತನಕ ದೊರೆಯದಣ್ಣ ಮುಕುತಿ' ಎಂಬಂತೆ ಗುರುವು ಹೇಳಿದ ಕಾರ್ಯವೆಲ್ಲವನ್ನು ಚಾಚು ತಪ್ಪದೆ ಮಾಡುತ್ತಿದ್ದರು. ಇದರಿಂದಾಗಿ ಅಂದು ಮಕ್ಕಳಲ್ಲಿ ವಿನಯ, ವಿಧೇಯತೆ, ಕಾಯಕದಲ್ಲಿ ಶ್ರದ್ಧೆ, ನಿರಂತರ ಪರಿಶ್ರಮದೊಂದಿಗೆ ಅರಿವು ಮೂಡುತ್ತಿತ್ತು. ಸೋಮಾರಿತನಕ್ಕೆ ಆಸ್ಪದವಿರುತ್ತಿರಲಿಲ್ಲ. ಗುರುವು ಮಕ್ಕಳ ಮನಸನ್ನು ಅರಿತು ಬೋಧಿಸುತ್ತಿದ್ದ. 'ಕಲ್ಲನ್ನು ಶಿಲೆಮಾಡುವ ಶಿಲ್ಪಿ' ಯಂತೆ ಗುರು ತನ್ನ ಶಿಷ್ಯರನ್ನು ತಿದ್ದುತಿದ್ದ. 'ಆಚಾರ್ಯ ದೇವೋಭವ' ಎಂಬುದಕ್ಕೆ ಸರಿಯಾದ ಅರ್ಥ ದೊರೆತ್ತಿತ್ತು.

ಕಲಿಕಾ ಕೇಂದ್ರಿತವಾಗಬೇಕಾದ ಶಿಕ್ಷಣ ಇಂದು ಮಾರ್ಕ್ಸ್ ಮತ್ತು ಸರ್ಟಿಫಿಕೇಟ್ ಕೇಂದ್ರಿತವಾಗಿದೆ. ಇದಕ್ಕಾಗಿ ಮಕ್ಕಳನ್ನು ನಾಲ್ಕು ಗೋಡೆಗಳ ಮಧ್ಯೆ ಬಂದಿಯಾಗಿಸಿದ್ದೇವೆ. 'ಸವಿದ್ಯಾಯ ಸವಿಮುಕ್ತಯೇ'– ಎಲ್ಲಾ ರೀತಿಯ ಬಂಧನಗಳಿಂದ ವಿಮುಕ್ತನನ್ನಾಗಿಸುವ ವಿದ್ಯೆಯೇ ಶಿಕ್ಷಣ ಎನ್ನುವುದನ್ನು ಮರೆತಿದ್ದೇವೆ. ಜಗತ್ತಿನ ಜನರೆಲ್ಲ ಗೌರವಿಸುವ ಸಂಸ್ಕೃತಿ ನಮ್ಮದು. ಅಷ್ಟೆ ಅಲ್ಲ ನಮ್ಮ ಹಿಂದಿನ ಶಿಕ್ಷಣ ಕ್ರಮವು ಜಗಮೆಚ್ಚುವಂತದ್ದಾಗಿತ್ತು. ಆದರೆ ಅದನ್ನು ತಾತ್ಸರ ಮಾಡಿ ಪಾಶ್ಚಾತ್ಯ ಶಿಕ್ಷಣ ಕ್ರಮದ ದಾಸರಾಗಿ ವಿವೇಚನೆಯನ್ನು ಕಳೆದುಕೊಳ್ಳುತ್ತಿದ್ದೇವೆ. ಅಕ್ಷರಸ್ಥರಾಗುತ್ತಿದ್ದೇವೆಯೇ ಹೊರತು ಮೌಲ್ಯವನ್ನು ಪಡೆಯುತಿಲ್ಲ.

೧೮೩೫ರಲ್ಲಿ ಬ್ರಿಟಿಷರು ತಮ್ಮ ಸ್ವಾರ್ಥಕ್ಕೆ ತಂದ ಶಿಕ್ಷಣ ವ್ಯವಸ್ಥೆ ನಮ್ಮ ವಿವೇಚನೆಯನ್ನೇ ಕಸಿದುಕೊಂಡಿದೆ. ಇಂದು ಶಿಕ್ಷಣ ಕ್ಷೇತ್ರ ಅತಿವಿಸ್ತಾರವಾಗಿದ್ದು, ಕಲಿಕೆಗೆ ಹಲವು ವಿಷಯಗಳನ್ನು ಸಾಕಷ್ಟು ಅನುಕೂಲವನ್ನ ಮಾಡಿ ಕೊಟ್ಟಿದ್ದಲ್ಲದೆ ತಾಂತ್ರಿಕತೆಯಲ್ಲಿ, ವೈಜ್ಞಾನಿಕತೆಯಲ್ಲಿ, ಸಂಶೋಧನೆಯಲ್ಲಿ ಪ್ರಗತಿ ಹೊಂದುತ್ತಿದ್ದರೂ ನಾವು ಮೌಲ್ಯವನ್ನು ಕಳೆದುಕೊಳ್ಳುತ್ತಿದ್ದೇವೆ.

ಇಂದು ಮಠದಲ್ಲಿ ಬೆಳೆದ ಮಕ್ಕಳಿಗೂ ಇತರೆ ಮಕ್ಕಳಿಗೂ ಅವರ ನಡತೆಯಲ್ಲಿ ಬಹಳ ವ್ಯತ್ಯಾಸವನ್ನು ಕಾಣುತ್ತೇವೆ. ಗುರುಕುಲ ಶಿಕ್ಷಣ ದುಡಿದು ಬದುಕುವ ಆತ್ಮವಿಶ್ವಾಸವನ್ನು ತುಂಬುವುದರೊಂದಿಗೆ ಉತ್ತಮ ಸಮಾಜ ನಿರ್ಮಾಣಕ್ಕೆ ದಾರಿಯಾಗಿತ್ತು. ಆದರೆ ಇಂದಿನ ಶಿಕ್ಷಣ 'ಅಲ್ಪ ವಿದ್ಯೆ ಮಹಾಗರ್ವೆ' ಎಂಬಂತೆ ಸಿಗದ ಉದ್ಯೋಗಕ್ಕೆ ಅರಸುತ್ತಾ ನಮ್ಮ ಮೇಲೆ ನಮಗೇ ವಿಶ್ವಾಸವಿಲ್ಲದಂತೆ, ನಮ್ಮನ್ನು ಸೋಮಾರಿಗಳನ್ನಾಗಿ ಮಾಡಿ ಸಮಾಜದಲ್ಲಿ ದರೋಡೆ, ಕಳ್ಳತನ, ಭ್ರಷ್ಟಚಾರ, ದೇಶದ್ರೋಹದಂತಹ ಸಮಾಜ ಘಾತಕ ಚಟುವಟಿಕೆಗಳಿಗೆ ಕಾರಣವಾಗುತ್ತಿದೆ. ಇಂದು ಎಲ್ಲರಿಗೂ ಶಿಕ್ಷಣ ಪಡೆಯುವ ಅವಕಾಶವಿದ್ದರೂ ನಮ್ಮಲ್ಲಿ ದ್ವೇಷ, ಅಸೂಯೆ, ಅಸಮಾನತೆಗಳು ಕಡಿಮೆಯಾಗಿಲ್ಲ. ಇದಕ್ಕೆ ಕಾರಣ ಮೌಲ್ಯಧಾರಿತ ಶಿಕ್ಷಣದ ಕೊರತೆ ಇಲ್ಲಿ ಎದ್ದು ಕಾಣುತ್ತಿದೆ.

ವಿಶಾಲ ಅರ್ಥದಲ್ಲಿ ಶಿಕ್ಷಣವೆಂದರೆ ಸಮಾಜದ ಜ್ಞಾನ, ಹವ್ಯಾಸಗಳು, ಪದ್ಧತಿಗಳು ಮತ್ತು ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ರವಾನಿಸುವ ಪ್ರಕ್ರಿಯೆ ಆದರೆ ಇಂದು ಅದು ಅಸಾಧ್ಯವಾಗುತ್ತಿದೆ. "ನಿಜವಾದ ಶಿಕ್ಷಣವೆಂದರೆ ಮಾನವೀಯತೆಯ ವಿಕಾಸ": **ಸ್ವಾಮಿ ವಿವೇಕಾನಂದ**

ಹಾಗಾಗಿ ಮಕ್ಕಳ ಕಲಿಕಾ ಸಾಮರ್ಥ್ಯ ಅಧಿಕವಾಗಿರುವ ಸುಮಾರು 16ನೇ ವಯಸ್ಸಿನವರೆಗಾದರೂ ಅಂಕಗಳಿಂದ ಮಕ್ಕಳ ಸಾಮರ್ಥ್ಯ ಅಳೆಯುವುದನ್ನು ನಿಲ್ಲಿಸಿ, ಮೌಲ್ಯಧಾರಿತ ಕಲಿಕೆಗೆ ಹೆಚ್ಚು ಅವಕಾಶವನ್ನು ನೀಡಿ ತದನಂತರ ಇಚ್ಛಾನುಸಾರ ವೃತ್ತಿ ಶಿಕ್ಷಣವನ್ನು ಮಾನ್ಯ ಮಾಡಿದ್ದೇ ಆದರೆ ನಮ್ಮ ಸುಧಾರಣೆ ಸಾಧ್ಯ ಅಷ್ಟಲ್ಲದೆ ತಾಯಿಯ ಪೋಷಣೆ ಮಗುವಿಗೆ ಎಷ್ಟು ಮುಖ್ಯವೋ ಹಾಗೆ ಮಾತೃಭಾಷೆಯ ಮೂಲಕವೇ ಸಂಸ್ಕಾರ ಕೊಡಲು ಸಾಧ್ಯ ಎಂಬುದೂ ಅಷ್ಟೇ ಸತ್ಯ ಇದರಿಂದ ಸ್ವಾಸ್ಥ್ಯ ಸಮಾಜ ನಿರ್ಮಾಣವಾಗುವುದು. ಶಿಕ್ಷಣ ವಿದ್ಯಾರ್ಥಿಯಲ್ಲಿ ಹುದುಗಿರುವ ಸುಪ್ತ ಪ್ರತಿಭೆ ಅರಳುವಂತೆ ಮಾಡಬೇಕೆ ಹೊರತು ಅದನ್ನು ಕಮರುವಂತೆ ಮಾಡಬಾರದು.

* * * * *

ಪರಸ್ಪರ ಸಹಾಯ, ಸಹಕಾರ, ಸೋದರ ಭಾವ, ಸಮತೆ ಮುಂತಾದ ಸದ್ಗುಣಗಳಿಂದ ನಾವಿರುವ ಸ್ಥಳವನ್ನು ಸ್ವರ್ಗವನ್ನಾಗಿ ಮಾಡಬಹುದು.

**– ಡಾ|| ಬಾಲಗಂಗಾಧರನಾಥ ಮಹಾಸ್ವಾಮೀಜಿ**

ವಿದ್ಯಾರ್ಥಿ ಜೀವನ ಬಹುದೊಡ್ಡ ಕೌಶಲ್ಯದಿಂದ ಕೂಡಿದ್ದಾಗ ಮಾತ್ರ ಮಹತ್ತರವಾದುದನ್ನು ಸಾಧಿಸುವುದು ಸುಲಭ ಸಾಧ್ಯವಾಗುತ್ತದೆ.

**– ಡಾ|| ನಿರ್ಮಲಾನಂದನಾಥ ಮಹಾಸ್ವಾಮೀಜಿ**

# ವ್ಯಕ್ತಿತ್ವ

**– ಎನ್.ಕೆ ಹರೀಶ್, ಸಹಾಯಕ ಪ್ರಾಧ್ಯಾಪಕ**

ವ್ಯಕ್ತಿತ್ವವೆನ್ನುವುದು ವ್ಯಕ್ತಿಯ ವಿಶಿಷ್ಟ ಸ್ವಭಾವವಾಗಿದೆ. ಸಾಮಾನ್ಯವಾಗಿ ನಾವೆಲ್ಲರೂ ಸಹ ನಮ್ಮ ವ್ಯಕ್ತಿತ್ವ, ಗೌರವ, ಹಿರಿಮೆಯ ಬಗ್ಗೆ ನಾಲ್ಕಾರು ಜನರು ಸೃಜನಾತ್ಮಕವಾಗಿ ಮಾತನಾಡಬೇಕು ಎಂದು ಆಶಿಸುತ್ತೇವೆ. ಆದರೆ ಈ ವ್ಯಕ್ತಿತ್ವ ಎಂಬುದು ತೋರಿಕೆಯ ವಿಚಾರವಲ್ಲ. ಸಮಾಜದಲ್ಲಿ ವ್ಯಕ್ತಿಯು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾನೆ, ಸ್ಪಂದಿಸುತ್ತಾನೆ, ಇತರರೊಂದಿಗೆ ನಡೆದುಕೊಳ್ಳುವ ರೀತಿ, ಅವನ ಭಾವನೆಯನ್ನು ವ್ಯಕ್ತ ಪಡಿಸುತ್ತದೆ. ನಾವು ಬೇರೆಯವರು ನಮ್ಮನ್ನು ನೋಡಿ ಹೊಗಳಬೇಕು ಎಂಬ ಆಸೆಯಿಂದ ನಮ್ಮ ಗರಿಮೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ತೋರಿಕೆಯ ವ್ಯಕ್ತಿತ್ವ ಬಹಳ ದಿನ ಉಳಿಯುವುದಿಲ್ಲ. ಕನ್ನಡದ ಮೊಟ್ಟಮೊದಲ ವಚನಕಾರರಾದ ದೇವರ ದಾಸಿಮಯ್ಯನವರು ಡಾಂಭಿಕ ಭಕ್ತಿಯ ಬಗ್ಗೆ ಅನಾವರಣ ಮಾಡಿದಂತೆ, ನಮ್ಮ ಡಾಂಭಿಕ ವ್ಯಕ್ತಿತ್ವವು ನಿಷ್ಪ್ರಯೋಜಕವಾಗುತ್ತದೆ. ಆದ್ದರಿಂದ ನಮ್ಮಲ್ಲಿ ಸದೃಢವಾದ ವ್ಯಕ್ತಿತ್ವವನ್ನು ರೂಡಿಸಿಕೊಳ್ಳಬೇಕೇ ಹೊರತು ಅನ್ಯರಿಗಾಗಿ ರೂಢಿಸಿಕೊಂಡ ತೋರಿಕೆಯ ವ್ಯಕ್ತಿತ್ವವಲ್ಲ. ಪ್ರತಿಯೊಬ್ಬರಿಗೂ ಜೀವನದಲ್ಲಿ ಉತ್ತಮ ನೌಕರಿ ಪಡೆಯಬೇಕೆಂಬ ಹಂಬಲ ಇರುತ್ತದೆ. ಆದರೆ ನೌಕರಿ ನೀಡುವವರು ನಮ್ಮ ವ್ಯಕ್ತಿತ್ವವನ್ನು ಪರೀಕ್ಷಿಸಲು ನಮ್ಮನ್ನು ಸಂದರ್ಶನ ಮಾಡುತ್ತಾರೆ. ಅಲ್ಲಿ ನಾವು ಯಾವ ಪದವಿಯಲ್ಲಿ ಎಷ್ಟು ಸರ್ಟಿಫಿಕೇಟ್ ತೆಗೆದುಕೊಂಡಿದ್ದೇವೆ, ಎಷ್ಟು ಚಿನ್ನದ ಪದಕ ಪಡೆದಿದ್ದೇವೆ, ಯಾವ ವಿಷಯದಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಹೊಂದಿದ್ದೇವೆ ಎಂದು ನೋಡುವುದಿಲ್ಲ. ಮುಖ್ಯವಾಗಿ ನಮ್ಮ ನಡತೆ, ಹಾವಭಾವ, ವ್ಯಕ್ತಿಯ ಸ್ವಭಾವವನ್ನು ಪರೀಕ್ಷಿಸುತ್ತಾರೆ. ಇನ್ನೊಬ್ಬರ ಮನ ಮೆಚ್ಚಿಸಲು ನಮ್ಮ ವ್ಯಕ್ತಿತ್ವ ಬದಲಾವಣೆಯಾಗಬಾರದು. ನಮ್ಮ ವ್ಯಕ್ತಿತ್ವದಲ್ಲಿ ಒಂದು ಸತ್ವವಿರಬೇಕು ಮತ್ತು ಒಳ್ಳೆಯ ನಡೆ–ನುಡಿ ದೃಢವಾಗಿರಬೇಕು. ಆಗ ಮಾತ್ರ ವ್ಯಕ್ತಿಯ ಬದುಕು ಸಾರ್ಥಕವಾಗುತ್ತದೆ ಎಂದು ನನ್ನ ಆಶಯ.

ನಮ್ಮ 'ವಿದ್ಯೆ ಕಡಿಮೆಯಾಗಿದ್ದರೂ ನಡತೆ ಶುದ್ದತೆಯಿಂದ ಕೂಡಿರಬೇಕು' ಎಂಬ ನಮ್ಮ ಹಿರಿಯರ ಮಾತಿನಂತೆ ನಮ್ಮ ಸ್ವಭಾವ, ವರ್ತನೆಗಳೇ ನಮ್ಮ ವ್ಯಕ್ತಿತ್ವ ಯಾವ ರೀತಿಯದು ಎಂದು ಸೂಚಿಸುತ್ತದೆ. ಆಕಳು ಎಷ್ಟೇ ಕಪ್ಪಾಗಿದ್ದರೂ ಅದರ ಹಾಲು ಹೇಗೆ ಶುದ್ಧತೆಯಿಂದ ಕೂಡಿರುತ್ತದೆಯೋ ಅದೇ ರೀತಿ ಬಡವ–ಶ್ರೀಮಂತ, ಬಿಳಿ–ಕಪ್ಪು, ಮೇಲು–ಕೀಳು ಎಂಬುದು ಮುಖ್ಯವಲ್ಲ. ಮನುಷ್ಯನಲ್ಲಿ ಸಕಾರಾತ್ಮಕ ಆಲೋಚನೆಗಳು, ಉತ್ತಮ ನಡತೆ ಮತ್ತು ಸಮಾಜದ ಸರ್ವತೋಮುಖ ಬೆಳವಣಿಗೆಗೆ ದೊಡ್ಡ ವ್ಯಕ್ತಿತ್ವವು ಅವಶ್ಯಕವಾಗಿದೆ. ನಮಗೆ ಕೆಲವೊಮ್ಮೆ

ನಮ್ಮ ವೃತ್ತಿಯನ್ನು ನೋಡಿ ನಮ್ಮ ವ್ಯಕ್ತಿತ್ವದ ಮೇಲೆ ಕೀಳರಿಮೆ ಉಂಟಾಗಬಹುದು. ಆದರೆ ಇಲ್ಲಿ ಯಾವ ಕೆಲಸವು ಶ್ರೇಷ್ಠವಲ್ಲ, ಯಾವ ಕೆಲಸವೂ ಕನಿಷ್ಠವಲ್ಲ. ನಾವು ಯಾವತ್ತು ನಮ್ಮ ವೃತ್ತಿಯನ್ನು ಪ್ರೀತಿಸುತ್ತೇವೆ, ಗೌರವಿಸುತ್ತೇವೆಯೋ ಅಂದು ನಮ್ಮ ವ್ಯಕ್ತಿತ್ವದ ಮೇಲೆ ನಮಗೆ ನಂಬಿಕೆ ಬರುತ್ತದೆ.

ಉತ್ತಮ ವ್ಯಕ್ತಿತ್ವವಿಲ್ಲದ ಬದುಕು ತೈಲವಿಲ್ಲದ ದೀಪಕ್ಕೆ ಸಮ. ದೀಪವು ತಾನು ಉರಿದು ಮನೆಗೆ ಹೇಗೆ ಪ್ರಕಾಶಮಾನವಾದ ಬೆಳಕನ್ನು ನೀಡುತ್ತದೆ. ಅದೇ ರೀತಿ ನಮ್ಮೊಳಗಿನ ವ್ಯಕ್ತಿತ್ವವು ಸಮಾಜದಲ್ಲಿ ಇತರರೊಂದಿಗೆ ನಡೆದುಕೊಳ್ಳುವ ರೀತಿಯಲ್ಲಿ ಅಡಗಿರುತ್ತದೆ. ಒಂದು ಮಗು ಬೆಳೆದು ಶಿಕ್ಷಣ ಕಲಿತು ನೌಕರಿ ಪಡೆದು ಸಮಾಜದೊಳಗೆ ಬದುಕಿ ಉತ್ತಮ ಪ್ರಜೆಯಾಗಲು, ಆ ಮಗುವಿನ ತಂದೆ-ತಾಯಿ ಗುರುಗಳು ಇನ್ನೂ ಅನೇಕರು ಮಗುವಿನ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಶ್ರಮಪಟ್ಟಿರುತ್ತಾರೆ. ಕೆಲವೊಮ್ಮೆ ಜೀವನದಲ್ಲಿ ಸಂಭವಿಸುವ ಅನಿರೀಕ್ಷಿತ ಘಟನೆಗಳಿಂದಲೂ ಸಹ ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಕೂಡ ಬದಲಾವಣೆಯಾಗುವುದು ಸಹಜ. ಪೌಷ್ಠಿಕ ಗೊಬ್ಬರವಿದ್ದರೆ ಮರವಿರಲಿ, ಗಿಡವಿರಲಿ ಹೇಗೆ ಅದು ಬೆಳೆದು ಇನ್ನೊಬ್ಬರಿಗೆ ನೆರಳು, ಉಸಿರಾಡಲು ಗಾಳಿ ನೀಡುತ್ತದೆಯೋ, ಹಾಗೆಯೇ ಆತನು ಬೆಳೆದ ಪರಿಸರ ಮನೆಯ ವಾತಾವರಣ ಎಲ್ಲಾ ಪ್ರಮುಖ ಅಂಶಗಳು ಸಹ ವ್ಯಕ್ತಿತ್ವ ವಿಕಾಸನಕ್ಕೆ ಕಾರಣವಾಗುತ್ತವೆ. ವ್ಯಕ್ತಿತ್ವವು ಅನೇಕ ಶಕ್ತಿಗಳ ಸಂಗಮ. ಆದರ್ಶ, ಶ್ರದ್ಧೆ, ನಿಷ್ಠೆ, ದಕ್ಷತೆ, ಪರೋಪಕಾರದ ಬುದ್ಧಿ, ಪ್ರಾಮಾಣಿಕತೆ ಇವುಗಳು ವ್ಯಕ್ತಿತ್ವವನ್ನು ನಿರ್ಮಿಸುವ ಶಕ್ತಿಗಳು. ಪ್ರತಿಯೊಬ್ಬರ ಜೀವನದ ಒಳಿತು ಮತ್ತು ಕೆಡಕುಗಳಿಗೆ ಅವರೇ ಹೊಣೆಯಾಗುತ್ತಾರೆ ಮತ್ತು ಜೀವನವನ್ನು ಕಟ್ಟಿಕೊಳ್ಳುವ ಶಿಲ್ಪಿಗಳಾಗುತ್ತಾರೆ.

ನಮ್ಮಲ್ಲಿ ಅನೇಕ ಸಾಧಕರು ಮಾಡಿರುವ ಸಾಧನೆಗಳ ಮೆಲುಕು ಹಾಕುವುದಾದರೆ ಅವರ ವ್ಯಕ್ತಿತ್ವ ವಿಕಾಸನ ಹೇಗಿತ್ತು? ಅವರ ನಡೆದ ಹಾದಿಯ ಕಠಿಣತೆ ಹೇಗಿತ್ತು..... ಎಂಬುದನ್ನು ತಿಳಿಯಬೇಕು ಉದಾಹರಣೆಗೆ ತಮಿಳುನಾಡಿನ ರಾಮೇಶ್ವರಂನಲ್ಲಿ ಪತ್ರಿಕೆ ಹಾಕುತ್ತಿದ್ದ ಹುಡುಗ ವಿಜ್ಞಾನಿಯಾಗುವ ಕನಸು ಕಂಡು, ನಮ್ಮ ದೇಶದ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದ ನಿದರ್ಶನಗಳಿವೆ. ಹಾಗೆಯೇ ಸಾಮಾನ್ಯ ಕುಟುಂಬದಲ್ಲಿ ಜನಿಸಿ ಮೈಕ್ರೋಸಾಫ್ಟ್ ಉದ್ಯಮದ ಒಡೆಯನಾಗಿರುವ ಬಿಲ್‌ಗೇಟ್ಸ್‌ರವರಂತಹ ಸಾಧನೆಯ ಕಥೆಗಳು ನಮ್ಮ ಮುಂದಿವೆ. ಇಂತಹ ವ್ಯಕ್ತಿಗಳೆಲ್ಲರೂ ಸಹ ಉತ್ತಮ ದರ್ಜೆಗೆ ಏರಲು ತಮ್ಮ ಉತ್ತಮ ವ್ಯಕ್ತಿತ್ವವೇ ಕಾರಣವಾಗಿದೆ. ನಾವು ಒಂದು ದೃಷ್ಟಿಕೋನದಲ್ಲಿ ನೋಡುವುದಾದರೆ, 'ವ್ಯಕ್ತಿ ಮುಖ್ಯವಲ್ಲ-ವ್ಯಕ್ತಿತ್ವ ಮುಖ್ಯ' ಎಂದು ಅರ್ಥವಾಗುತ್ತದೆ.

* * * * *

# ವಚನ ಸಾಹಿತ್ಯದಲ್ಲಿನ ಕಾಯಕ ಪರಿಕಲ್ಪನೆ

**– ಡಾ. ಎಂ.ಕೆ. ಮಂಜುನಾಥ, ಸಹಾಯಕ ಪ್ರಾಧ್ಯಾಪಕ**

ನಮ್ಮ ಕನ್ನಡ ನಾಡಿನ ಐತಿಹಾಸಿಕ ಮಹತ್ವವಾಗಿರುವ ಘಟನೆಗಳನ್ನು ಸ್ಮರಣೆ ಮಾಡಿಕೊಂಡರೆ ನಮ್ಮ ಕಣ್ಣಮುಂದೆ ಹನ್ನೆರಡನೇ ಶತಮಾನದಲ್ಲಿ ಭವ್ಯ ಸಮಾಜ ನಿರ್ಮಾಣಕ್ಕಾಗಿ ಸಂಘಟಿತ ಹೋರಾಟವಾಗಿ ಮೂಡಿಬಂದ ವಚನಕಾರರ ಚಳವಳಿ ನೆನಪಾಗುತ್ತದೆ. ಈ ಚಳವಳಿಯು ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ, ಮೊದಲಾದ ಕ್ಷೇತ್ರಗಳಲ್ಲಿ ಅಮೂಲಾಗ್ರವಾಗಿ ಬದಲಾವಣೆ ತರುವ ನಿಟ್ಟಿನಲ್ಲಿ, ಸಮಾನತೆಯ ಪರಿಕಲ್ಪನೆಯ ಜೊತೆಗೆ ನಿಜವಾದ ಮನುಷ್ಯ ಧರ್ಮದ ಸ್ಥಾಪನೆಗಾಗಿ ಜನಸಾಮಾನ್ಯರ ಆಂದೋಲನವಾಗಿ ಬೆಳೆದುಬಂತು. ಜೊತೆಗೆ ಅಂದು ಬಸವಾದಿಯಾಗಿ ಎಲ್ಲಾ ವಚನಕಾರರು 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಅಪಾರವಾಗಿ ನಂಬಿ, ಈ ತತ್ವದಡಿಯಲ್ಲೇ ತಮ್ಮ ಬದುಕನ್ನ ಸವೆಸಿದರು. ದುಡಿಮೆಯ ಮಹತ್ವವನ್ನು ಇಡೀ ಜಗತಿಗೆ ಸಾರಿದರು.

ಕಾಯಕವೆಂದರೆ ಪ್ರತಿಯೊಬ್ಬ ವ್ಯಕ್ತಿಯು ಏನಾದರೊಂದು ದೈಹಿಕ ಶ್ರಮದ ಮೂಲಕ ಸಂಪಾದನೆ ಮಾಡಿ ಜೀವನ ನಡೆಸಬೇಕು. ಸೋಮಾರಿಯಾಗಿ ಕಾಲ ಕಳೆಯದೆ ಕಷ್ಟಪಟ್ಟು ದುಡಿದು ಬದುಕುವುದರಿಂದ ಹಣ ಸಂಪಾದನೆ ಸಾಧ್ಯ. 'ಕೂತು ಉಣ್ಣುವವನಿಗೆ ಕುಡುಕೆ ಹೊನ್ನೂ ಸಾಲದು' ಎಂಬಂತೆ ಇರುವ ಆಸ್ತಿ ಕರಗಿದ ಮೇಲೆ ಕಷ್ಟ ಪಡಬೇಕಾಗುತ್ತದೆ. ಆದ್ದರಿಂದ ಕಷ್ಟಪಟ್ಟರೆ ಸುಖವಿದೆ ಎಂಬುದು ಈ ಗಾದೆಯ ಆಶಯವಾಗಿದೆ. 'ದುಡಿಮೆಯೇ ದುಡ್ಡಿನ ತಾಯಿ', 'ಕೈಕೆಸರಾದರೆ ಬಾಯಿ ಮೊಸರು', 'ಆಳಾಗಬಲ್ಲವನು ಅರಸಾಗಿ ಬಾಳುವನು' ಎಂಬಂತಹವುಗಳು ಕಾಯಕವೇ ಕೈಲಾಸ ಎಂಬ ಕಾಯಕದ ಮಹತ್ವವನ್ನು ತಿಳಿಸಿಕೊಡುವ ಗಾದೆ ಮಾತುಗಳಾಗಿವೆ.

ಕಾಯಕವೆಂಬುದು ಮಾನವನ ದೈಹಿಕ ಮತ್ತು ಬೌದ್ಧಿಕ ಶಕ್ತಿಯನ್ನು ಹೆಚ್ಚಿಸುವ ಮಾರ್ಗವಾಗಿದೆ. ಪ್ರತಿಯೊಬ್ಬರ ಜೀವನಕ್ಕೆ ಕಾಯಕವೇ ಮೂಲಾಧಾರವಾಗಿದೆ. ಅದು ಯಾವುದೇ ಕಾಯಕವಾದರೂ ಸತ್ಯ ಪ್ರಾಮಾಣಿಕತೆಯಿಂದ ಮಾಡುವುದು ಪ್ರತಿಯೊಬ್ಬರ ಕರ್ತವ್ಯ ಕೂಡ ಹೌದು. ಯಾವುದೇ ಬಗೆಯ ವೃತ್ತಿಯಿರಲಿ ಅದು ಬದುಕಿನ ಅನುಭಾವ ನೀಡುತ್ತದೆ. ಯಾರು ಸತ್ಯ ಪ್ರಾಮಾಣಿಕತೆಯಿಂದ ಕಾಯಕ ಮಾಡುವರೋ ಅವರ ಜೀವನ ನೆಮ್ಮದಿಯಿಂದ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಈ ಕಾರಣಕ್ಕಾಗಿ ಹನ್ನೆರಡನೇ ಶತಮಾನದ ಬಸವಾದಿ ಶರಣರು ಕಾಯಕವೇ ಕೈಲಾಸ ಎಂಬ ತತ್ವಕ್ಕೆ ಹೆಚ್ಚಿನ ಮಹತ್ವ ನೀಡಿರುವುದನ್ನು ಕಾಣುತ್ತೇವೆ. ಪ್ರತಿಯೊಬ್ಬರೂ ತಮ್ಮ ತಮ್ಮ ಜೀವನೋಪಾಯಕ್ಕಾಗಿ ಒಂದು ವೃತ್ತಿಯನ್ನು ಮಾಡಲೇಬೇಕು.

ಮಾಡುವ ಕೆಲಸದಲ್ಲಿಯೇ ದೇವರನ್ನು ಕಾಣಬೇಕು. ಕಾಯಕವೇ ಪೂಜೆ, ಕಾಯಕವೇ ದೇವರು. ಕಾಯಕದಲ್ಲಿಯೇ ಕೈಲಾಸವನ್ನು ಕಾಣಬೇಕೆಂದು ಹೇಳಿದವರು ಕಾಯಕ ಕ್ರಾಂತಿಯ ರೂವಾರಿ, ಸಮಾನತೆಯ ಯುಗಪುರುಷ, ಭಕ್ತಿಭಂಡಾರಿ ಎಂದೇ ಪ್ರಸಿದ್ಧರಾಗಿರುವ ಬಸವಣ್ಣನವರು.

ಶರಣರಲ್ಲಿ ಬಸವಣ್ಣನವರು ಸಮಾನತೆಯನ್ನು ಮತ್ತು ಮೌಲ್ಯದ ಸಿದ್ಧಾಂತ ಮತ್ತು ಶರಣರ ದೃಷ್ಟಿಯಲ್ಲಿ ಯಾವ ಕಾಯಕವೂ ಚಿಕ್ಕದಲ್ಲ ಅಥವಾ ದೊಡ್ಡದಲ್ಲ ಎಂಬ ಮನೋಭಾವ ಅವರ ಮನಸ್ಸಿನಲ್ಲಿ ಮೂಡುವಂತೆ ಸತ್ಯದ ಸೈದ್ಧಾಂತಿಕ ವಿಚಾರಗಳು ಸಮಸ್ತ ಶರಣ ಬಳಗದಲ್ಲಿ ತುಂಬಿದ್ದಾರೆ. ಅನೇಕ ಶರಣರು ವೃತ್ತಿಯಲ್ಲಿ ಬೇರೆಯಾದರೂ ಕಾಯಕ ಸಾಧನೆ ಮಾರ್ಗದಲ್ಲಿ ಒಂದೇ ಆಗಿದ್ದರು. ಅವರಲ್ಲಿ ಪ್ರಮುಖ ಶರಣರು ಅಂದರೆ ಮಡಿವಾಳ ಮಾಚಯ್ಯ, ಮೇದರ ಕೇತಯ್ಯ, ಹಡಪದ ಅಪ್ಪಣ, ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಸುಂಕದ ಬಂಕಣ್ಣ, ತಳವಾರ ಕಾಮಿದೇವ, ಗಾಣದ ಕನ್ನಪ್ಪ, ವೈದ್ಯ ಸಂಗಣ್ಣ, ಸೂಜಿಕಾಯಕದ ರಾಮಿತಂದೆ, ಬಾಚಿಕಾಯಕದ ಬಸಪ್ಪ, ಕೊಟ್ಟಣದ ರೇಮವ್ವೆ, ಮೋಳಿಗೆ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ ಮೊದಲಾದವರು ತಮ್ಮ ಹೆಸರಿನ ಹಿಂದೆ ತಾವು ಜೀವನೋಪಾಯಕ್ಕಾಗಿ ಮಾಡುವ ಕಾಯಕ ಉಲ್ಲೇಖವನ್ನು ಅಭಿಮಾನದಿಂದಲೇ ಮಾಡಿಕೊಂಡಿರುವುದನ್ನು ಕಾಣಬಹುದು.

ಇಡೀ ಬ್ರಹ್ಮಾಂಡವು ಕಾಯಕ ತತ್ವದ ಮೇಲೆಯೇ ನಿಂತಿದೆ. ಭೂಮಿಯು ಸೂರ್ಯನ ಸುತ್ತ ತಿರುಗುವ ಕಾಯಕ ಮಾಡುವುದು. ಸೂರ್ಯನು ಬೆಳಕನ್ನು ಇಡೀ ಜಗತ್ತಿಗೆ ತಲುಪಿಸುವ ಕಾಯಕ ಮಾಡುವನು. ಚಂದ್ರ ರಾತ್ರಿಯ ಸಮಯದಲ್ಲಿ ಬೆಳದಿಂಗಳನ್ನು ಚೆಲ್ಲುವ ಕಾಯಕ ಮಾಡುವನು. ನದಿಗಳು ಸಮುದ್ರ ಸೇರುವ ಕಾಯಕದಲ್ಲಿ ತೊಡಗಿವೆ. ಸೂರ್ಯನ ತಾಪಕ್ಕೆ ಸಮುದ್ರದ ನೀರು ಆವಿಯಾಗುವುದು, ಮೋಡವಾಗುವುದು, ಮಳೆಯಾಗುವುದು, ಸಕಲ ಜೀವರಾಶಿಗೆ ನೀರಾಗುವುದು. ನದಿಗಳು ಮತ್ತೆ ತುಂಬಿ ಹರಿಯುವುದು, ಸಮುದ್ರದ ಕಡೆಗೆ ಹರಿಯುವವು. ರೈತರು ಬೆಳಗಿನಿಂದ ಸೂರ್ಯಾಸ್ತದವರೆಗೂ ಹೊಲಗಳಲ್ಲಿ ಕಾಯಕ ಮುಗಿಸಿ ಮನೆಗೆ ಬಂದರೂ ಎರೆಹುಳುಗಳು ಅವರ ಭೂಮಿಯನ್ನು ಹದಗೊಳಿಸುವ ಕಾಯಕವನ್ನು ಮಾಡುತ್ತಲೇ ಇರುತ್ತವೆ. ಗಿಡಮರಗಳು ಹೂಹಣ್ಣು ನೀಡುವ ಕಾಯಕದ ಜೊತೆಗೆ ಜೀವರಾಶಿಗಳಿಗೆ ಪ್ರಾಣವಾಯುವನ್ನು ಒದಗಿಸುವ ಕಾಯಕವನ್ನು ಸತತವಾಗಿ ಮಾಡುತ್ತಲೇ ಇರುತ್ತವೆ.

ಹೀಗೆ ಪ್ರಕೃತಿಯ ಪ್ರತಿಯೊಂದು ಚರಾಚರ ವಸ್ತುಗಳು ತಮ್ಮನ್ನು ಕಾಯಕದಲ್ಲಿ ತೊಡಗಿಸಿಕೊಂಡಿವೆ. ಇದಕ್ಕೆ ಮನುಷ್ಯ ಕೂಡ ಹೊರತಲ್ಲ. ಆದರೆ ಮಾಡುವ ಕಾಯಕದಲ್ಲಿ ಶುದ್ಧತೆ ಇರಬೇಕು. ಲೋಕದ ಒಳಿತಿಗಾಗಿ ಕಾಯಕದಲ್ಲಿ ತೊಡಗಿ ಅದರ ಉತ್ಪನ್ನವನ್ನು

ಲೋಕಕ್ಕೆ ಅರ್ಪಿಸಬೇಕು. ಕಾಯಕದ ಮೂಲಕ ಗಳಿಸಿದ್ದೆಲ್ಲ ನಮಗಾಗಿ ಅಲ್ಲ. ನಮ್ಮ ಅವಶ್ಯಕತೆ ಮೀರಿ ಉಳಿದಿದ್ದನ್ನು ಸಮಾಜಕ್ಕೆ ನೀಡಬೇಕು. ಕಾಯಕ ಮತ್ತು ದಾಸೋಹಗಳ ಮೂಲಕ ಕೈಲಾಸ ಕಾಣಬೇಕು ಎಂಬುದು ವಚನಕಾರರ ಅಚಲವಾದ ನಂಬಿಕೆಯಾಗಿತ್ತು. ನಮ್ಮ ದೈಹಿಕ ಹಾಗೂ ಬೌದ್ಧಿಕ ಶಕ್ತಿಯನ್ನು ಕಾಯಕವು ವೃದ್ಧಿಗೊಳಿಸುತ್ತದೆ. ಕಾಯಕವು ನಮ್ಮ ಆರೋಗ್ಯ ಮತ್ತು ಸೌಂದರ್ಯವನ್ನು ಕಾಪಾಡುತ್ತದೆ. ಮಾನಸಿಕ ಒತ್ತಡಗಳು ನಿವಾರಣೆ ಮಾಡುವುದಲ್ಲದೇ, ಪರಾವಲಂಬಿಗಳಾಗದಂತೆ ನೋಡಿಕೊಳ್ಳುತ್ತದೆ.

ಕಾಯಕ ಮಾಡುವಲ್ಲಿ ಹಣದ ಆಸೆ ಇರಬಾರದು. ಕೇವಲ ಜೀವನೋಪಾಯಕ್ಕೆ ಮಾತ್ರ ಕಾಯಕವಿರಬೇಕು. ಮಾಡುವ ಕಾಯಕದಲ್ಲಿ ನಿಷ್ಠೆಯಿರಬೇಕು.

'ಹಾಗದ ಕಾಯಕವ ಮಾಡಿ ಹಣವಡ್ಡುವ
ತಾ ಎಂಬಲ್ಲಿ ಸತ್ಯದ ಕಾಯಕವುಂಟೆ?'

ಎಂದು ಆಯ್ದಕ್ಕಿ ಮಾರಯ್ಯನವರು ಪ್ರಶ್ನೆ ಮಾಡಿದ್ದಾರೆ. ಮನುಷ್ಯನ ತನ್ನ ಕಾಯದಿಂದ ಮಾಡುವ ಕ್ರಿಯೆ ವಚನಕಾರರಲ್ಲಿ ಕಾಯಕ. ಅದಕ್ಕೂ ದೈವೀಭಾವದ ಸ್ಪರ್ಶವೇ ಅಡಕವಾಗಿದೆ. ಆದುದರಿಂದಲೇ ವಚನಕಾರರು ಲೌಕಿಕ ಬದುಕಿನಲ್ಲಿ ಮಾಡುವ ಕಾಯಕ ಅವರ ಆಧ್ಯಾತ್ಮಿಕ – ಅನುಭಾವಿಕ ಸಾಧನೆಗೂ ಸಂಕೇತವಾಗಿ ನಿಲ್ಲುವುದನ್ನು ಕಾಣಬಹುದು.

'ಅಂಗವೆ ಭೂಮಿಯಾಗಿ, ಅಂಗವೆ ಬೆಳೆಯಾಗಿ
ವಿಶ್ವಾಸವೆಂಬ ಭತ್ತ ಒಲಿದು ಉಂಡು
ಸುಖಿಯಾಗಿರಬೇಕೆಂದ'

ಎಂದು ವಚನಕಾರ ಒಕ್ಕಲಿಗರ ಮುದ್ದಣ ತನ್ನ ಕೃಷಿಕಾಯಕದಿಂದಲೇ ದೇವರನ್ನು ಸಾಕ್ಷತ್ಕರಿಸಿಕೊಂಡು ಸಂತೋಷದ ಜೀವನವನ್ನು ಕಂಡುಕೊಂಡಿದ್ದನು ತಿಳಿಸುತ್ತಾನೆ. ಅದೇ ರೀತಿ ವಚನಕಾರ ಅಂಬಿಗರ ಚೌಡಯ್ಯನವರು,

'ಅಂಬಿಗ ಅಂಬಿಗ ಎಂದು ಕುಂದ ನುಡಿಯದಿರು,
ನಂಬಿದರೆ ಒಂದೆ ಹುಟ್ಟಲಿ
ಕಡೆಯ ಹಾಯಿಸುವನಂಬಿಗ'

ಎಂದು ತನ್ನ ಅಂಬಿಗ ವೃತ್ತಿಯನ್ನು ಪ್ರಸ್ತಾಪಿಸುತ್ತಾರೆ. ಮಾಡುವ ಕಾಯಕದ ಮೂಲಕ ಮಾಡಬೇಕಾದ ಆಧ್ಯಾತ್ಮಿಕ ಅಥವಾ ಅನುಭಾವಿಕ ಕಾಯಕದೆಡೆಗೆ ವಚನಕಾರರು ವಚನ ಸೇತುವಿನ ಮೂಲಕ ನಡೆದು ಹೋಗುತ್ತಾರೆ.

ವಚನಕಾರರಲ್ಲಿ ತಾವು ಮಾಡುವ ಕಾಯಕದಲ್ಲಿ ಮೇಲು-ಕೀಳು ಎಂಬ ಭಾವವಿರಲಿಲ್ಲ. ಹೆಣ್ಣು-ಗಂಡು ಎಂಬ ಭೇದವಿಲ್ಲ. ಹೆಣ್ಣಾಗಲಿ. ಗಂಡಾಗಲಿ ಕಾಯಕದಲ್ಲಿ ತೊಡಗಲೇಬೇಕು. ಆದ್ದರಿಂದಲೇ ಕಾಯಕದ ಮಹತ್ವವನ್ನು ಎಲ್ಲಾ ಶಿವಶರಣರು ಸಮಾನವಾಗಿ ಸಾರಿದ್ದಾರೆ. 'ಆವ ಕಾಯಕ ಮಾಡಿದೊಡೆ ಒಂದೇ ಕಾಯಕ(ಆವ ವ್ರತವಾದರೂ ಒಂದೇ ವ್ರತವಯ್ಯಾ)' ಎಂಬ ಪುಣ್ಯಸ್ತ್ರೀ ಗಂಗಮ್ಮರವರು ಹೇಳಿದಂತೆ ಯಾವ ಕಾಯಕ ಮಾಡಿದರೂ ಅದು ಒಂದೇ. ಅದರಲ್ಲಿ ಮೇಲು-ಕೀಳು ಎಂಬುದಿಲ್ಲ. ಕಾಯಕದ ಶ್ರೇಷ್ಠತೆ ಎಂತದ್ದು ಎಂದು ಸಾರಿದ್ದಾಳೆ. ಕಾಯಕ ಮಹತ್ವವನ್ನು ತಿಳಿದುಕೊಂಡಿದ್ದ ಬಸವಣ್ಣನವರು,

'ಎಮ್ಮ ತಾಯಿ ನಿಂಬಿಯವ್ವೆ ನೀರನೆರೆದುಂಬಳು,
ಎಮ್ಮಯ್ಯ ಚೆನ್ನಯ್ಯ ರಾಯಕಂಪಣವ ಹೇರುವ,
ಎಮಗೆ ಆರೂ ಇಲ್ಲವೆಂಬಿರಿ,
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು,

ಎಮಗೆ ಆರೂ ಇಲ್ಲವೆಂಬಿರಿ,
ಎಮ್ಮ ಅಜ್ಜರ ಅಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ,
ಕೂಡಲಸಂಗಮದೇವಾ.'

ಎಂಬ ವಚನದಲ್ಲಿ ಆತ್ಮಗೌರವದ ಕಾಯಕದ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ. ಜೀವನ ಸಾಗಿಸಲು ಮಾಡುವ ಯಾವುದೇ ರೀತಿಯ ಕಾಯಕವಿರಲಿ, ಈ ಕಾಯಕದಲ್ಲಿ ಬೇಧಭಾವ ಮಾಡಬಾರದು ಎಂಬ ನಿಲುವು ಹೊಂದಬೇಕು ಎಂದು ತಿಳಿಸಿದ್ದಾರೆ.

ಬಸವಣ್ಣನವರ ಕಾಯಕ ತತ್ವದ ಪ್ರೇರಣೆಯಿಂದ ಶರಣೆಯರು ತಾವು ಮಾಡುವ ಕಾಯಕಗಳಲ್ಲೇ ಸಂತೃಪ್ತಿ ಮನೋಭಾವನೆಯನ್ನು ಹೊಂದಿದ್ದರು. ಉದಾಹರಣೆಗೆ: ಲಕ್ಕಮ್ಮ ಬಿದ್ದ ಅಕ್ಕಿಗಳನ್ನು ಆಯ್ದು ತರುವ ಕಾಯಕ, ಮೋಳಿಗೆ ಮಹಾದೇವಿ ಕಟ್ಟಿಗೆ ಹೊತ್ತು ತರುವ ಕಾಯಕ, ರಾಯಮ್ಮ ಅಮುಗೆ ಕಾಯಕ, ರೇಮವ್ವೆ ಕದಿರಿನಿಂದ ನೂಲು ತೆಗೆಯುವ ಕಾಯಕ, ನಿಂಬವ್ವೆ ನೀರು ಹೊರುವ ಕಾಯಕ, ಕೊಟ್ಟಣದ ಸೋಮಮ್ಮ, ಕನ್ನಡಿ ಕಾಯಕದ ರೇವಮ್ಮೆ ಮೊದಲಾದ ಶರಣೆಯರು ವಿವಿಧ ಕಾಯಕಗಳನ್ನು ಮಾಡಿ ತಮ್ಮ ಬದುಕನ್ನ ಸಾರ್ಥಕ ಮಾಡಿಕೊಂಡರು. ಸ್ತ್ರೀ ಅವಲಂಬಿತಳಲ್ಲ ಅನ್ನುವುದನ್ನು ತೋರಿಸಿಕೊಟ್ಟು ಕಾಯಕ ತತ್ವದ ಮೂಲಕ ಆರ್ಥಿಕ ಸ್ವಾತಂತ್ರ್ಯ ಅನುಭವಿಸಿದರು. ವಚನಕಾರರೆಲ್ಲಾ ತಮ್ಮ ಕಾಯಕಗಳ ಹೆಸರುಗಳನ್ನು ಅಭಿಮಾನದಿಂದ ಉಳಿಸಿಕೊಂಡರು. ಆದರೆ ಆ ಕಾಯಕಗಳ ಒಳಗೆ ಇದ್ದ ಜಾತಿವಿಷವನ್ನು ಹೊರಹಾಕಿದರು. ಹೀಗೆ ಶರಣರಲ್ಲಿ ಸಮಗಾರ, ಮಾದಾರ, ಮೇದಾರ,

ಡೋಹರ, ಅಂಬಿಗ ಮುಂತಾದ ಪದಗಳು ಜಾತಿ ಸೂತಕವನ್ನು ಕಳೆದುಕೊಂಡು ಕಾಯಕ ಸೂಚಕಗಳಾಗಿ ಉಳಿದವು.

ಕಾಯಕ ನಮ್ಮ ಜೀವನದ ಉಸಿರಾದರೆ ಜ್ಞಾನ ತಂತಾನೇ ವೃದ್ಧಿಗೊಂಡು ಶರಣನಾಗಿಸುತ್ತದೆ ಎಂದು ಬಸವಾದಿ ಶರಣರು ಕಾಯಕ ಬದುಕಿನ ಕುರಿತು ವಿಶಿಷ್ಟವಾದ ನೆಲೆಯಲ್ಲಿ ಅದ್ಭುತವಾದ ಚಿಂತನೆಗಳನ್ನು ತಿಳಿಸಿದ್ದಾರೆ.

'ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು
ಜಂಗಮವಾದರೂ ಕಾಯಕದಿಂದಲೇ ವೇಷಪಾಶ ಹರಿವುದು
ಇದು ಚೆನ್ನಬಸವಣ್ಣಪ್ರಿಯ ಚಂದೇಶ್ವರ ಲಿಂಗದ ಅರಿವು'

ಎಂಬ ವಚನದ ಮೂಲಕ ವಚನಕಾರ ನುಲಿಯ ಚಂದಯ್ಯನವರು ಪ್ರತಿಯೊಬ್ಬರಿಗೂ ಕಾಯಕವೇ ಆಧಾರ. ಗುರುವಾದರೂ ಸರಿಯೇ ಕಾಯಕದಿಂದಲೇ ಆತನ ಜೀವನಕ್ಕೆ ಮುಕ್ತಿ ಸಿಗುತ್ತದೆ. ಲಿಂಗಕ್ಕೆ ಶಿಲೆಯ ಕುಲ ಹರಿವುದು, ಜಂಗಮನ ವೇಷಪಾಶ ಹರಿವುದು ಕಾಯಕದಿಂದಲೇ ಎನ್ನುತ್ತಾರೆ. ಗುರು-ಜಂಗಮ-ಸಾಮಾನ್ಯನೇ ಆಗಿರಲಿ ಕಾಯಕವಿಲ್ಲದೆ ಬದುಕಿಲ್ಲ ಎಂದಿದ್ದಾರೆ. ಹೀಗೆ ಕಾಯಕದಿಂದಲೇ ದೇವರನ್ನು ಸಾಕ್ಷತ್ಕರಿಸಿಕೊಳ್ಳಬಹುದು.

ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿ ದುಡಿದರು. 'ಹೊತ್ತಾರೆ ಎದ್ದು ಕಣ್ಣ ಹೊಸವುತ್ತ, ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದೊಡೆ ಎನ್ನ ಮನಕ್ಕೆ ಮನವೇ ಸಾಕ್ಷಿ ಎಂದವರು ತಮ್ಮ ಕಾಯಕದ ಬಗ್ಗೆ ಉದ್ಗಾರವೆತ್ತಿದ್ದಾರೆ. 'ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲ ಸಂಗಯ್ಯನೆಂಬೆ' ಎಂಬ ವಚನದ ಮೂಲಕ ಇನ್ನೊಬ್ಬರ ಹಂಗಿನಲ್ಲಿ ಬಾಳುವ ಜೀವನವನ್ನು ಬಸವಣ್ಣನವರು ನಿಷ್ಠುರವಾಗಿ ಖಂಡಿಸುತ್ತಾರೆ.

ಮಾಡುವ ಕಾಯಕದಲ್ಲಿ ಸತ್ಯ ಶುದ್ಧತೆಗಳು ಪ್ರಮುಖವಾದವುಗಳೆಂಬುದನ್ನು ವಚನಕಾರರ ವಚನಗಳಿಂದ ತಿಳಿಯುತ್ತದೆ. ಈ ಕುರಿತಂತೆ ಬಸವಣ್ಣನವರು ವಚನವೊಂದರಲ್ಲಿ,

'ಗುರುಲಿಂಗ ಜಂಗಮದ ಹೆಸರಿನಿಂದ ಕಾಯಕವ ಮಾಡಿ
ಗುರುಜನಕೆ ವಂಚಿಸಿದೊಡೆ ಭಕ್ತದ್ರೋಹಿ ನೋಡಾ
ಕೂಡಲಸಂಗಮದೇವಾ'

ಎಂಬಂತೆ ಗುರು, ಲಿಂಗ, ಜಂಗಮ ಎಂಬ ಹೆಸರಿನಿಂದ ಕಾಯಕವನ್ನು ಮಾಡಿ ಗುರುಜನರಿಗೆ ವಂಚನೆ ಮಾಡುವ ಭಕ್ತದ್ರೋಹಿಯನ್ನು ಖಂಡಿಸುತ್ತಾರೆ. ಅದೇರೀತಿ ಮೆರೆಮಿಂಡಯ್ಯ ಎಂಬ ವಚನಕಾರರು,

'ಅಸಿಯಾಗಲಿ ಕೃಷಿಯಾಗಲಿ,
ವಾಚಕ ವಾಣಿಜ್ಯ ಮಸಿಯಾಗಲಿ
ಮಾಡುವಲ್ಲಿ ಹುಸಿಯಿಲ್ಲದಿರಬೇಕು
ಅದು ಅಸಮಾಕ್ಷನ ಬರವು, ಪಶುಪತಿಯ ಇರವು,
ಐಘಟದೂರ ರಾಮೇಶ್ವರಲಿಂಗ ತಾನೆ.'

ಎಂಬ ವಚನದಲ್ಲಿ ಮಾಡುವ ಯಾವುದೇ ರೀತಿಯ ಕಾಯಕದಲ್ಲಿ ಹುಸಿ ಇರಬಾರದು, ದೈವ ಸಾಕ್ಷತ್ಕರಿಸಲು ಪ್ರಮಾಣಿಕತೆಯಿಂದ ಕೂಡಿರಬೇಕು ಎಂದಿದ್ದಾರೆ. ತನು ಮನಗಳಿಂದ ಮಾಡುವ ಕೆಲಸ, ನಿಷ್ಠೆ ಪ್ರಮಾಣಿಕತೆಗಳಿಂದ ಕೈಗೊಳ್ಳುವ ಕಾರ್ಯವು ಅದು ಯಾವುದಾಗಿದ್ದರೂ ಕಾಯಕವೆನಿಸಿಕೊಳ್ಳುತ್ತದೆ.

'ಕಾಯಕವೆಂದರೆ ಕಾಯವ ಬಳಲಿಸದೆ
ತನು ಕರಗದೆ ಮನ ನೋಯದೆ
ಕಾಡಿ ಬೇಡಿ ಮಾಡುವುದು ದಾಸೋಹವೆ?'

ಶಿವಲೆಂಕ ಮಂಚಣ್ಣನವರು ಈ ವಚನದಲ್ಲಿ ಸೋಮಾರಿಯಾಗಿದ್ದು, ನಿಷ್ಠೆಯಿಂದ ಕಾಯಕ ಮಾಡದೆಯೇ, ಅನ್ಯರ ಸಂಪಾದನೆಯಲ್ಲಿ ದಾಸೋಹ ಮಾಡುವುದನ್ನು ಪ್ರಶ್ನೆ ಮಾಡುತ್ತಾರೆ. ಹೀಗೆ ಪ್ರಾಮಾಣಿಕವಾದ ಕಾಯಕದ ಜೊತೆಗೆ ದಾಸೋಹದ ಮಹತ್ವವನ್ನು ಶರಣರು ಅಪಾರವಾಗಿ ನಂಬಿ ಪಾಲಿಸಿಕೊಂಡು ಬಂದಿದ್ದರು ಎಂದು ತಿಳಿಯುತ್ತದೆ. 'ಕಾಯಕವಿಡಿಹನ್ನಬರ ಶಿವಭಕ್ತರಿಗೆ, ಕಾಯಕವೇ ಕೈಲಾಸ' ಎಂದು ಮನಸಂದ ಮಾರಿತಂದೆಯವರು ಕಾಯಕ ಮಹತ್ವವನ್ನು ತಿಳಿಸಿದ್ದಾರೆ.

ಒಟ್ಟಾರೆಯಾಗಿ ಹನ್ನೆರಡನೇ ಶತಮಾನದ ಸಾಮಾಜಿಕ ಹೋರಾಟದ ವಚನಕಾರರ ಅಭಿವ್ಯಕ್ತಿಯಲ್ಲಿ ಕಾಯಕವೆಂಬುದು ಮನುಷ್ಯ ತನ್ನ ಜೀವನ ನಿರ್ವಹಣೆಗಾಗಿ ಅವಲಂಬಿಸಿರುವ ವೃತ್ತಿಯಾಗಿದೆ. ಅದರಲ್ಲಿ ಮೇಲುಕೀಳು ಎಂಬುದಿಲ್ಲ. ಕಾಯಕ ಮಾಡದವನು ಬದುಕಲು ಅರ್ಹನಲ್ಲ. ನ್ಯಾಯದ ದೃಷ್ಟಿಯಿಂದ ಸತ್ಯವಾದ ರೀತಿಯಲ್ಲಿ ತನ್ನ ತನ್ನ ಕಾಯಕವನ್ನು ಮಾಡಬೇಕಾದ್ದು ಪ್ರತಿಯೊಬ್ಬ ಮಾನವರ ಆದ್ಯ ಕರ್ತವ್ಯ. ಪ್ರತಿಯೊಬ್ಬ ಮಾನವನೂ ಕಾಯಕಶೀಲನಾಗಬೇಕು. ಕಾಯಕದಲ್ಲಿ ಲಿಂಗ ಬೇಧ ಮತ್ತು ಜಾತಿ ಬೇಧಗಳಿಲ್ಲ. ಯಾವ ಕಾಯಕವು ಕೀಳಲ್ಲ-ಮೇಲಲ್ಲ ಎಂಬುದನ್ನು ಎಲ್ಲರೂ ಅರಿತು ನಡೆಯಬೇಕಾಗಿದೆ. ಇದುವೇ ನಾವು ಕಾಯಕಕ್ಕೆ ಕೊಡುವ ಗೌರವ ಮತ್ತು ನಿಜವಾದ ಶ್ರದ್ಧೆಯ ಭಕ್ತಿಯಾಗಿದೆ.

* * * * *

# ಇರುವುದೆಲ್ಲವ ಬಿಟ್ಟು ಇಲ್ಲದೆಡೆಗೆ ತುಡಿಯುವುದೇ ಜೀವನ

**– ಮೋಹನ್‌ಕುಮಾರ್ ನಾಯ್ಕ್ ಟಿ.ಎಂ, ಸಹಾಯಕ ಪ್ರಾಧ್ಯಾಪಕ**

ನನಗೆ ಪದವಿ ಪಡೆಯುವ ಆಸೆ ಹುಟ್ಟಿತು 2009 ನೇ ಇಸವಿಯಲ್ಲಿ ಪ್ರಥಮ ಪದವಿ ವ್ಯಾಸಂಗಕ್ಕೆ ಎಸ್. ಡಿ. ಎಮ್ ಕಾಲೇಜು ಉಜಿರೆ ಬೆಳತಂಗಡಿ (ತಾ) ಅಲ್ಲಿ ಪ್ರವೇಶ ಪಡೆದೆ. ನನ್ನ ಈ ಪದವಿ ವ್ಯಾಸಂಗದಲ್ಲಿ ಪ್ರೌಢಶಾಲೆಯಲ್ಲಿ ನೆರವೇರದ ಕನಸು ನನಸಾಯ್ತು. ಅಂದರೆ ಎನ್.ಸಿ.ಸಿ ಕೆಡೆಟ್ (ನೇವಲ್ ವಿಭಾಗ) ಆಗಲು ಅವಕಾಶ ದೊರಕಿತು. ಹೆಚ್ಚಿನ ಆಸಕ್ತಿಯಿಂದಾಗಿ ಅಲ್ಲಿ ಬರುತ್ತಿದ್ದ ಕಠಿಣ ಸವಾಲುಗಳನ್ನು ಸ್ಪರ್ಧೆಗಳನ್ನು ಸ್ವೀಕರಿಸಿ ಸಂತೋಷ ಪಡುತ್ತಿದ್ದೆವು. ಅಂದರೆ ವಾರದ ಕೊನೆಯ ದಿನದಂದು ನೀಡುತ್ತಿದ್ದ ತರಬೇತಿಗಳಲ್ಲಿ ದೈಹಿಕ ಸಹಿಷ್ಣುತ ಸ್ಪರ್ಧೆಗಳು ಅಂದರೆ ವೇಗದ ಓಟ, ಎತ್ತರ ಜಿಗಿತ, ಉದ್ದ ಜಿಗಿತ, ಕಪ್ಪೆ ಜಿಗಿತ, ಬಾತುಕೋಳಿ ನಡಿಗೆ, ರೋಲಿಂಗ್, ಕ್ರೋಲಿಂಗ್, ಕ್ಲೈಂಬಿಂಗ್, ಭಾರ ಎತ್ತುವುದು, ಕೂಸುಮರಿ ಓಟ, ಪಥ'ಸಂಚಲನ ಹೀಗೆ ಮುಂತಾದ ತರಬೇತಿಗಳು ಸಿಗುತಿದ್ದವು. ಮೊದಲೆ ಹೇಳಿದಂತೆ ನೇವಲ್ ವಿಭಾಗ ಅಂದರೆ ಸಮುದ್ರ ಯಾನ ಮತ್ತು ಅದಕ್ಕೆ ಸಂಬಂಧಿಸಿದ ರಕ್ಷಣೆಗಳು ಒಳಗೊಂಡಿದ್ದು, ಸ್ವಿಮ್ಮಿಂಗ್ ಮಾಡುವ ಅನಿವಾರ್ಯತೆಗಳಿದ್ದವು. ಆದರೆ ಸ್ವಿಮ್ಮಿಂಗ್ ಕೌಶಲ್ಯಗಳು ತಿಳಿದಿರಲಿಲ್ಲ. 'ಆಲ್ ಇಂಡಿಯಾ ನವ ಸೈನಿಕ್ ಕ್ಯಾಂಪ್'ನಲ್ಲಿ ಸ್ಪರ್ಧಿಸಲು ನೀರಿನಲ್ಲಿ ಈಜುವ ಮತ್ತು 1 ನಿಮಿಷ ತೇಲುವ ಕೌಶಲ್ಯತೆ ಹೊಂದಿರಬೇಕಿತ್ತು. ಈಜುವ ಕೌಶಲ್ಯಗಳಿಲ್ಲದೆ ನನ್ನ ಮನಸ್ಸು ತುಡಿಯತೊಡಗಿತ್ತು. ಈ ಕೌಶಲ್ಯಗಳು ಇದ್ದಿದ್ದರೆ ಈ ಶಿಬಿರದಲ್ಲಿ ಸ್ಪರ್ಧಿಸಲು ಸಾಧ್ಯವಾಗದೆ ಹೊರಗುಳಿದೆನಲ್ಲ, ಏನನ್ನು ಸಾಧಿಸಲಿಲ್ಲ ಎಂದು ಬೇಸರಗೊಂಡ ಮನಸ್ಸು, ಯಾವಾಗಲೂ ಕೊರಗಲಾರಂಭಿಸಿತು. ಆದರೆ ಸಾಧಿಸಲು ನನ್ನ ಬಳಿ ಎಷ್ಟೋ ಕೌಶಲ್ಯಗಳು ಜೊತೆಯಲ್ಲಿಯೇ ಇದ್ದರೂ ಅವುಗಳನೆಲ್ಲ ಬಿಟ್ಟು ಇಲ್ಲದ ಕೌಶಲ್ಯ ನೆನೆದು ಕೊರಗುತಿತ್ತು. ದಿನಗಳು ಕಳೆದವು, ವರ್ಷಗಳೇ ಕಳೆದವು, ಪದವಿ ಮುಗಿಯಿತು. ಸ್ನಾತಕ ಪದವಿಯು ಮುಗಿದ ನಂತರ ಉದ್ಯೋಗ ಅರಸಿ ನಾಗಮಂಗಲವನ್ನು ತಲುಪಿದೆನು.

ನಾಗಮಂಗಲದಲ್ಲಿ ಉತ್ತಮ ಸಹಕಾರದೊಂದಿಗೆ ನನ್ನ ಉದ್ಯೋಗ ಜೀವನ ಮುಂದುವರಿಯಿತು. ಇಲ್ಲಿ ನನ್ನ ಸ್ನೇಹಿತರಾದ ಬಿ.ಪಿ.ನಾರಾಯಣರವರು ನಾಗಮಂಗಲದಲ್ಲಿ ಎಷ್ಟೋ ಜನರಿಗೆ ಈಜು ಕಲಿಸುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರು. ಅವರ ಕೈ ಸೇರಿದ ನಾನು ನನ್ನ ಹಿಂದೆ ಇದ್ದ ಈಜು ಬಾರದ ಕೌಶಲ್ಯದ ಕೊರಗು ದೂರವಾಗಲು ಅವಕಾಶವಾಯಿತು.

ಆಸಕ್ತಿಯಿಂದ ಅವರು ನೀಡಿದ ಮಾರ್ಗದರ್ಶನದ ಮುಖಾಂತರ, ಚಾಚು ತಪ್ಪದೆ ಪ್ರತಿದಿನ ಪ್ರಯತ್ನಗಳಿಂದ ಸ್ವಿಮ್ಮಿಂಗ್‌ನಲ್ಲಿ ಫ್ರೀಸ್ಟೈಲ್‌ನಲ್ಲಿ ಸ್ಪರ್ಧಾತ್ಮಕ ಹಂತಕ್ಕೆ ತಲುಪಿದೆ. ಉಳಿದ ಸ್ಟೈಲ್‌ಗಳಾದ ಬಟರ್‌ಫ್ಲೆ, ಬೆಸ್ಟ್ರೋಕ್, ಬ್ಯಾಕ್ ಸ್ಟ್ರೋಕ್, ಇವುಗಳನ್ನು ಸಾಧ್ಯವಾದ

ಪ್ರಮಾಣದಲ್ಲಿ ಕಲಿತು ನೀರಿನ ಮೇಲೆ ಫ್ಲೋಟಿಂಗ್ (ತೇಲುವ) ಕೌಶಲ್ಯವನ್ನು ಕಲಿತೆನು. ನನ್ನ ಹಿಂದಿನ ಸ್ಪರ್ಧೆಗೆ ಬೇಕಾಗಿದ್ದು 1 ನಿಮಿಷ ಫ್ಲೋಟಿಂಗ್ (ತೇಲುವ) ಆದರೆ, ಗಂಟೆಗಟ್ಟಲೆ ನೀರಿನ ಮೇಲೆ ತೇಲುವುದನ್ನು ಕಲಿತೆ. ನೀರಿನ ಮೇಲೆ ಮಲಗಿ ಯೋಗಾಸನ ಮಾಡುವುದನ್ನು ಕಲಿತೆ. ಫ್ರೀಸ್ಟೈಲ್‌ನಲ್ಲಿ ಸ್ಪರ್ಧಾತ್ಮಕ ಹಂತಕ್ಕೆ ಕಲಿತು ಸದ್ಯಕ್ಕೆ ನಾಗಮಂಗಲ ಸುತ್ತಮುತ್ತ ನನ್ನನ್ನು ಫ್ರೀಸ್ಟೈಲ್‌ನಲ್ಲಿ ಸ್ಪರ್ಧಿ ಯಾರೂ ಸೋಲಿಸಲಾರದಷ್ಟು ಆತ್ಮವಿಶ್ವಾಸದ ಕೌಶಲ್ಯ ಪಡೆದೆ. ಇಷ್ಟೆಲ್ಲಾ ಕಲಿತರೂ ಈಜುವ ಯಾವುದೇ ರಾಜ್ಯಮಟ್ಟದ ಅಥವಾ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಸ್ಪರ್ಧಿಸಲಿಲ್ಲ. ಏಕೆಂದರೆ ನನ್ನ ಮನಸ್ಸು ಇರುವುದನ್ನು ಬಿಟ್ಟು ಇಲ್ಲದೆಡೆಗೆ ತುಡಿಯುತ್ತಿದೆ. ಪ್ರಪಂಚವನ್ನು ಸುತ್ತುವ ಆಸೆಕಡೆಗೆ ತುಡಿಯುತ್ತಿದೆ.

ನಮ್ಮಲ್ಲಿ ಎಷ್ಟೋ ಕೌಶಲ್ಯಗಳು ಜೊತೆಯಲ್ಲಿದ್ದರೂ ಅವನೆಲ್ಲ ಮರೆತು, ಇಲ್ಲದ ಕಡೆಗೆ ಮನಸ್ಸು ನೆನೆದು ಕೊರಗುತ್ತದೆ. ಆದರೆ ಇರುವ ಭಾಗ್ಯವನ್ನು ನೆನೆದರೆ ಖಂಡಿತವಾಗಿಯೂ ಜೀವನದಲ್ಲಿ ಹರ್ಷವಿದೆ. ಆದ್ದರಿಂದ ಇರುವುದನ್ನು ನೆನೆದರೆ ಖಂಡಿತವಾಗಿಯು ಜೀವನದಲ್ಲಿ ದುಃಖ ದೂರವಾಗುತ್ತದೆ. ಆಸೆ ಅಪರಿಮಿತ ಅವಕಾಶ ಪರಿಮಿತ.

* * * * *

## ಯೋಗಾಸನ

**– ದಿವ್ಯ ಎನ್.ವಿ, ತೃತೀಯ ಬಿ.ಕಾಂ.,**

ಯೋಗವು ಒಂದು ಮಂತ್ರ ಶಕ್ತಿ
ಪಡೆಯಬಹುದು ಅದ್ಭುತವಾದ ಯುಕ್ತಿ
ಪ್ರತಿನಿತ್ಯ ಮಾಡಿದರೆ ಯೋಗ ಭಕ್ತಿ
ಪಡೆಯಬಹುದು ಮನಸ್ಸಿಗೆ ಶಾಂತಿ

ಯೋಗಾಸನದಿಂದ ಸಿಗುತ್ತದೆ ಆರೋಗ್ಯ
ಮನಸ್ಸನ್ನ ಹತೋಟಿಯಲ್ಲಿಡುವ ಸೌಭಾಗ್ಯ
ಸದೃಢ ಶಾಂತಿಯಿಂದಿರಲು ಇರುವ
ಸುಲಭ ಸೂತ್ರವೇ ಧ್ಯಾನ ಯೋಗ



ಜೂನ್ 21 ಅಂತರಾಷ್ಟ್ರೀಯ ಯೋಗ ದಿನ
ಪ್ರತಿಯೊಬ್ಬರು ರೂಢಿಸಿಕೊಳ್ಳಬೇಕು
ಯೋಗ ಧ್ಯಾನ ಪ್ರಾಣಾಯಾಮ ಆಸನ
ರಾಷ್ಟ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ
ಪ್ರಸಿದ್ಧಿ ಗಳಿಸಿದೆ ಯೋಗಾಸನ

# ಬದುಕೆಂದರೆ

**– ಬೋರೇಗೌಡ .ಎಸ್, ಸಹಾಯಕ ಪ್ರಾಧ್ಯಾಪಕ**

ಬದುಕಿಗಾಗಿ ನಾವು ಯಾರನ್ನು ಅವಲಂಬಿಸಬಾರದು. ಅವಲಂಬನೆಯ ಬದುಕ ಬದುಕಿದರೆ, ಊಟದ ಎಲೆಯನ್ನು ಉಪಯೋಗಿಸಿ ಬಿಸಾಡುವಂತೆ ನಮ್ಮನ್ನು ಉಪಯೋಗಿಸಿ ಎಸೆಯುವ ಕಾಲಚಕ್ರದೊಳಗೆ ನಾವು ವಾಸಿಸುತ್ತಿದ್ದೇವೆ ಎಂಬ ಅರಿವು ನಮಗಿರಬೇಕು. ಬವಣೆಯಿಲ್ಲದ ಬದುಕ ಹುಡುಕಬಾರದು. ಬವಣೆಯೇ ಜೀವನದ ಯಶಸ್ಸಿನ ಗುಟ್ಟು ಎಂದು ಎಲ್ಲರಿಗೂ ಕಾಣುವಂತೆ ಬದುಕಬೇಕು. ಈ ಬದುಕು ನಮ್ಮದೇ ನಮ್ಮ ಬದುಕಿನ ಮನೆಯನ್ನು ನಾವೇ ಕಟ್ಟಿಕೊಳ್ಳಬೇಕೇ ಹೊರತು ಬೇರೆಯವರಿಂದ ಏನನ್ನೂ ನಿರೀಕ್ಷಿಸಬಾರದು. 'ನಮ್ಮ ತಲೆಗೆ ನಮ್ಮದೇ ಕೈ' ಎಂಬ ಹಿರಿಯರ ಮಾತೊಂದಿದೆ. ಎಲ್ಲವನ್ನೂ ಆಲೋಚಿಸಿದಾಗ ಇದು ಸತ್ಯಕ್ಕೆ ತುಂಬಾ ಹತ್ತಿರವಾದ ಮಾತು ಕೂಡಾ. 'ಅರಮನೆ ಆದ್ರೂ ಸರಿ ಗುಡಿಸಲು ಆದ್ರೂ ಸರಿ' ಜೀವನದ ಪ್ರತಿಕ್ಷಣಗಳನ್ನು ಅನುಭವಿಸಬೇಕು, ಸಂತೋಷವನ್ನು ಬೇರೆಲ್ಲೋ ಹುಡುಕಬಾರದು, ಸಂತೋಷದ ಕ್ಷಣಗಳನ್ನು ನಾವೇ ಸೃಷ್ಟಿಸಿಕೊಳ್ಳಬೇಕು. ಅದು ಬಿಕ್ಷುಕನಾದರೂ ಸರಿ ಶ್ರೀಮಂತನಾದರೂ ಸರಿ. ಇದ್ದದ್ದರಲ್ಲಿ ತೃಪ್ತಿ ಪಡುವ ಜೀವನ ನಮ್ಮದಾಗಬೇಕು. ಆಗ ಬದುಕಿನ ಸಾರ್ಥಕತೆಯನ್ನು ಕಾಣುತ್ತಿದ್ದೇವೆ ಎಂದರ್ಥ.

ಬದುಕು ನಮಗೆ ಎಷ್ಟು ಕಷ್ಟಗಳನ್ನು ಕೊಟ್ಟರೂ, ನಗು-ನಗುತ್ತಾ ಎದುರಿಸಬೇಕು. ಕೊನೆಗೊಂದು ದಿನ ನೀವು ಬದುಕುವ ರೀತಿ ಕಂಡು ಬದುಕಿಗೆ ಬೇಸರವಾಗಿಬಿಡಬೇಕು. ತಿಳಿದು ಬದುಕಬೇಕೇ ವಿನಃ ತುಳಿದು ಬದುಕಬಾರದು. ಅರ್ಥಪೂರ್ಣ ಬದುಕೆಂದರೆ ಸಿರಿವಂತನಾಗೋದು ಅಲ್ಲ, ಬುದ್ದಿವಂತನಾಗೋದು ಅಲ್ಲ, ಖ್ಯಾತಿವಂತನಾಗೋದು ಅಲ್ಲ, ಬದಲಿಗೆ ನೈಜ್ಯತೆಯಿಂದ ಸರಳತೆಯಿಂದ ಬದುಕೋದು. ಇನ್ನೊಬ್ಬರಿಗೆ ನಮ್ಮಿಂದ ಕೆಡುಕಾಗದ ರೀತಿ ಬದುಕೋದು. ಬದುಕು ಸುಂದರ ಎಂಬ ಕಾಲ್ಪನಿಕ ಕನಸಿನಿಂದ ಹೊರ ಬಂದು ಬದುಕು ಸುಂದರವಾಗಿಸುವ ಕನಸಿಗಾಗಿ ಬದುಕುವುದು ಉತ್ತಮ. ನಾಲ್ಕು ಜನ ನಿನ್ನನ್ನು ನೋಡುತ್ತಾರೆ ಎಂದು ಬದುಕಬೇಡ ನಿನ್ನನ್ನು ತಿರಸ್ಕರಿಸಿ ಬಿಟ್ಟುಹೋದ ನಾಲ್ಕು ಜನ ತಿರುಗಿ ನೋಡುವಂತೆ ಬದುಕಿ ತೋರಿಸು. ನಮ್ಮ ಬದುಕು ನಮ್ಮ ಕೈಯಲ್ಲಿ, ಹೊರತು. ಬೇರೆಯವರ ಕೈಯಲ್ಲಿ ಎಂಬ ಭ್ರಮೆಯಲ್ಲಿ ಬಾಳಬೇಡ.

ಬದುಕು ಹೇಗಿರಬೇಕು ಎಂದರೆ ಬೆಳಗ್ಗೆ ಏಳುವಾಗ ದೃಢವಾದ ನಿರ್ಧಾರವಿರಬೇಕು. ರಾತ್ರಿ ನಿದ್ರೆ ಮಾಡುವ ಹೊತ್ತಿಗೆ ಸಂಪೂರ್ಣ ತೃಪ್ತಿ ಇರಬೇಕು. ನಿಮಗಾಗಿ ಯಾರು ಕಾಯುತ್ತಾರೋ ಅವರಿಗಾಗಿ ಬದುಕಿ. ನಿಮಗಾಗಿ ಯಾರು ಅಳುತ್ತಾರೋ ಅವರನ್ನು ನಗಿಸಿ. ನಿಮಗಾಗಿ ಯಾರು ಪ್ರತಿಕ್ಷಣ ಹಂಬಲಿಸುತ್ತಾರೋ ಅವರನ್ನು ಪ್ರೀತಿಸಿ. ಒಳ್ಳೆಯ ಸಮಯಕ್ಕಿಂತ

ಒಳ್ಳೆಯ ಮನುಷ್ಯನ ಸಂಬಂಧವಿರಲಿ. ಏಕೆಂದರೆ ಒಳ್ಳೆಯ ಮನುಷ್ಯ ಒಳ್ಳೆಯ ಸಮಯವನ್ನು ತರಬಲ್ಲ. ಆದರೆ ಒಳ್ಳೆಯ ಸಮಯವು ಒಳ್ಳೆಯ ಮನುಷ್ಯನನ್ನು ತರಲಾರದು.

'ಶ್ರಮಮೇವ ಜಯತೆ' ಎಂಬ ವಾಕ್ಯದಂತೆ ಬೆವರ ಹನಿ ಭರವಸೆ ಕೊಡುತ್ತದೆ, ಕಣ್ಣೀರ ಹನಿ ಬದುಕು ಕಲಿಸುತ್ತದೆ. ಬದುಕಿನ ಕನಸಿನ ಮೂಟೆ ಕಟ್ಟುವುದು ಬಹಳ ಸುಲಭ. ಆದರೆ ಅದನ್ನು ಹೊರುವುದು ತುಂಬಾ ಕಷ್ಟ. ಕನಸಿನ ಮೂಟೆಯನ್ನು ಹೊತ್ತು ಸಾಗುವಲ್ಲಿ ನಾವು ಜಾಗರೂಕರಾಗಬೇಕು. ಆಗ ಬದುಕು ತಿಳಿಯುತ್ತದೆ ಬದುಕಿಗೊಂದು ಅರ್ಥ ಸಿಗುತ್ತದೆ. ಸರಳ ಬದುಕು ಒತ್ತಡವಿಲ್ಲದ ಬದುಕಿಗೆ ಬುನಾದಿ. ಅದೇ ರೀತಿ ನಿಯತ್ತಿನ ಬದುಕು ನಮ್ಮ ಜೀವನಕ್ಕೆ ಬುನಾದಿ. ನಿನ್ನ ಜೀವನವೆಂಬ ಕಲ್ಲನ್ನು ಕೆತ್ತುವ ಶಿಲ್ಪಿ ನೀನೇ ಆಗಬೇಕು. ಆ ರೀತಿ ಕಷ್ಟಗಳನ್ನು ಎದುರಿಸಿ ಸುಖವನ್ನು ಸೃಷ್ಟಿಸಿ ಬದುಕಬೇಕು. 'ಮೂರು ದಿನದ ಬದುಕಲ್ಲಿ ಮಣ್ಣು ಸೇರಿ ಗಾಳಿಯಲ್ಲಿ ಲೀನವಾಗುವವರು ನಾವು ಇರುವಷ್ಟು ದಿನ **ಪ್ರೀತಿ, ವಿಶ್ವಾಸ, ಶಾಂತಿ, ಸಹನೆ**ಯಿಂದ ಬದುಕು ಸಾಗಿಸಬೇಕು. ನಮಗೆ ಇರುವುದೊಂದೆ ಬದುಕು ಸಂತಸ ಸಂತೃಪ್ತಿಯಿಂದ ಬದುಕಬೇಕು. ಬದುಕು ನಂಬಿಕೆಯ ಕೈಗನ್ನಡಿಯಾಗಿರಬೇಕು. ಬದುಕೆಂದರೆ ಜೀವನದ ದಾರಿಯಲ್ಲಿ ಎಂದಿಗೂ ಮುಗಿಯದ ಪಯಣ.

* * * * *

## ನಾವು ಕನ್ನಡಿಗರು

**- ಲಿಖಿತ್ ಚಂದನ್ ಟಿ.ಡಿ, ತೃತೀಯ ಬಿ.ಎ**

ಬನ್ನಿ ಗೆಳೆಯರೆ ಹೋಗೋಣ
ಕನ್ನಡಾಂಬೆಯ ಸನ್ನಿಧಿಗೆ
ಬನ್ನಿ ಗೆಳೆಯರೆ ಎರಗೋಣ
ಕನ್ನಡಾಂಬೆಯ ಪಾದಗಳಿಗೆ

ಬನ್ನಿ ಗೆಳೆಯರೇ ಹೋಗೋಣ
ಕನ್ನಡ ನಾಡನು ಕಟ್ಟೋಣ
ಕನ್ನಡ ನುಡಿಯ ಕಲಿಸೋಣ
ವಿಶ್ವಕ್ಕೆ ಕನ್ನಡ ಶಕ್ತಿಯ ಸಾರೋಣ

ಬನ್ನಿ ಗೆಳೆಯರೆ ಹೋಗೋಣ
ಕನ್ನಡ ನಾಡನು ಸೇರೋಣ
ಕನ್ನಡ ನೆಲದ ಶಕ್ತಿಯ ತಿಳಿಯೋಣ
ಕನ್ನಡಾಂಬೆಗೆ ಜೈ ಅನ್ನೋಣ.

# ಮೂಢನಂಬಿಕೆಯೆನ್ನುವ ಆಚರಣೆಗಳಲ್ಲಿ ಅಡಗಿರುವ ವೈಜ್ಞಾನಿಕತೆ

**– ಸಿ.ಟಿ ಚಂದ್ರಶೇಖರ್, ಸಹಾಯಕ ಪ್ರಾಧ್ಯಾಪಕ**

ಹಿಂದೂ ಧರ್ಮದ ಹಲವಾರು ಆಚರಣೆಗಳು, ಸಂಪ್ರದಾಯಗಳನ್ನು ಮೂಢನಂಬಿಕೆಯೆಂದು ಜರಿಯುವವರು ಹಲವರು. ಆದರೆ ವಿಜ್ಞಾನ ಮುಂದುವರಿದಂತೆಲ್ಲಾ ಈ ಸಂಪ್ರದಾಯಗಳ ಹಿಂದಿನ ವೈಜ್ಞಾನಿಕ ವಿವರಣೆ ದೊರೆಯುತ್ತವೆ. ಈ ವೈಜ್ಞಾನಿಕ ಜ್ಞಾನವನ್ನೇ ಸಂಪ್ರದಾಯದ ಹೆಸರಿನಲ್ಲಿ ತಲೆಮಾರಿನಿಂದ ತಲೆಮಾರಿಗೆ ಹರಿಯಬಿಡಲಾಗಿದೆ. ಸಾಮಾನ್ಯ ಜನರಿಗೆ ಈ ಆಚರಣೆಗಳ ಹಿಂದಿನ ವೈಜ್ಞಾನಿಕ ಅರಿವು ಇಲ್ಲವಾದರೂ ಅವರು ಇದನ್ನು ನಂಬಿ ಸಾವಿರಾರು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಅಂತಹ ಕೆಲವು ಆಚರಣೆಗಳು ಹಾಗೂ ಸಂಪ್ರದಾಯಗಳ ಹಿಂದಿನ ವೈಜ್ಞಾನಿಕ ವಿವರಣೆಗಳನ್ನು ಇಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

**1. ದೇವಸ್ಥಾನಗಳಲ್ಲಿ ಗಂಟೆ ಬಾರಿಸುವುದು :**

ನಾವು ದೇವಸ್ಥಾನಗಳಿಗೆ ಹೋದಾಗ ಅದರಲ್ಲೂ ಗರ್ಭಗುಡಿಯ ಬಳಿ ಹೋಗುವಾಗ ಗಂಟೆ ಬಾರಿಸುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಗಂಟೆಯ ಶಬ್ದ ಕೆಟ್ಟ ಶಕ್ತಿಯನ್ನು ದೂರವಿರಿಸುತ್ತದೆ ಎಂಬ ನಂಬಿಕೆ ಇದೆಯಾದರೂ, ವೈಜ್ಞಾನಿಕವಾಗಿ ಈ ಗಂಟೆ ಹೊಮ್ಮಿಸುವ ವಿನಾದ ಹಾಗೂ ಅದರ ಮೊಳಗುವಿಕೆ ಮನಸ್ಸಿನಲ್ಲಿರುವ ಯೋಚನೆಗಳ್ನು ದೂರವಿರಿಸಿ ಏಕಾಗ್ರತೆಯನ್ನು ಮೂಡಿಸುತ್ತದೆ.

**2. ಸೂರ್ಯ ನಮಸ್ಕಾರ ಮಾಡುವುದು** :

ಹಿಂದೂಗಳು ಬೆಳಗ್ಗೆ ಹಾಗೂ ಸಂಜೆಯ ಹೊತ್ತಿನಲ್ಲಿ ಸೂರ್ಯ ನಮಸ್ಕಾರ ಹಾಗೂ ಸಂಧ್ಯಾವಂದನೆ ಆಚರಿಸಿಕೊಂಡು ಬರುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ ಬೆಳಗಿನ ಹಾಗೂ ಸಂಜೆಯ ಬಿಸಿಲು ಮನುಷ್ಯನ ದೇಹಕ್ಕೆ ಅತ್ಯಗತ್ಯ, ಇದು ವಿಟಮಿನ್ 'ಡಿ' ನೀಡುವ ಜೊತೆಗೆ ದೇಹವನ್ನು ಚೇತೋಹಾರಿಯಾಗಿಸುತ್ತದೆ. ಇದರೊಂದಿಗೆ ಬೆಳಗ್ಗೆ ಬೇಗ ಏಳುವ ಅಭ್ಯಾಸವೂ ಆಗುತ್ತದೆ.

**3. ಅಶ್ವತ್ಥ ಮರಕ್ಕೆ ಪೂಜೆ ಸಲ್ಲಿಸುವುದು :**

ಅಶ್ವತ್ಥ ಮರವು ಸಾಮಾನ್ಯ ಜನರಿಗೆ ಅಷ್ಟೇನು ಪ್ರಯೋಜನವಿಲ್ಲ. ಅದರ ಹಣ್ಣನ್ನು ನಾವು ತಿನ್ನುವುದಿಲ್ಲ. ಇದರ ಕಟ್ಟಿಗೆ ಯಾವುದಕ್ಕೂ ಬಳಸುವಷ್ಟು ಗಟ್ಟಿಯಿರುವುದಿಲ್ಲ. ಹಾಗಿದ್ದರೂ ಅಶ್ವತ್ಥ ಮರವನ್ನು ದೇವರೆಂದು ಪೂಜಿಸುತ್ತೇವೆ. ಏಕೆಂದರೆ ಇದೊಂದೇ ಮರ ರಾತ್ರಿ ಸಮಯದಲ್ಲೂ

ಆಮ್ಲಜನಕವನ್ನೇ ಹೊರಸೂಸುತ್ತದೆ. ಈ ಪೂಜೆ ಸಲ್ಲಿಸುವಾಗ ಶುದ್ಧ ಗಾಳಿಯ ಸೇವನೆ ಮಾಡಿದಂತಾಗುತ್ತದೆ.

**4. ಹಣೆಯ ಮೇಲೆ ತಿಲಕವಿಡುವುದು :**

ನಮ್ಮ ಎರಡು ಹಣೆಗಳ ನಡುವಿನ ಆ ಕೇಂದ್ರ ಬಿಂದುವನ್ನು ಬಹಳ ಹಿಂದಿನಿಂದಲೂ ಬಹಳ ಮುಖ್ಯವಾದ ನರಕೇಂದ್ರ ಎಂದು ನಂಬಲಾಗಿದೆ, ಇಲ್ಲಿ ಕುಂಕುಮ ಇಡುವುದರಿಂದ ದೇಹದಿಂದ ಶಕ್ತಿ ಕಳೆದುಹೋಗದಂತೆ ನೋಡಿಕೊಳ್ಳುವುದರ ಜೊತೆಗೆ ಏಕಾಗ್ರತೆ ಹೆಚ್ಚುತ್ತದೆ. ಹೀಗೆ ಕುಂಕುಮ ಇಡುವಾಗ ಆಜ್ಞಾ ಚಕ್ರವನ್ನು ಒತ್ತುವುದರಿಂದ ಮುಖಕ್ಕೆ ರಕ್ತ ಸಂಚಾರವೂ ಹೆಚ್ಚುತ್ತದೆ. ಹಿಂದೆಲ್ಲ ಗಂಡಸರು, ಹೆಂಗಸರು ಹಾಗೂ ಮಕ್ಕಳು ಎಲ್ಲರೂ ಹಣೆಗೆ ತಿಲಕ ಇಡುತ್ತಿದ್ದುದು ಇದೇ ಕಾರಣಕ್ಕೆ.

**5. ಹೆಣ್ಣು ಮದುವೆಯಾದ ಮೇಲೆ ಕಾಲುಂಗುರ ಧರಿಸುವುದು :**

ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ ಎಂಬುದನ್ನು ತಿಳಿಯಲು ಕಾಲುಂಗುರ ಧರಿಸಬೇಕೆಂದು ನಾವು ನಂಬಿದ್ದೇವೆ. ಆದರೆ ಇದರ ಹಿಂದೆ ಒಂದು ವಿಚಾರವಿದೆ. ಸಾಮಾನ್ಯವಾಗಿ ಕಾಲುಂಗುರವನ್ನು ಮಹಿಳೆಯರು ಎರಡನೇ ಬೆರಳಿಗೆ ಧರಿಸುತ್ತಾರೆ. ಈ ಬೆರಳನಲ್ಲಿರುವ ನರತಂತುಗಳು ಗರ್ಭಕೋಶ ಹಾಗೂ ಹೃದಯಕ್ಕೆ ಸಂಪರ್ಕ ಹೊಂದಿರುತ್ತವೆ. ಹಾಗಾಗಿ ಈ ಬೆರಳಿಗೆ ಉಂಗುರ ತೊಡುವುದರಿಂದ ಗರ್ಭಕೋಶವನ್ನು ಬಲಪಡಿಸುತ್ತದೆ. ಹಾಗೆಯೇ ಇದು ಗರ್ಭಕೋಶಕ್ಕೆ ರಕ್ತಸಂಚಾರ ಸರಿಯಾಗಿರಿಸಿ ಅದನ್ನು ಆರೋಗ್ಯಕರವಾಗಿರಿಸುತ್ತದೆ. ಅಲ್ಲದೆ ಬೆಳ್ಳಿ ಲೋಹವು ಉತ್ತಮ ಸಂವಾಹಕವಾಗಿದ್ದು, ಅದು ಭೂಮಿಯಿಂದ ಪೋಲಾರ್ ಎನರ್ಜಿಯನ್ನೆಲ್ಲ ಸೆಳೆದು ದೇಹಕ್ಕೆ ರವಾನಿಸುತ್ತದೆ.

ಹಿಂದೂಗಳು ಏನೇ ಮಾಡಿದರೂ ಅವನ್ನು ಮೂಢನಂಬಿಕೆ ಎನ್ನುವುದು ಕೆಲವರಿಗೆ ಅಭ್ಯಾಸವಾಗಿದೆ. ಆದರೆ ಹಿಂದೂ ಧರ್ಮದ ಬಹುತೇಕ ಪದ್ಧತಿ, ಆಚಾರಣೆಗಳ ಹಿಂದೆ ಸದುದ್ದೇಶವಿದೆ, ವಿಜ್ಞಾನ ಕೂಡ ಇದೆ. ಆದರೆ ದೇವರು ಧರ್ಮದ ಹೆಸರಿನಲ್ಲಿ ಹೇಳಿದಾಗ ಮಾತ್ರ ಹೆಚ್ಚಿನ ಜನರು ಶ್ರದ್ಧಾಭಕ್ತಿಯಿಂದ ಅದನ್ನು ಆಚರಿಸುತ್ತಾರೆ ಎಂದು ಅಂತಹ ಪದ್ಧತಿಗಳನ್ನು ಆಚರಿಸುತ್ತಾರೆ.

* * * * *

ನಿಮ್ಮ ವ್ಯಕ್ತಿತ್ವದ ಕಡೆಗೆ ಮನವಿಡು, ಕೀರ್ತಿ ಗಳಿಸುವೆಂಬುದರ ಬಗ್ಗೆಯಲ್ಲ; ಏಕೆಂದರೆ ವ್ಯಕ್ತಿತ್ವವನ್ನು ನೀನೆ ಬೆಳೆಸಿಕೊಂಡದ್ದು, ಕೀರ್ತಿ ಎಂಬುದು ಇತರರು ನಿನಗಿತ್ತ ಭಿಕ್ಷೆ.

**– ನುಡಿಮುತ್ತು**

# ಸಾವಿರ ವರ್ಷಗಳ ಹಿಂದೆಯೇ ಗಗನಯಾನದ ಪರಿಚಯ ಭಾರತೀಯರಿಗೆ ತಿಳಿದಿತ್ತಾ...?

– ರವಿವರ್ಮ ಕೆ.ಜಿ, ಸಹಾಯಕ ಪ್ರಾಧ್ಯಾಪಕ

ಇತ್ತೀಚಿನ ವರ್ಷಗಳಲ್ಲಿ ಗಗನಯಾನದ ಪರಿಕಲ್ಪನೆಗಳ ಬಗ್ಗೆ ಸಾಕಷ್ಟು ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಭೂಮಿಯಿಂದ ಚಂದ್ರಗ್ರಹ ಮತ್ತು ಮಂಗಳ ಗ್ರಹದ ಅಂಗಳಕ್ಕೆ ಕಾಲಿಡುವ ಮೂಲಕ ಆ ಗ್ರಹಗಳಲ್ಲಿ ಜೀವಿಗಳು ವಾಸಮಾಡುವುದಕ್ಕೆ ಸಾಧ್ಯತೆಗಳ ಬಗ್ಗೆ ಸಾಕಷ್ಟು ಅಧ್ಯಯನಗಳನ್ನು ಮಾಡುತ್ತಿದ್ದಾರೆ. ಆದರೆ ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಪೂರ್ವಿಕರಿಗೆ ವಿಜ್ಞಾನದ ಬಗ್ಗೆ, ಖಗೋಳಶಾಸ್ತ್ರದ ಬಗ್ಗೆ, ಗ್ರಹಗಳ ಚಲನೆ, ಭೂಮಿಯ ಆಕಾರ, ಸೂರ್ಯಗ್ರಹಣ, ಚಂದ್ರಗ್ರಹಣ, ಅಂತರಿಕ್ಷದ ಬಗ್ಗೆ ಸಾಕಷ್ಟು ಜ್ಞಾನವಿತ್ತು ಎಂದು ಹೇಳಬಹುದು. ಅಂದಿನ ಕಾಲದಲ್ಲಿ ನಿರ್ಮಾಣ ಮಾಡಿದ ದೇವಾಲಯಗಳು, ಸ್ಮಾರಕಗಳು, ಶಾಸ್ತ್ರಗ್ರಂಥಗಳು ಇದಕ್ಕೆ ಸಾಕ್ಷಿಯಾಗಿವೆ. ಪ್ರಾಚೀನ ದೇವಾಲಯಗಳ ಗೋಡೆಗಳ ಮೇಲೆ ಕೆತ್ತಿರುವ ಖಗೋಳ ಮತ್ತು ವಿಜ್ಞಾನದ ಮಾಹಿತಿ ನೀಡುವ ಶಿಲ್ಪಗಳು ನಮ್ಮ ಪೂರ್ವಜರ ಜ್ಞಾನ ಸಂಪತ್ತಿನ ಮೇಲೆ ಬೆಳಕು ಚೆಲ್ಲುತ್ತವೆ. ಅದಕ್ಕೆ ಉದಾಹರಣೆ ಎಂದರೆ ಹೊಯ್ಸಳರ ರಾಜಧಾನಿಯಲ್ಲಿ ನಿರ್ಮಾಣ ಮಾಡಿರುವ ಹೊಯ್ಸಳೇಶ್ವರ ದೇವಾಲಯ.

ಒಟ್ಟಾರೆಯಾಗಿ ಭಾರತೀಯ ದೇವಾಲಯಗಳು ನಿರ್ಮಾಣವಾಗಿರುವುದು ವೈಜ್ಞಾನಿಕ ತಳಹದಿಯ ಮೇಲೆ. ಭಾರತದಲ್ಲಿರುವ ಸಾವಿರಾರು ದೇವಾಲಯಗಳು ವಿಜ್ಞಾನ ಕೇಂದ್ರಗಳಾಗಿವೆ. ಅದರಲ್ಲೂ ಖಗೋಳ ವಿಜ್ಞಾನ ಹಾಗೂ ಗಣಿತಕ್ಕೆ ಭಾರತೀಯರ ಕೊಡುಗೆ ಅಪಾರ. ಹಾಗೆಯೇ ಬೇಲೂರು ಮತ್ತು ಹಳೆಬೀಡಿನಲ್ಲಿ ನಿರ್ಮಾಣ ಮಾಡಲಾದ ದೇವಾಲಯಗಳು ಇವತ್ತಿಗೂ ಭಾರತೀಯ ಶಿಲ್ಪಿಗಳ ಕೈಚಳಕ ಅವರಿಗೆ ವಿಜ್ಞಾನದ ಬಗ್ಗೆ ಇದ್ದ ಜ್ಞಾನದ ಮೇಲೆ ಬೆಳಕು ಚೆಲ್ಲುತ್ತವೆ.

ಹೊಯ್ಸಳ ದೊರೆಗಳ ಕಾಲದಲ್ಲಿ ಬೇಲೂರಿನಲ್ಲಿ ನಿರ್ಮಾಣ ಮಾಡಲಾದ ದೇವಾಲಯ ಮಹಾವಿಷ್ಣುವಿಗೆ ಸಮರ್ಪಣೆಯಾದರೆ, ದ್ವಾರಸಮುದ್ರದಲ್ಲಿ (ಹಳೇಬೀಡು) ನಿರ್ಮಾಣ ಮಾಡಿರುವ ದೇವಾಲಯವನ್ನು ಶಿವನಿಗೆ ಅರ್ಪಿಸಲಾಗಿದೆ. ಈ ದೇವಾಲಯ ಕೇವಲ ಪೂಜ ಕೇಂದ್ರವಲ್ಲ ಅಥವಾ ಶ್ರದ್ಧಾ ಕೇಂದ್ರವಲ್ಲ ಅಥವಾ ಧಾರ್ಮಿಕ ಕೇಂದ್ರವೂ ಅಲ್ಲ. ಇದೊಂದು ಮಹಾವಿಶ್ವವಿದ್ಯಾಲಯ ಹಾಗೂ ವಿಜ್ಞಾನದ ಕೇಂದ್ರ ಎನ್ನಬಹುದು. ಈ ದೇವಾಲಯವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದರೆ ೯ ಶತಮಾನಗಳ ಹಿಂದೇಯೇ ನಮ್ಮ ಪೂರ್ವಜರು ಅದೆಂತಹ ಅತ್ಯಾಧುನಿಕ ಉಪಕರಣಗಳನ್ನು ಬಳಸಿ ಈ ದೇವಾಲಯವನ್ನು ನಿರ್ಮಾಣ

ಮಾಡಿದ್ದರು ಎಂಬ ಕುತೂಹಲ ಎಲ್ಲರನ್ನು ಕಾಡುತ್ತದೆ. ಇವತ್ತಿನ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿದರೂ ಕೂಡ ಹಳೇಬೀಡಿನ ದೇವಾಲಯದಲ್ಲಿರುವಂತೆ ಕಲ್ಲುಗಳನ್ನು ಅತಿಸೂಕ್ಷ್ಮವಾಗಿ ಕೆತ್ತುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಸಂಶೋಧಕರೇ ಒಪ್ಪಿಕೊಂಡಿದ್ದಾರೆ.

೯೦೦ ವರ್ಷಗಳ ಹಿಂದೆ ಈ ಅದ್ಭುತವನ್ನು ನಿರ್ಮಾಣ ಮಾಡಿದಾದ್ದರೂ ಹೇಗೆ ಎಂಬ ಪ್ರಶ್ನೆ ಕಾಡುತ್ತದೆ. ಆ ಕಾಲದಲ್ಲಿ ನಮ್ಮ ಶಿಲ್ಪಿಗಳು ಬಳಕೆ ಮಾಡಿರಬಹುದಾದ ತಂತ್ರಜ್ಞಾನ ಯಾವುದು ಎಂಬ ಆಶ್ಚರ್ಯ ಎಲ್ಲರ ಗಮನಕ್ಕೆ ಬರಬೇಕಾದರೆ ಆ ದೇವಾಲಯವನ್ನು ಸಂಪೂರ್ಣವಾಗಿ ಪ್ರದಕ್ಷಿಣೆ ಮಾಡಬೇಕು. 'ಬೇಲೂರಿನ ದೇವಾಲಯದ ಒಳಗಿನ ಸೌಂದರ್ಯ ನೋಡು', 'ಹಳೇಬೀಡಿನ ಶಿಲ್ಪಕಲಾ ವೈಭವ ನೋಡು' ಎಂಬ ಗಾದೆ ಮಾತಿನಂತೆ ಈ ಹಳೇಬೀಡಿನ ದೇವಾಲಯ ಹೊರಬಿತ್ತಿಗಳಲ್ಲಿ ಇರೋ ಶಿಲ್ಪಗಳ ಸಂಖ್ಯೆ ಒಂದು ಲೆಕ್ಕಚಾರದ ಪ್ರಕಾರ 15 ಸಾವಿರಕ್ಕೂ ಹೆಚ್ಚು ಎಂದು ಅಂದಾಜಿಸಲಾಗಿದೆ.

ಹಳೇಬೀಡಿನ ಈ ಭವ್ಯ ಹೊಯ್ಸಳೇಶ್ವರ ದೇವಾಲಯವನ್ನು ನಿರ್ಮಾಣ ಮಾಡುವುದಕ್ಕೆ ಬರೋಬರಿ 120 ವರ್ಷಗಳು ತೆಗೆದುಕೊಂಡಿದ್ದಾರೆ. ಅಂದರೆ ಕ್ರಿ.ಶ1121ರಲ್ಲಿ (12ನೇ ಶತಮಾನ) ಆರಂಭವಾದ ದೇವಾಲಯದ ನಿರ್ಮಾಣದ ಕಾರ್ಯ ಒಂದು ಹಂತಕ್ಕೆ ತಲುಪಬೇಕಾದರೆ 40 ವರ್ಷ ಬೇಕಾಯಿತು. ನಂತರ ದೇವಾಲಯದ ಕಲಾ, ಕುಸುರಿಗಳ ಕೆಲಸ ಪೂರ್ಣವಾಗುವುದಕ್ಕೆ ೮೦ ವರ್ಷ ಕಾಲ ತೆಗೆದುಕೊಂಡಿತು. ಈ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ನಾಲ್ಕು ತಲೆಮಾರಿನ ಅರಸರು (ವಿಷ್ಣುವರ್ಧನ, 1ನೇ ನರಸಿಂಹ, 2ನೇ ನರಸಿಂಹ, 2ನೇ ಬಲ್ಲಾಳ) ತೊಡಗಿಕೊಂಡಿದ್ದು, ಸುಮಾರು 20 ಸಾವಿರ ಶಿಲ್ಪಿಗಳ ಶ್ರಮವಿದೆ.

ಹಳೇಬೀಡು ದೇವಾಲಯದ ಹೊರಭಿತ್ತಿಯಲ್ಲಿ ಇರುವ ಗಗನಯಾತ್ರಿಗಳ ಶಿಲ್ಪ ಸಮೂಹವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇವತ್ತಿನ ಗಗನಯಾನಿಗಳು ತಲೆಗೆ ಧರಿಸುವ ಹೆಲ್ಮೆಟ್‌ಗಳನ್ನು (ಶಿರಸ್ರಾಣ) ಗೋಡೆಯ ಮೇಲೆ ಕೆತ್ತಲಾಗಿರುವ ಶಿಲ್ಪಗಳಿಗೆ ತೋಡಿಸಲಾಗಿದೆ. ಅಷ್ಟೆ ಅಲ್ಲದೆ ಪ್ರತಿಯೊಬ್ಬರು ಗಗನಯಾತ್ರಿ ಹಾಸ್ಟ್ರೋನಾಟ್‌ಗಳ ರೀತಿಯಲ್ಲೇ ತಮ್ಮ ಕೈಗಳಿಗೆ ಗ್ಲೌಸ್‌ಗಳನ್ನು ಕೂಡ ಧರಿಸಿದ್ದಾರೆ. ಇಷ್ಟಕ್ಕೂ ೯೦೦ ವರ್ಷಗಳ ಹಿಂದೆ ನಮ್ಮ ಶಿಲ್ಪಿಗಳಿಗೆ ಇಂತಹ ಚಿತ್ರದ ಕಲ್ಪನೆ ಹೇಗೆ ಬಂದಿತು. ಆ ಕಾಲದಲ್ಲಿಯೇ ಅಸ್ಟ್ರೊನಾಮಿ ಬಗ್ಗೆ ಗೊತ್ತಿತ್ತಾ? ಅಂದರೆ ಗಗನಯಾನದ ಪರಿಚಯ ಇತ್ತಾ. ಇದು ಬರಿ ಕಲ್ಪನೆ ಎಂದು ಹೇಳದರೆ ಈ ರೀತಿಯ ವಸ್ತ್ರವಿನ್ಯಾಸಗಳನ್ನು ಕಲ್ಲುಗಳಲ್ಲಿ ಕೆತ್ತಿರುವುದು ಹೇಗೆ ಸಾಧ್ಯ. ಇದನ್ನು ಶಿಲ್ಪಿ ಎಲ್ಲಾದರೂ ನೋಡಿರಬೇಕು. ಇಲ್ಲಾ ಈ ಪರಿಕಲ್ಪನೆ ಬಗ್ಗೆ ಓದಿರಬೇಕು. ಈ ಎರಡೂ ವಿಚಾರದಲ್ಲಿ ಏನೇ ಹಾಗಿದ್ದರೂ ಆ ಜ್ಞಾನ ಸಂಪತ್ತು ನಮ್ಮ ಪೂರ್ವಿಕರಲ್ಲಿ ಇತ್ತು ಎಂಬುವುದನ್ನು ಒಪ್ಪಿಕೊಳ್ಳಬೇಕು.

ನಮ್ಮ ಇತಿಹಾಸಕಾರರಿಗೆ, ಪುರಾತತ್ವ ವಿದ್ವಾಂಸರಿಗೆ ಗಗನಯಾನಿಗಳ ಶಿಲ್ಪ ಸಮೂಹದ ಹಿಂದಿರುವ ರಹಸ್ಯವನ್ನು ಇವತ್ತಿಗೂ ಬಗೆಹರಿಸಲು ಸಾಧ್ಯವಾಗಿಲ್ಲ.

ಇಲ್ಲಿರುವ ಮತ್ತೊಂದು ಶಿಲ್ಪವಿಗ್ರಹ ಎಂದರೆ ಒಬ್ಬ ವ್ಯಕ್ತಿ ಟೆಲಿಸ್ಕೋಪು ಹಿಡಿದು ನಿಂತಿರುವ ದೃಶ್ಯವನ್ನು ಕೆತ್ತಲಾಗಿದೆ. ಸಾಮಾನ್ಯವಾಗಿ ನಾವು ಒಂದು ಕಣ್ಣನ್ನು ಮುಚ್ಚಿ ಮತ್ತೊಂದು ಕಣ್ಣಿನಿಂದ ದೂರದರ್ಶಕದ ಮೂಲಕ ನೋಡುವಂತೆಯೇ ಈ ಶಿಲ್ಪವನ್ನು ಕೆತ್ತಲಾಗಿದೆ.

ಇಷ್ಟಕ್ಕೂ ಈ ಟೆಲಿಸ್ಕೋಪ್ ಉಪಕರಣ ಬಳಕೆಗೆ ಬಂದಿದ್ದು 1608ರಲ್ಲಿ. ಅಂದರೆ ಕೇವಲ ನಾಲ್ಕು ನೂರು ವರ್ಷಗಳ ಹಿಂದೆ ಎನ್ನುತ್ತಾರೆ. ಆದರೆ ಹಳೇಬೀಡಿನ ದೇವಾಲಯ ನಿರ್ಮಾಣ ಮಾಡಿರೋದು ೨೦೦ ವರ್ಷಗಳ ಹಿಂದೆ ಆ ಕಾಲದಲ್ಲಿ ಶಿಲ್ಪಿಗಳಿಗೆ ಈ ಟೆಲಿಸ್ಕೋಪ್‌ನ ಕಲ್ಪನೆ ಹೇಗೆ ಬಂತು ಈ ಪ್ರಶ್ನೆಗೆ ಇವತ್ತಿಗೂ ಉತ್ತರ ಸಿಕ್ಕಿಲ್ಲ.

ಪುರಾತನ ಭಾರತೀಯರಿಗೆ ಗೊತ್ತಿದ್ದ ವಿಜ್ಞಾನ ಮತ್ತು ಸಂಶೋಧನೆಗಳ ಬಗ್ಗೆ ಹೇಳಿದಾಗ ಇದು ಸುಳ್ಳು, ಇದನ್ನು ಕಂಡುಹಿಡಿದಿದ್ದು ಪಾಶ್ಚಿಮಾತ್ಯ ವಿಜ್ಞಾನಿಗಳೇ ಎಂದು ವಾದ ಮಾಡುವ ಮೂರ್ಖರ ಅಜ್ಞಾನ ಸ್ಪಷ್ಟವಾಗುತ್ತದೆ. ಇನ್ನು ಮುಂದಾದರೂ ನಮ್ಮ ಪೂರ್ವಿಕರ ಅಪಾರ ಜ್ಞಾನಸಂಪತ್ತನ್ನು ಅಭ್ಯಸಿಸಿ, ಪ್ರಾಚೀನ ಜ್ಞಾನ-ವಿಜ್ಞಾನ ತಂತ್ರಜ್ಞಾನ ಪರಿಕಲ್ಪನೆಯು ಎಲ್ಲರಲ್ಲೂ ಮೂಡಲಿ ಎಂದು ಆಶಿಸುತ್ತೇನೆ.

* * * * *

## ಸಮಯ

**- ದೇವರಾಜ್ ಕೆ. ತೃತೀಯ ಬಿ.ಕಾಂ**

ಯಾರು ಕಂಡುಹಿಡಿದರೋ ಈ ಸಮಯ...!
ಕರಿಯ, ಬಿಳಿಯ ಎಂದು ನೋಡುವುದಿಲ್ಲ ಇದು ಸರಿಯ
ಒಂದಲ್ಲ ಒಂದು ಬಾರಿ ಕಾಣಿಸುತ್ತದೆ ಒಂದು ಗತಿಯ
ಕಷ್ಟದ ಸಮಯವೆಂದರೆ ಎಲ್ಲರಿಗೂ ಭಯ
ಒಳ್ಳೆ ಸಮಯಕ್ಕೆ ಕಾದರೆ ಅವರು ಮಾಯ
ಎಲ್ಲಾ ಸಮಯವೂ ತಿಳಿಸುತ್ತದೆ ಅದರ ಬೆಲೆಯ
ಇದಕ್ಕೆ ಅಂಜಿದರೆ ಸಮಯವೇ ನಮ್ಮ ಒಡೆಯ
ಧೈರ್ಯದಿಂದ ಎದುರಿಸಿದರೆ ಸಮಯ ನಮ್ಮ ಗೆಳೆಯ
ಎಲ್ಲಾ ಸಂದರ್ಭದಲ್ಲೂ ಕಲಿಸುತ್ತದೆ ಒಂದೊಂದು ವಿಷಯ
ಪ್ರತಿಕ್ಷಣವ ನಿರ್ಲ್ಯಕ್ಷಿಸಬೇಡಿ ಇದೇ ನನ್ನ ಆಶಯ

# ಗಣಿತದ ಪರಿಚಯ ಮತ್ತು ಮಹತ್ವ

– ದೀಪ ಬಿ.ಜೆ, ಸಹಾಯಕ ಪ್ರಾಧ್ಯಾಪಕಿ

ಗಣಿತದ ಮಹತ್ವ ಅರಿತವರು ಬಹಳ ಕಡಿಮೆ. 'ನವಿಲಿನ ಶಿರದಲ್ಲಿ ಶಿಖೆಯಿರುವಂತೆ, ಸರ್ಪಗಳ ಹೆಡೆಯಲ್ಲಿ ಮಣಿಗಳಿರುವಂತೆ ಗಣಿತವು ವೇದಾಂಗ ಶಾಸ್ತ್ರಗಳ ಶಿರೋಮಣಿಯಾಗಿದೆ' ಎಂದು ಯಜುರ್ವೇದಾಂಗ ಜ್ಯೋತಿಷ್ಯದಲ್ಲಿ ಗಣಿತಕ್ಕೆ ಕೊಟ್ಟಿರುವ ಪ್ರಾಶಸ್ತ್ಯವನ್ನು ಈ ರೀತಿ ವ್ಯಕ್ತಪಡಿಸಲಾಗಿದೆ. ವೇದಗಳ ಕಾಲದಿಂದಲೂ ಗಣಿತಕ್ಕೆ ಮಹತ್ವವಿದೆ.

ಸಂಸ್ಕೃತದ 'ಗಣನಾ' ಎಂಬ ಮೂಲಪದಕ್ಕೆ 'ತ' ಪ್ರತ್ಯಯ ಸೇರಿ 'ಗಣಿತ' ಎಂಬ ಪದ ಬಂದಿದೆ. ಸಂಸ್ಕೃತದಲ್ಲಿ ಗಣಿತಕ್ಕೆ 'ಮತಿಮಥಕ ಶಾಸ್ತ್ರ' ವೆಂದೂ ಕರೆದಿದ್ದಾರೆ. ಗಣಿತ ಎಂಬ ಪದವು ಆಂಗ್ಲ ಭಾಷೆಯ Mathematic ಎಂಬ ಪದಕ್ಕೆ ಸರಿಸಮವಾದ ಪದವಾಗಿದೆ. Mathematics ಪದವು ಗ್ರೀಕ್ ಭಾಷೆಯ Mathematike ಎಂಬ ಪದದಿಂದ ಬಂದಿದೆ. ಇಲ್ಲಿ Matheneian ಎಂದರೆ ಕಲಿಯುವುದು ಮತ್ತು Techne ಎಂದರೆ ಕಲೆ.

ಪ್ರಾಚೀನ ಕಾಲದ ಪುಟಗಳನ್ನು ತೆರೆದಾಗ, ವೇದಕಾಲೀನ ಭಾರತೀಯರ ಪ್ರಮುಖ ಧಾರ್ಮಿಕ ಆಚರಣೆಗಳಾದ 'ಯಜ್ಞವೇದಿಕೆ' ಗಳನ್ನು ನಿರ್ದಿಷ್ಟವಾದ ಆಕಾರ ಮತ್ತು ಗಾತ್ರಗಳನ್ನು ಹೊಂದಿರುವಂತೆ ವಿಶೇಷವಾಗಿ ನಿರ್ಮಿಸುತ್ತಿದ್ದರು. ಕಾರಣ ಅಂಥ ವೇದಿಕೆಗಳಲ್ಲಿನ ಯಜ್ಞಗಳು ಫಲಕಾರಿ ಎಂಬ ನಂಬಿಕೆ. ಅದಲ್ಲದೆ ಸಮಗ್ರ ಸೃಷ್ಟಿಯನ್ನು ಜನ ಕಲ್ಯಾಣದ ದೃಷ್ಟಿಯಿಂದ ಅರ್ಥೈಸಲು ಗಣಿತದ ಬೆಳವಣಿಗೆ ಪ್ರಾರಂಭವಾಯಿತು. ಕಾರಣ 'ಸೃಷ್ಟಿಯ ಭಾಷೆ ಗಣಿತ', 'ಸತ್ಯಾನ್ವೇಷಣೆಯ ಸತ್ಯದ ತರ್ಕ ಭಾಷೆಯೇ ಗಣಿತ', 'ಸಮಸ್ಯೆಗಳನ್ನು ಬಿಡಿಸುವ ಯುಕ್ತಿಗಳ ಹಾಗೂ ಬೌದ್ಧಿಕ ಸಾಮರ್ಥ್ಯಗಳ ಬೃಹತ್ ಸಂಗ್ರಹಣವೇ ಗಣಿತ', 'ಸೃಷ್ಟಿಯ ನಿಯಮಗಳನ್ನು ನಿಖರವಾಗಿ ತಿಳಿಯಲು ಬೇಕಾದ ಜ್ಞಾನಗಳ ತಳಹದಿ ಗಣಿತ'.

ವಿಜ್ಞಾನವಲ್ಲದ ಆರ್ಥಿಕ ಮಾದರಿಗಳ ನಿರ್ಮಾಣದಲ್ಲಿ ಗಣಿತವು ಅತ್ಯಂತ ಪ್ರಬಲ ಸಾಧನ. ಅಭಿವೃದ್ಧಿ ಹಾಗೂ ಮುಂದುವರಿಕೆಗೆ ಗಣಿತವೇ ಮೂಲಧಾರ ಹಾಗೂ ನಿಮಗೆ ತಿಳಿದಂತೆ ಹೆಚ್ಚು ನಿಖರವಾದ ಪ್ರಾಯೋಗಿಕ ಪರೀಕ್ಷೆಗಳಿಗೂ ಸಹಕಾರಿಯಾಗಿದೆ. ಪ್ರಾಚೀನ ಭಾರತೀಯರ ಕೊಡುಗೆಗಳಾದ 'ದಾಶಮಿಕ ಸಂಖ್ಯಾಪದ್ಧತಿ' ಹಾಗೂ ಸಂಖ್ಯಾಕ್ರಮಕ್ಕೆ ಮೂಲಾಧಾರ 'ಶೂನ್ಯ'. ಶೂನ್ಯದ ಕಲ್ಪನೆ ಮಾನವನ ಇತಿಹಾಸದ ದಿಕ್ಕನ್ನೇ ಬದಲಾಯಿಸಿದವು.

**ಬೀಜಗಣಿತ**:– 'ಆರ್ಯಭಟ' ಬೀಜಗಣಿತದ ಪಿತಾಮಹ. ಪ್ರಾಚೀನ ಈಜಿಪ್ಟಿಯನ್ನರು ಪ್ರಾರಂಭದಲ್ಲಿ ಬೀಜಗಣಿತವನ್ನು ತಿಳಿದಿದ್ದರು. ಆದರೆ ಪಾಶ್ಚಿಮಾತ್ಯದಲ್ಲಿ ಬೀಜಗಣಿತವನ್ನು ಅಲೆಕ್ಸಾಂಡ್ರಿಯಾದ ಡಯೋಫ್ಯಾಂಟಸ್ ಬೆಳಕಿಗೆ ತಂದನು. ಹಿಂದುಗಳು ಬೀಜಗಣಿತವನ್ನು ಪ್ರಸರಿಸಿದರು. 'Algebra' ಎಂಬ ಪದವು ಅರೇಬಿಕ್ ಭಾಷೆಯ ಅಲ್–ಜಬ್ರಲ್–ಮುಕಾಬಲಾ Al-jabr'al-muquabulah) ಎಂಬ ಪದದಿಂದ ಬಂದಿದೆ. Al ಎಂದರೆ the, Jabr' ಎಂದರೆ

ಒಂದು ಪರಿಮಾಣವನ್ನು ಒಂದು ಸಮೀಕರಣದ ಒಂದು ಬದಿಯಿಂದ ಇನ್ನೊಂದು ಬದಿಗೆ ಸ್ಥಳಾಂತರಿಸುವುದು, Muquabulah ಎಂದರೆ ಒಂದು ಸಮೀಕರಣದ ಎರಡೂ ಕಡೆಯಿಂದ ಸರಿಸಮವಾದ ಪರಿಣಾಮಗಳನ್ನು ಕಳೆಯುವುದು.

**ರೇಖಾಗಣಿತ:**– 'ಯೂಕ್ಲಿಡ್' ರೇಖಾಗಣಿತದ ಪಿತಾಮಹ. ರೇಖಾಗಣಿತದ ಪರಿಕಲ್ಪನೆ ಬಹಳ ಪುರಾತನವಾಗಿದ್ದು, ಅದರ ಬೆಳವಣಿಗೆಯು ಈಜಿಪ್ಟ್ ನಾಗರೀಕತೆಯಲ್ಲಿ ಕಂಡುಬರುತ್ತದೆ. 'ಜ್ಯಾಮಿತ್ರಿ' ಎಂಬ ಪದವು ಗ್ರೀಕ್‌ನ ಜಿಯೋ ಎಂದರೆ 'ಅಳತೆ' ಎಂಬ ಎರಡು ಪದಗಳ ಸಂಯೋಜನೆಯಿಂದ ಆಗಿದೆ. ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾದ 'ಪಿರಮಿಡ್ಡ್' ರಚನೆಯು ಈಜಿಪ್ಟಿಯನ್ನರು ರೇಖಾಗಣಿತದಲ್ಲಿ ಹೊಂದಿದ ಅಗಾಧ ಜ್ಞಾನವನ್ನು ನಿರೂಪಿಸುತ್ತದೆ.

**ಅಂಕಗಣಿತ** :– ಅಂಕಗಣಿತದ ಪಿತಾಮಹ ಭಾರತೀಯನಾದ 'ಬ್ರಹ್ಮಗುಪ್ತ'. ಅಂಕಗಣಿತವು ಸಂಖ್ಯೆಗಳ ವಿಜ್ಞಾನ. ಅಂಕಗಣಿತದ ಪದವು ಗ್ರೀಕ್ ನಾಮಪದ ಅರಿಥ್‌ಮೋಸ್ ನಿಂದ ಬಂದಿದೆ. ಅರಿಥ್‌ಮೋಸ್ ಎಂದರೆ ಸಂಖ್ಯೆ ಎಂದರ್ಥ. ಅಂಕಗಣಿತದ ಆರಂಭಿಕ ಬೆಳವಣಿಗೆಯು ಪ್ರಾಚೀನ ಈಜಿಪ್ಟಿನವರು ಮತ್ತು ಬ್ಯಾಬಿಲೋನಿಯನ್ನರು ಅಂಕಿಗಳು ಮತ್ತು ಸ್ಥಳ ಮೌಲ್ಯಗಳನ್ನು ಬಳಸಿಕೊಂಡು ಲೆಕ್ಕ ಪರಿಶೋಧನೆ ದಾಖಲಿತ ಪುರಾವೆಗಳಲ್ಲಿ ಕಂಡುಬರುವುದು.

* * * * *

## ಸಂವಿಧಾನ ಶಿಲ್ಪಿ

**- ಕಾವ್ಯ ಪಿ.ವೈ, ದ್ವಿತೀಯ ಬಿ.ಕಾಂ**

ಮುಗ್ಧ ಜನರ ಮನದಿ ಭೀಮ್‌ರಾವ್ ಎಂದೇ ಪ್ರಸಿದ್ಧಿ ಆದೆ ನೀ
ಶಿಕ್ಷಣ ಅರಿಯದ ಜನರಿಗೆ ದಾರಿದೀಪ ನೀ
ಅವಮಾನಿಸಿದವರ ಎದುರೆ ಬಲಿಷ್ಠವಾಗಿ ನಿಲ್ಲಲು ಆದರ್ಶ ಆದೆ ನೀ

ಧ್ವನಿ ಎತ್ತಲಾಗದವರ ಧೈರ್ಯ ನೀ
ಅಸ್ಪೃಶ್ಯತೆಯ ನಿವಾರಣೆಗೆ ದುಡಿದೆ ನೀ
ಎಲ್ಲರೂ ಜಗದಲ್ಲಿ ಸಮಾನರು ಎಂದು ನುಡಿದೆ ನೀ

ಬಡವರ ನೋವಿಗೆ ಮಿಡಿದ ಕಾರುಣ್ಯ ಸಿಂಧು
ಸ್ವಾಭಿಮಾನವೇ ಜೀವನ ಎಂದು ಬದುಕಿದ್ದಿರಿ ಅಂದು
ತಲೆ ಎತ್ತಿ ನಡೆಯಲು ಶಕ್ತಿ ಬಂದಿದೆ ಇಂದು
ಚಿರಕಾಲ ಉಳಿದಿರುವಿರಿ ನಮ್ಮ ಹೃದಯದಲ್ಲಿ ಎಂದೂ

# ಕಾಲದ ಮಹತ್ವ

**– ಭೂಲಕ್ಷ್ಮಿ .ಹೆಚ್.ಆರ್., ಸಹಾಯಕ ಪ್ರಾಧ್ಯಾಪಕಿ**

'ಪ್ರತಿ ಕ್ಷಣಮಯಂ ಕಾಲಃ ಕ್ಷೀಯಮಣೋನ ಲಕ್ಷ್ಯತೇ ।
ಆಮ ಕುಂಭ ಇವಾಂಭಃಸ್ಥೋ ವಿಕೀರ್ಣೋನ ವಿಭಾವ್ಯತೇ ॥'

ಇದರ ತಾತ್ಪರ್ಯ ಹೀಗಿದೆ : 'ಪ್ರತಿ ಕ್ಷಣದಲ್ಲಿಯೂ ಕಾಲವೂ ಕಳೆಯುತ್ತಿದ್ದರೂ ಗೊತ್ತಾಗುವುದಿಲ್ಲ. ಹಸಿಯಾದ ಮಡಿಕೆಯು ನೀರಿನಲ್ಲಿ ಕರಗುತ್ತಿರುತ್ತದೆ; ಆದರೆ ಅದು ಗೊತ್ತಾಗುವುದಿಲ್ಲ.'

ನಮ್ಮೆಲ್ಲರ ಸ್ಥಿತಿಯನ್ನು ಈ ಸುಭಾಷಿತ ಸೊಗಸಾಗಿ ನಿರೂಪಿಸಿದೆ. ಪ್ರತಿಕ್ಷಣವು ಹೊಸತು, ಹಿಂದೆ ಹುಟ್ಟಿಲ್ಲ, ಮುಂದೆಯೂ ಹುಟ್ಟೊಲ್ಲ. ಇಂದೇ ಹುಟ್ಟಿ ಇಂದೇ ಸಾಯುತ್ತದೆ. ಈ ಕ್ಷಣ ನಮ್ಮದು ಪ್ರತಿಕ್ಷಣಗಳನ್ನು ಸದ್ಬಳಕೆ ಮಾಡಿಕೊಳ್ಳುವುದು ಪ್ರತಿ ಮನುಷ್ಯನ ಆದ್ಯ ಕರ್ತವ್ಯ. ಇದು ಕಾಲಕ್ಕೆ ಕೊಡುವ ಮಹತ್ವ ಗೌರವ.

'ಸಮಯವೇ ಸಂಪತ್ತು' ಯಾವುದೇ ಯಶಸ್ವಿ ವ್ಯಕ್ತಿಗಳ ಯಶಸ್ಸಿನ ಗುಟ್ಟು ಸಮಯದ ಸದ್ಬಳಕೆಯಾಗಿರುತ್ತದೆ. ಕಾಲವನ್ನು ಸರಿಯಾಗಿ, ಅರ್ಥಪೂರ್ಣವಾಗಿ, ವಿವೇಚನೆಯುಕ್ತವಾಗಿ, ಪ್ರಜ್ಞಾಪೂರ್ವಕವಾಗಿ, ಸತ್ವಯುತವಾಗಿ ಬಳಸಿಕೊಂಡು ಮನುಷ್ಯನು ಯಶಸ್ಸಿನ ಉತ್ತುಂಗಕ್ಕೇರಿ ಸಾರ್ಥಕ, ಸಂತೃಪ್ತ ಜೀವನವನ್ನು ನಡೆಸಬೇಕು.

ಮನುಷ್ಯನ ಜೀವನ ಕ್ಷಣಿಕವಾದುದು. ಆಯುಷ್ಯವನ್ನು ಕೂಡಿಡಲು ಯಾರಿಂದಲೂ ಸಾಧ್ಯವಿಲ್ಲ. ಕಾಲ ಸರಿಯುತ್ತಿರುತ್ತದೆ. ಕಳೆದು ಹೋದ ಕ್ಷಣಗಳನ್ನು ಎಂದಿಗೂ ಮತ್ತೆ ತರಲು ಸಾಧ್ಯವಿಲ್ಲ. ಆದ್ದರಿಂದ ವಿದ್ಯಾರ್ಥಿಗಳಾಗಲಿ, ವ್ಯಕ್ತಿಗಳಾಗಲಿ ತಮ್ಮ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಕಲಿಕೆಯ ತೀವ್ರತೆಯ ಜೊತೆಗೆ ಸಮಯವನ್ನು ವ್ಯರ್ಥ ಮಾಡದೆ ಪರಿಪೂರ್ಣವಾಗಿ ಬಳಸಿಕೊಂಡರೆ ಯಶಸ್ಸು ಅವರ ಅಂಗೈಯಲ್ಲಿರುತ್ತದೆ. ಯಶಸ್ಸಿನ ಕೀಲಿಕೈ ಸಮಯದ ಸದ್ಬಳಕೆಯಾಗಿರುತ್ತದೆ.

ಕಲಿಯುವ ವಯಸ್ಸಿನಲ್ಲಿ ಕಲಿಯದೇ ಸಮಯ ವ್ಯರ್ಥ ಮಾಡಿ ಮುಂದೆ ಪಶ್ಚಾತ್ತಾಪ ಪಡುವ ಪಾಡು ನಮ್ಮದಾಗಬಾರದು. ಸಮಯಕ್ಕೆ ಇಂದು ನಾವು ಬೆಲೆಕೊಟ್ಟರೆ ಮುಂದೆ ಸಮಯ ನಮಗೆ ಅತ್ಯುತ್ತಮವಾದ ಬೆಲೆ ಕೊಡುತ್ತದೆ. ಸಮಯದ ಅರಿವು ಜ್ಞಾನವಾಗಿರುತ್ತದೆ.

ಕಾಲದ ಜೊತೆ ನಾವು ಹೆಜ್ಜೆ ಹಾಕದಿದ್ದರೆ, ಜೀವನದಲ್ಲಿ ಹಿಂದೆ ಬೀಳುತ್ತೇವೆ. ಬಯಸಿದ ಬದುಕನ್ನು ಅನುಭವಿಸಲಾಗದೆ ಮತ್ತೊಬ್ಬರ ಬದುಕನ್ನು ನೋಡಿ ಅಸೂಯೆ ಪಡಬೇಕಾಗುತ್ತದೆ. ಕಾಲ ಹೇಳುತ್ತದೆ:

"ಸುಮ್ನೆ ಕಾಲ ಕಳೆದೆಯಲ್ಲ ನನ್ನ ಮೌಲ್ಯ ಮರೆತು
ಮುಂದೊಂದಿನ ಅರಿವಾಗುವುದು ನಿನಗೆ ಅದು
ನನ್ನದಲ್ಲ, ನಿನ್ನದ್ದು ಎಂದು"

ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವೇನು ಎಂದು ವ್ಯಥೆ ಪಡುವ ಬದಲು ಕಾಲದ ಮಹತ್ವವನ್ನರಿತು, ಕಾಲವನ್ನು ಗೌರವಿಸುವ ಮೂಲಕ ನಮ್ಮನ್ನು ಗೌರವಿಸಿ, ದುಡಿಸಿಕೊಂಡು ಯಶಸ್ವಿ ಜೀವನಯತ್ತ ದಾಪುಗಾಲು ಹಾಕುವುದೇ ಸಮಯಕ್ಕೆ ನಾವು ಕೊಡುವ ಮಹತ್ವವಾಗಿದೆ.

* * * * *

## ವೀರಯೋಧರಿಗೆ ನಮನ

- ಸಹನ ಆರ್, ದ್ವಿತೀಯ ಬಿ.ಕಾಂ.,

ಭರತ ಭೂಮಿಯನ್ನು ಸ್ವತಂತ್ರಗೊಳಿಸಿದ
ಭಾರತಾಂಬೆಯ ಪುತ್ರರಿಗೆ ಇದೋ ನನ್ನ ನಮನ!

ಮಾತೃಭೂಮಿಯ ಮಾತೃಭಾಷೆಗಳ ಉಳಿವಿಗೆ
ಅಂದೊಮ್ಮೆ ಹುರುಪು ತಂದ ನೀವೆಲ್ಲ
ಭಾರತಾಂಬೆಯ ಪುತ್ರರು
ನಮ್ಮ ವೀರರಿಗೆ ಇದೋ ನನ್ನ ನಮನ!



ಹಂತಕರಾದರೂ ಅವರೇ ನಮ್ಮ
ಬಂಧುಗಳೆನ್ನುವ ಉದಾರಿಗಳು ತುಂಬಿದ
ಭಾರತ ಮಾತೆಯ ಮಡಿಲಿಗೆ
ಅದೋ ಬಂದರು ಬಂಧುಗಳೆಂದು
ರಕ್ತ ಹೀರುವ ರಕ್ಕಸರು

ಗುಂಡಿಗೆ ಎದೆಕೊಟ್ಟು
ರಕ್ತವ ಕಾರಿ ಹೋರಾಡಿ
ತನುಮನವರ್ಪಿಸಿ ಕಾದಾಡಿ
ಭಾರತಾಂಬೆಯ ರಕ್ಷಿಪ
ವೀರಯೋಧರಿಗೆ ಇದೋ ನನ್ನ ನಮನ!

ಶಾಂತಿ ಬೀಡಿನ ಸಿಂಹಗಳಿಗೆ
ಕೆಚ್ಚೆದೆ ನಾಡಿನ ಕಲಿಗಳಿಗೆ
ಇದೋ ನನ್ನ ಕೋಟಿ ನಮನ.

# ಹೆಣ್ಣು ಭ್ರೂಣ ಹತ್ಯೆ – ಸಮಸ್ಯೆ ಮತ್ತು ಸವಾಲು

– ಕಾವ್ಯ ಬಿ.ಹೆಚ್, ಸಹಾಯಕ ಪ್ರಾಧ್ಯಾಪಕಿ

ಹೆಣ್ಣು ಮತ್ತು ಗಂಡು ಒಂದು ರಥದ ಎರಡು ಚಕ್ರಗಳಿದ್ದಂತೆ. ಒಂದೇ ಚಕ್ರವು ರಥವನ್ನು ಎಳೆಯಲಾರದು. ಇಬ್ಬರ ಬೆಳವಣಿಗೆಗೆ ಪರಸ್ಪರರ ಕೊಡುಗೆ ಅಪಾರವಾಗಿರುತ್ತದೆ. ನಮ್ಮಲ್ಲಿ ಮೊದಲಿನಿಂದಲೂ ಹೆಣ್ಣನ್ನು ಪೂಜ್ಯನೀಯ ಭಾವನೆಯಿಂದ ಗೌರವಿಸುತ್ತಲೇ ಬಂದಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಗಂಡಿಗಿಂತ ಹೆಣ್ಣು ಹೆಚ್ಚು ಎಂದವರೂ ಇದ್ದಾರೆ. ಗಂಡು ಪ್ರಕೃತಿಯಲ್ಲಿ ನವೀನಕಾರಿ ಅಂಶಗಳನ್ನು ಪ್ರತಿನಿಧಿಸಿದರೆ, ಹೆಣ್ಣು ರಚನಾತ್ಮಕ ಕಾರ್ಯಗಳ ಪ್ರತಿನಿಧಿಯಾಗಿದ್ದಾಳೆ.

ದೇವರು ಎಲ್ಲಾ ಕಡೆ ಇರಲಾರದೆ ತಾಯಿಯನ್ನು ಸೃಷ್ಟಿಸಿದ ಎನ್ನುತ್ತಾರೆ. 'ಜನನೀ ತಾನೇ ಮೊದಲು ಗುರುವು', 'ಹೆಣ್ಣು ಸಂಸಾರದ ಕಣ್ಣು' ಮುಂತಾದವು ಸಮಾಜದಲ್ಲಿ ಹೆಣ್ಣಿನ ಬಗೆಗಿರುವ ಸಕಾರಾತ್ಮಕ ಅನಿಸಿಕೆಗಳು ಎಲ್ಲರ ಜೀವನದಲ್ಲಿ ಹಾಸುಹೊಕ್ಕಾಗಿವೆ. ಮಾಂಸದ ಮುದ್ದೆಯಂತಿರುವ ಮಗುವನ್ನು ಪಾಲಿಸಿ, ಪೋಷಣೆ ಮಾಡಿ, ಉತ್ತಮ ನಾಗರೀಕನನ್ನಾಗಿ ತಯಾರಿಸುವ ತಾಯಿಯೂ ಸಮಾಜದಲ್ಲಿ ಪ್ರಶಂಸನೀಯಳೇ. ಅಷ್ಟೇ ಏಕೆ ನಮ್ಮ ಸಂವಿಧಾನವು ಮಹಿಳೆಗೆ ಸಮಾನ ಘನತೆ ಮತ್ತು ಗೌರವಗಳನ್ನು ನೀಡಿದೆ.

ಇಂದು ನಾವು 21ನೆಯ ಶತಮಾನದಲ್ಲಿದ್ದೇವೆ. ವಿಜ್ಞಾನ–ತಂತ್ರಜ್ಞಾನದ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆಯಾಗಿದೆ. ಪುರುಷರೊಡನೆ ಎಲ್ಲಾ ಕ್ಷೇತ್ರಗಳಲ್ಲೂ ಸ್ತ್ರೀಯು ಸರಿಸಮಾನಳಾಗಿ ದುಡಿಯುತ್ತಿದ್ದಾಳೆ. ಆದರೂ ಸ್ತ್ರೀಯರ ಮೇಲಿನ ಶೋಷಣೆ ಕಡಿಮೆಯಾದಂತಿಲ್ಲ. ಗಂಡು–ಹೆಣ್ಣು ಸಮಾನರು, ಸ್ತ್ರೀ ಸ್ವಾತಂತ್ರ್ಯ ಎಂದೆಷ್ಟೇ ಹೇಳಿದರೂ, ಅಹಿತಕರ ಘಟನೆಗಳು ಪುನರಾವರ್ತನೆಯಾಗುತ್ತಲೇ ಇವೆ. ಶೋಷಣೆಯ ಸಾಲಿಗೆ ಸೇರಿಸುವ ಮತ್ತೊಂದು ಹೊಸ ಸಮಸ್ಯೆಯೆಂದರೆ 'ಹೆಣ್ಣು ಭ್ರೂಣ ಹತ್ಯೆ'. ಅಂದರೆ ಉದರದಲ್ಲಿರುವ ಮಗುವು ಹೆಣ್ಣೋ–ಗಂಡೋ ಎಂಬುದನ್ನು ಮೊದಲೇ ತಿಳಿದುಕೊಂಡು, ಮಗು ಹೆಣ್ಣಾಗಿದ್ದಲ್ಲಿ ಅದನ್ನು ಭ್ರೂಣಾವಸ್ಥೆಯಲ್ಲಿಯೇ ಹತ್ಯೆ ಮಾಡುವುದು ಎಂತಹ ನಾಚಿಕೆಗೇಡಿನ ಕೆಲಸ. ಧಾರ್ಮಿಕ ಹಿನ್ನೆಲೆಯ ದೇಶವೆಂದು ಗರ್ವಪಟ್ಟುಕೊಳ್ಳುತ್ತಾ ಶಿಶು ಹತ್ಯೆ ಮಹಾಪಾಪ ಎಂಬ ಪೂರ್ವಜರ ಉಪದೇಶವನ್ನು ಮರೆತಿರುವುದು ಸರಿಯೇ?

ಸ್ತ್ರೀ ಭ್ರೂಣ ಹತ್ಯೆಯಿಂದ ಹೆಣ್ಣಿಗೆ ಅವಮಾನ ಒಂದೇ ಅಲ್ಲ. ಸಮಾಜದ ಗಂಡು ಹೆಣ್ಣಿನ ಪ್ರಮಾಣದಲ್ಲಿ ಏರುಪೇರಾಗುತ್ತದೆ. ಈಗ ಭಾರತದಲ್ಲಿ ಸುಮಾರು 1000 ಪುರುಷರಿಗೆ 940 ಸ್ತ್ರೀಯರಿದ್ದಾರೆ (1000:940). ಕರ್ನಾಟಕದಲ್ಲಿ ಮೂರು ಜಿಲ್ಲೆಗಳು ಮಾತ್ರ ಪ್ರತಿ ಸಾವಿರ ಪುರುಷರಿಗೆ ಸಾವಿರಕ್ಕಿಂತ ಹೆಚ್ಚು ಸ್ತ್ರೀಯರನ್ನು ಹೊಂದಿವೆ. ಅವುಗಳೆಂದರೆ ಉಡುಪಿ ಜಿಲ್ಲೆಯಲ್ಲಿ 1000 ಪುರುಷರಿಗೆ 1127 ಸ್ತ್ರೀಯರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1000 ಪುರುಷರಿಗೆ 1023

ಸ್ತ್ರೀಯರು ಹಾಗೂ ಹಾಸನ ಜಿಲ್ಲೆಯಲ್ಲಿ 1000 ಪುರುಷರಿಗೆ 1005 ಸ್ತ್ರೀಯರಿದ್ದಾರೆ ಎಂತಹ ವಿಪರ್ಯಾಸದ ಸಂಗತಿ. ಹೆಣ್ಣು ಮಗು ಹೊರೆಯೆಂಬ ಭಾವನೆಯನ್ನು ನಮ್ಮ ಸಮಾಜ ಇಂದಿಗೂ ಹೊಂದಿರುವುದು ದುರಂತ.

ಭ್ರೂಣ ಹತ್ಯೆಯೂ ಸೇರಿದಂತೆ ಹೆಣ್ಣಿನ ಎಲ್ಲಾ ತರಹದ ಶೋಷಣೆಗೂ ಕೇವಲ ಸರ್ಕಾರದ ಕಾನೂನೊಂದೇ ಪರಿಹಾರವಾಗಲಾರದು. ಸಮಾಜ, ಸಂಘಸಂಸ್ಥೆಗಳು, ಗಂಡು ಹೆಣ್ಣುಗಳೂ ಇದರಲ್ಲಿ ಭಾಗವಹಿಸಬೇಕು. ಹಾಗೆ ಭಾಗವಹಿಸುವವರಿಗೆ ತಮ್ಮ ಹೋರಾಟವು ಪರಸ್ಪರ ಅಲ್ಲ ಎಂಬುದು ತಿಳಿದಿರಬೇಕು. ಇಂತಹ ತಿಳುವಳಿಕೆಗೆ ಶಿಕ್ಷಣವೊಂದೇ ಮಾರ್ಗ. ಶಿಕ್ಷಣ ಪಡೆದು ತನ್ನ ಶೋಷಣೆಯ ವಿರುದ್ಧ ಸಿಡಿದೇಳುವ ಹೆಣ್ಣು, ತಾನು ಸರ್ವ ಸಮರ್ಥಳೆಂದು ಸಮಾಜಕ್ಕೆ ತಿಳಿಸುವ ಅಗತ್ಯ ಈಗ ಒದಗಿ ಬಂದಿದೆ.

* * * * *

## ಚುಟುಕುಗಳು

**– ಸಿಂಧು ಎಂ., ದ್ವಿತೀಯ ಬಿ.ಎಸ್ಸಿ.,**

ಸ್ನೇಹದಲ್ಲಿ ಕಂಡೆ ಆತ್ಮವಿಶ್ವಾಸವ<br>
ತಂದೆಯಲ್ಲಿ ಕಂಡೆ ಜೀವನ ಪಾಠವ<br>
ತಾಯಿಯಲ್ಲಿ ಕಂಡೆ ಪ್ರೀತಿಯ ಭಾವವ<br>
ದೇವರಲ್ಲಿ ಕಂಡೆ ವಿನಯದ ಜಾಲವ<br>
ಆದರೆ ಗುರುವಿನಲ್ಲಿ ಕಂಡೆ ಈ ಎಲ್ಲಾ ಮನೋಭಾವವ

* * *



ದೇಶಕ್ಕೆ ಮಾದರಿಯಾಗು<br>
ಯುವಕರಿಗೆ ಸ್ಫೂರ್ತಿಯಾಗು<br>
ಮಕ್ಕಳಿಗೆ ಆಸರೆಯಾಗು<br>
ದ್ವೇಷಿಗಳಿಗೆ ಹಿತೈಷಿಯಾಗು<br>
ಆಗೆಯೇ ಗುರುವಿಗೆ ದಾಸನಾಗು

* * *

ಕಲಾಂ ನಿಮ್ಮಯ ಕನಸು<br>
ನಾವು ಮಾಡಲಿದ್ದೇವೆ ನನಸು<br>
ವಿಜ್ಞಾನದ ಸೊಗಸು<br>
ಅದುವೆ ನಮ್ಮೆಲ್ಲರ ಮನಸು<br>
ಒಂದಾದರೆ ಆಗಲಿದೆ<br>
ದೇಶದ ಯಶಸ್ಸು

* * *

# ಯಾರೂ ಕದಿಯದ ಆಸ್ತಿ ಶಿಕ್ಷಣ

– ಚಂದನ ಎಂ.ಎಸ್, ತೃತೀಯ ಬಿ.ಎಸ್ಸಿ.,

ಒಂದು ಪಕ್ಷಿ ಜೇನುಹುಳುವನ್ನು ಕೇಳುತ್ತೆ...'ತುಂಬಾ ಕಷ್ಟಪಟ್ಟು ನೀನು ಜೇನಿನ ಗೂಡನ್ನು ಕಟ್ಟುತ್ತೀಯಾ, ಆದರೆ ಈ ಜನರು ನೀನು ಕಟ್ಟಿದ ಜೇನನ್ನು ಕದಿಯುತ್ತಾರೆ. ನಿನಗೆ ಇದರಿಂದ ನೋವಾಗುವುದಿಲ್ಲವೇ?'

ಅದಕ್ಕೆ ಜೇನುಹುಳು ಹೇಳಿತು: 'ಇಲ್ಲ.! ಜನರು ಜೇನನ್ನು ಕದಿಯಬಹುದು ಆದರೆ, ಯಾರೊಬ್ಬರೂ ಸಹ ನಾನು ಜೇನು ತಯಾರಿಸುವುದರ ಬಗ್ಗೆ ಅಥವಾ ಜೇನು ತಯಾರಿಸುವ ಕಲೆಯನ್ನು ಕದಿಯಲು ಸಾಧ್ಯವಿಲ್ಲ.' ಎಂದು.

ಹಾಗೆಯೇ, 'ಶಿಕ್ಷಣ' ನಮ್ಮ ಜ್ಞಾನವನ್ನು ಅಭಿವೃದ್ಧಿ ಪಡಿಸಲು ಮತ್ತು ನಮ್ಮ ಆಲೋಚನಾ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಶಿಕ್ಷಣವಿಲ್ಲದೆ ಜೀವನದಲ್ಲಿ ಯಾವುದೇ ಸಂತೋಷವಿಲ್ಲ. ಶಿಕ್ಷಣ ಯಾವಾಗಲೂ ವ್ಯಕ್ತಿಗಳ ಜೀವನದಲ್ಲಿ ಸಿಹಿ ಕ್ಷಣಗಳನ್ನು ತರುತ್ತದೆ. ಮತ್ತೆ, ಶಿಕ್ಷಣ ಎನ್ನುವುದು ಸಮೃದ್ಧಿಯಲ್ಲಿ ಆಭರಣ ಇದ್ದಂತೆ ಪ್ರತಿಕೂಲ ಸಂದರ್ಭದಲ್ಲಿ ಆಶ್ರಯತಾಣದಂತೆ ಶಿಕ್ಷಣವು ಬರೀ ಮಾಹಿತಿಯ ಶೇಖರಣೆಯಲ್ಲ, ಮೂಲತಃ ಅದು ಒಬ್ಬ ವ್ಯಕ್ತಿಯ ಗ್ರಹಣಶಕ್ತಿಯನ್ನು ವೃದ್ಧಿಸುತ್ತದೆ. ಹಾಗೆ ಅದೃಷ್ಟದ ಮೇಲಿನ ನಂಬಿಕೆಯನ್ನು ತ್ಯಜಿಸಿ, ನಿಮ್ಮ 'ವಿದ್ಯೆ' ಎಂಬ ಶಕ್ತಿಯ ಮೇಲೆ ನಂಬಿಕೆ ಇಡಿ. ಜೀವನದಲ್ಲಿ ಮುಂದೆ ಬರುತ್ತೀರಿ.

'ಹೆಜ್ಜೆ–ಹೆಜ್ಜೆಯಲ್ಲೂ ನಮ್ಮ ಅಜ್ಞಾನವನ್ನು ಕಂಡುಕೊಳ್ಳುತ್ತ ಹೋಗುವುದೇ ಶಿಕ್ಷಣ.'

ಶಿಕ್ಷಣವೆಂದರೆ, ಪುಸ್ತಕದ ಜ್ಞಾನವೇ ಮಾತ್ರ ಅಲ್ಲ. ಸಂಸಾರಿ, ಮನುಷ್ಯ ಮತ್ತು ಕಾರ್ಯ ಕಲಾಪಗಳ ಪರಸ್ಪರ ಸಂಯೋಜನವೇ ಶಿಕ್ಷಣ, ಶಿಕ್ಷಣವು ಮನುಷ್ಯನನ್ನು ಶ್ರೇಷ್ಠ ನಾಗರೀಕನನ್ನಾಗಿ ಮಾಡುತ್ತದೆ. ಮನುಷ್ಯರಲ್ಲಿ ಪರಿಪೂರ್ಣತೆಯನ್ನು ಹಿಗ್ಗಿಸುವುದೇ ಶಿಕ್ಷಣ. ಶಿಕ್ಷಣದ ಉದ್ದೇಶ ಕೇವಲ ಮಾಹಿತಿಗಳನ್ನು ಸಂಗ್ರಹಿಸುವುದಿಲ್ಲ; ಮನಸ್ಸನ್ನು ಕೇಂದ್ರೀಕರಿಸುವುದು. ಇಡೀ ಜಗತ್ತನ್ನೇ ಬದಲಾಯಿಸಲು ಬಳಸಬಹುದಾದ ಅತ್ಯಂತ ಶಕ್ತಿ ಶಾಲಿ ಅಸ್ತ್ರ 'ಶಿಕ್ಷಣ'. ಶಾಲೆಯಲ್ಲಿ ನಾವು ಏನನ್ನು ಕಲಿತಿದ್ದೇವೋ ಅದನ್ನು ಮರೆತ ನಂತರವೂ ನೆನಪಿನಲ್ಲಿ ಉಳಿಯುವುದೇ ಶಿಕ್ಷಣ. ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಯಾವ ದಿಕ್ಕಿನಲ್ಲಿ ಬೆಳೆಸುತ್ತದೆಯೋ ಅದೇ ದೇಶದ ಭವಿಷ್ಯವನ್ನು ಎತ್ತಿಹಿಡಿಯುತ್ತದೆ.

'ಎಲ್ಲೆಡೆಯೂ ಶಿಕ್ಷಣದ ಜ್ಯೋತಿ ಬೆಳಗಿಸಿ, ಅಜ್ಞಾನದ ಅಂಧಕಾರದ ತೊಲಗಿಸಿ'.

ಬುದ್ಧಿವಂತಿಕೆ ಮತ್ತು ಅತ್ಯುತ್ತಮ ನಡತೆ ಇವೇ ಶಿಕ್ಷಣದ ಮುಖ್ಯ ಗುರಿ. ಮನುಷ್ಯನು ಕಲಿಯಲು ಬಯಸುವುದಾದರೆ; ಅವನ ಪ್ರತಿಯೊಂದು ತಪ್ಪೂ ಅವನಿಗೆ ಶಿಕ್ಷಣ ಕೊಡುತ್ತದೆ. ಹಾಗೇಯೇ, ಶಿಕ್ಷಣ ಎಂಬುವುದು ಕೇವಲ ಕೆಲಸವನ್ನು ಹೇಳಿಕೊಡುವುದಿಲ್ಲ, ಅದು ಜೀವನವನ್ನೇ ಕಲಿಸುತ್ತದೆ. ಹಾಗೇ ನಾವು ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವ ಮೂಲಕ ಕಲಿಯುತ್ತೇವೆಯೇ ಹೊರತು, ನಾವಾಗಿಯೇ ಪ್ರಶ್ನೆ ಇಲ್ಲದೆ ಉತ್ತರವನ್ನು ಹುಡುಕುವ ಪ್ರಯತ್ನವನ್ನು ಮಾಡುವುದಿಲ್ಲ.

'ಖಡ್ಗಕ್ಕಿಂತ ಲೇಖನಿ ಹರಿತ' ಇದು ಶಿಕ್ಷಣಕ್ಕಿರುವ ತಾಕತ್ತು. ಹಣ ಇದ್ದವನು ಕೆಲವನ್ನು ಮಾತ್ರ ಗೆಲ್ಲಬಲ್ಲ. ಆದರೆ, ಶಿಕ್ಷಣ ಇದ್ದವನು ಇಡೀ ಜಗತ್ತನ್ನೇ ಗೆಲ್ಲಬಲ್ಲ. ಮತ್ತೆ ಹೇಳಬೇಕೆಂದರೆ, ಈ ಜಗತ್ತಿನಲ್ಲಿ ಶಿಕ್ಷಣ, ವಿದ್ಯೆಗೆ' ಇರುವ ಮಾನ್ಯತೆ ಯಾವುದೇ ಭೌತಿಕ ವಿಷಯಗಳಿಗೆ ಶಾಶ್ವತವಾಗಿ ಸಿಗಲು ಸಾಧ್ಯವೇ ಇಲ್ಲ. ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಯು ಎರಡು ರೀತಿಯ ಶಿಕ್ಷಣ ಹೊಂದುತ್ತಾನೆ. ಒಂದು ಇತರರು ಅವನಿಗೆ ನೀಡುವುದು ಇನ್ನೊಂದು ಸ್ವತಃ ಅವನು ಕಲಿಯುವುದು. ಮನುಷ್ಯನಿಗೆ ಯಾವುದು ಗೊತ್ತಿಲ್ಲವೋ ಅದನ್ನು ತಿಳಿಸುವುದು ವಿದ್ಯಾಭ್ಯಾಸದ ಗುರಿಯಲ್ಲ. ಹೇಗೆ ವರ್ತಿಸಬೇಕೆಂದು ತಿಳಿಸುವುದೇ ವಿದ್ಯಾಭ್ಯಾಸದ ಗುರಿ.

ಉದಾ:– ಒಬ್ಬ ವ್ಯಕ್ತಿಗೆ ಒಂದು ಮೀನು ಕೊಟ್ಟರೆ, ನೀವು ಅವನಿಗೆ ಒಂದು ದಿನದ ಆಹಾರ ಕೊಟ್ಟಂತೆ, ಆದರೆ ಅದೇ ವ್ಯಕ್ತಿಗೆ ಮೀನು ಹಿಡಿಯುವುದನ್ನೇ ಕಲಿಸಿದರೆ ಮತ್ತು ನೀವು ಆತನಿಗೆ ಜೀವಿತಾವಧಿ ಆಹಾರ ನೀಡಿದಂತೆ, ಹೀಗೆ ಶಿಕ್ಷಣವೂ ಕೂಡ.

ಹಾಗೆಯೇ, 'ವಿದ್ಯೆ' ಎಂಬುವುದು ಅತ್ಯಂತ 'ಅಮೂಲ್ಯ ವಸ್ತು'. ಜಗತ್ತಿನಲ್ಲಿ ಯಾವುದಾದರು/ ಯಾವುದನ್ನಾದರು ಕದಿಯಬಹುದು ವಿದ್ಯೆಯನಲ್ಲ. ವಿದ್ಯೆಯನ್ನು ದುರುಪಯೋಗ ಮಾಡಿಕೊಳ್ಳಬಹುದು. ಆದರೆ, ಕದಿಯಲು ಸಾಧ್ಯವಿಲ್ಲ.

* * * * *

## ಚಡಪಡಿಕೆಯೇಕೆ..?

**– ಬೋರೇಗೌಡ ಎಸ್, ಸಹಾಯಕ ಪ್ರಾಧ್ಯಾಪಕ**

ಕೇಳುವರೋ? ಕಿವಿ ಮುಚ್ಚಿಕೊಳ್ಳುವರೋ?
ಎಂಬ ಆತಂಕದಲಿ ಎಂದಾದರೂ ಒಮ್ಮೆ
ಕೋಗಿಲೆ ಕನಲಿ ಹಾಡಿದ್ದು ಕೇಳಿರುವಿರಾ?

ಮಣ್ಣಾಗುವೆನೋ? ಮುಡಿಯೇರುವೆನೋ?
ಎಂಬ ಗೊಂದಲದಲಿ ಎಂದಾದರೂ ಒಮ್ಮೆ
ಹೂವು ನರಳಿ ಅರಳಿದ್ದು ಕಂಡಿರುವಿರಾ.?

ಹೊನಲಾಗುವೇನೋ? ಕಡಲಾಗುವೆನೋ?
ಎಂಬ ಚಿಂತೆಯಲಿ ಎಂದಾದರೂ ಒಮ್ಮೆ
ಮಳೆಹನಿ ಧರೆಗಿಳಿದದ್ದು ನೋಡಿರುವಿರಾ.?

ಆ ಹಕ್ಕಿ, ಆ ಚುಕ್ಕಿ, ಆ ಹನಿ, ಆ ಇಬ್ಬನಿ
ಅನುದಿನವೂ ತಿದ್ದಿತಿದ್ದಿ ಬುದ್ಧಿ ಹೇಳುತ್ತಿದೆ
ಅರಿಯದೆ ಅನುಕರಿಸದೆ ಕೊರಗುವಿರೇಕೆ?

ಬರೆದ ವಿಧಿಯುಂಟು, ವಿಧಾತನುಂಟು
ನಾಳೆಗಳ ನಿರ್ಧರಿಸುವವನು ಮೇಲುಂಟು
ಇಲ್ಲ ಸಲ್ಲದ ಯಾತನೆ ನಮಗೇಕೆ ಬೇಕು?

ಆಗುಹೋಗುಗಳ ಬಗೆಗೆ ಯೋಚಿಸದೆ
ಮುದದಿ ಮನವಿಡುತ ಮಂದಹಾಸದಲಿ
ನಿತ್ಯದ ಕಾಯಕ ಮಾಡಿದರೆ ಸಾಕಲ್ಲವೆ.?

ಮಾಡುವ ಕೆಲಸದಲ್ಲಿಹುದು ನಿಜತೃಪ್ತಿ
ಫಲಾಪೇಕ್ಷೆಗಳ ಹಂಗಿನಲಿ ಗುಂಗಿನಲಿ
ದುಡಿದರಷ್ಟೇ ಪ್ರತಿಕ್ಷಣ ಆತಂಕ ಅತೃಪ್ತಿ.!

# ಭಾಷೆಯ ಮಹತ್ವ ಮತ್ತು ನಮ್ಮ ಭಾಷೆ – ಕನ್ನಡ

– ಮಮತಾ ಡಿ.ಆರ್, ದ್ವಿತೀಯ ಬಿ.ಕಾಂ

ಮನುಷ್ಯನು ತನ್ನ ಬದುಕಿನ ಸುಲಭ ನಿರ್ವಹಣೆಗೆ ಮಾಡಿಕೊಂಡಿರುವ ಹಲವಾರು ವ್ಯವಸ್ಥೆಗಳಲ್ಲಿ ಭಾಷೆಯೂ ಒಂದು. ಭಾಷೆಯು ಸಂವಹನ ಮಾಧ್ಯಮ. ಭಾಷೆ ಎನ್ನುವ ಈ ಪ್ರಕ್ರಿಯೆ ಇರುವುದರಿಂದಲೇ ಮನುಷ್ಯನು ತನ್ನ ಆಸೆ, ಆಕಾಂಕ್ಷೆಗಳನ್ನು, ಅನಿಸಿಕೆ, ಆಲೋಚನೆಗಳನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಾಗಿದೆ. ಇಂತಹ ಯಾವುದೇ ಒಂದು ಭಾಷೆಯು ತನ್ನದೇಯಾದ ವೈವಿಧ್ಯತೆ ಹಾಗೂ ವೈಶಿಷ್ಟತೆಯಿಂದ ಕೂಡಿರುತ್ತದೆ. ಅಂದರೆ ನಾವು ಭಾಷೆಯನ್ನು ಯಾವ ಕ್ಷೇತ್ರಕ್ಕೆ, ಯಾವ ಉದ್ದೇಶಕ್ಕಾಗಿ ಬಳಸುತ್ತೇವೆಯೋ ಅದಕ್ಕೆ ಅನುಗುಣವಾಗಿ ಕೆಲವು ವೈಶಿಷ್ಟ್ಯ ಸ್ವರೂಪವನ್ನ ಪಡೆಯುತ್ತದೆ.

ಧಾರ್ಮಿಕ ವಿಚಾರಗಳನ್ನು ತಿಳಿಸಲು ಬಳಸುವ ಭಾಷೆಯ ಸ್ವರೂಪವೇ ಬೇರೆ, ವಿಜ್ಞಾನ ಸಂಗತಿಗಳನ್ನು ತಿಳಿಸಲು ಬಳಸುವ ಭಾಷೆಯ ಸ್ವರೂಪವೇ ಬೇರೆಯದ್ದಾಗಿರುತ್ತದೆ. ರಾಜಕೀಯ ವಿಚಾರಗಳಿಗೆ ಬಳಸುವ ಭಾಷೆ ಬೇರೆ ರೀತಿಯದ್ದಾಗಿರುತ್ತದೆ. ಸಾಹಿತ್ಯದ ಅಭಿವ್ಯಕ್ತಿಗಾಗಿ ಬಳಸುವ ಭಾಷೆಯ ಸ್ವರೂಪವೇ ಬೇರೆಯದ್ದಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಕೂಡಿರುವ ಭಾಷೆಯ ಸ್ವರೂಪವೇ ಬೇರೆಯದ್ದಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಕೂಡಿರುವ ಭಾಷೆಯ ಜೊತೆಗೆ ಆಡಳಿತ ವಿಚಾರಗಳನ್ನು ತಿಳಿಸುವ, ಸ್ಪಷ್ಟಪಡಿಸುವ ಭಾಷೆ ಮತ್ತೊಂದು ರೀತಿಯಲ್ಲಿರುತ್ತದೆ.

ನಮ್ಮ ಕನ್ನಡ ಭಾಷೆಯೂ ಸಾಕಷ್ಟು ಸತ್ವಯುತವಾದ ಭಾಷೆಯಾಗಿದ್ದು, ಸಮೃದ್ಧವಾದ ಪದ ಸಂಪತ್ತಿನಿಂದ ಕೂಡಿ ಶ್ರೀಮಂತ ಭಾಷೆ ಎನಿಸಿದೆ. ಇದು ರಾಜಕೀಯ, ಧಾರ್ಮಿಕ, ವೈಜ್ಞಾನಿಕ, ಸಾಹಿತ್ಯಕ, ಆಡಳಿತಾತ್ಮಕ ಮುಂತಾದ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಬಳಕೆಯಾಗುವ ಯೋಗ್ಯತೆಯಿಂದ ಕೂಡಿ ವಿಭಿನ್ನ ಶೈಲಿ ಪರಿಭಾಷೆಗಳನ್ನು(ಪಾರಿಭಾಷಿಕ ಭಾಷೆ) ಹೊಂದಿ ಆಯಾ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಭುತ್ವವನ್ನು ಸಾಧಿಸಿದೆ. ಅಂತೆಯೇ ಆಡಳಿತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಳಸುವ ಕನ್ನಡವನ್ನು ಆಡಳಿತ ಕನ್ನಡ ಎಂದು ಕರೆಯಲಾಗುತ್ತಿದ್ದು, ಈ ಆಡಳಿತ ಕನ್ನಡವು ಈಗ ಒಂದು ಅಧ್ಯಯನ ಯೋಗ್ಯವಾದ ವಿಷಯವಾಗಿ ಬೆಳೆದು ನಿಂತಿದೆ. ಸರ್ಕಾರದ ಆಡಳಿತ ಜನಸಾಮಾನ್ಯರಿಗಾಗಿ ಎಂದಮೇಲೆ, ಆಡಳಿತದಲ್ಲಿ ಬಳಸುವ ಭಾಷೆಯು ಜನಸಾಮಾನ್ಯರಿಗೆ ತಲುಪಬೇಕು. ಸುಲಭವಾಗಿ ಅರ್ಥವಾಗುವಂತಿರಬೇಕು. ಕಾರಣ, "ಭಾಷೆಯು ಜಟಿಲವಾದಲ್ಲಿ ಆಡಳಿತವೂ ಕಠಿಣವಾಗುತ್ತದೆ". ಆದ್ದರಿಂದಲೇ ಜನಸಾಮಾನ್ಯರು ಬಳಸುವ ಪದಗಳನ್ನೇ ಬಳಸಿ, ಖಚಿತತೆ, ಅರ್ಥಸ್ಪಷ್ಟತೆ ಮತ್ತು ಏಕರೂಪತೆ

ಹಾಗೂ ನಿಯಮಿತತೆಯಿಂದ ಕೂಡಿರುವಂತೆ ಆಡಳಿತ ಭಾಷೆಯನ್ನು ಬಳಸಬೇಕು. ಇದು ಕಷ್ಟವಾದ ವಿಚಾರವಾದರೂ ಬಳಸುವುದು ಆಡಳಿತದ ಕರ್ತವ್ಯವಾಗಿದೆ.

ನಮ್ಮ ಕನ್ನಡ ಭಾಷೆಗೆ ಸುಮಾರು ಎರಡು ಸಾವಿರದ ಐದು ನೂರು ವರ್ಷಗಳ ಇತಿಹಾಸವಿದೆ. ಮಗುವು ಮೊಟ್ಟಮೊದಲು ಕಲಿಯುವ ಮಾತು 'ಅಮ್ಮ'. ಅಮ್ಮನಿಂದ 'ಅ'ಕಾರವನ್ನು ಕಲಿತಂತಹ ಮಗು ಯಾವುದೇ ಭಾಷೆಯಲ್ಲಿ ಕಲಿತರೇನಂತೆ, ಹುಟ್ಟಿ ಬೆಳೆದ ರಾಜ್ಯವನ್ನು ಬಿಟ್ಟುಕೊಡಲಾರದು. ನಾವು, ನಮ್ಮವರು, ನಮ್ಮತನ, ನಮ್ಮದೇ ಜನ , ನಮ್ಮದೇ ರಾಜ್ಯ ಎಂದು ಹೋದಾಗ ನಮ್ಮ ಭಾಷೆಯನ್ನ ಮಾತನಾಡಲು ಮತ್ತು ಬಳಕೆ ಮಾಡಲು ಹಿಂಜರಿಯುತ್ತಿದ್ದೇವೆ. ಇದಕ್ಕೆ ಯಾವುದೇ ಮುಜುಗರದ ಅವಶ್ಯಕತೆ ಇಲ್ಲ. ನಮ್ಮ ಭಾಷೆಯಾದ ಕನ್ನಡವನ್ನ ಬಹಳ ಹೆಮ್ಮೆಯಿಂದ ಮಾತನಾಡಲು ಎಲ್ಲರೂ ಮುಂದಾಗಬೇಕು.

ತಂದೆ ಸ್ವಾತಂತ್ರ್ಯ ಹೋರಾಟಗಾರ
ಮಗ ಇಂಗ್ಲೀಷ್ ಮೋಜುಗಾರ
ತಾಯಿ ದೇವಾನುದೇವತೆಗಳ ಪೂಜೆಗಾತಿ
ಮಗಳು ಸೌಂದರ್ಯ ಸೊಬಗಿನ ಬೆಡಗಿ

ಈ ಮೇಲ್ಕಂಡ ನಾಲ್ಕು ಸಾಲುಗಳ ಅರ್ಥವೇನೆಂದರೆ ಕನ್ನಡವನ್ನು ಮಾತನಾಡಲು ಮತ್ತು ಬಳಕೆಮಾಡಲು, ಬೆಳೆಸಲು ಒಬ್ಬರಿಂದ ಮಾತ್ರ ಸಾಧ್ಯವಾಗುವುದಿಲ್ಲ. 'ಎರಡೂ ಕೈ ಸೇರಿದರೆ ಚಪ್ಪಾಳೆ' ಎಂಬಂತೆ ಎಲ್ಲರ ಬಳಕೆಯಿಂದ ನಮ್ಮ ಕನ್ನಡವನ್ನು ಬೆಳೆಸುವಂತಾಗಬೇಕು. ಕನ್ನಡವನ್ನು ಬೆಳೆಸಿ ಉಳಿಸಿ.

ಕನ್ನಡದ ಬಗೆಗಿನ ರಾಷ್ಟ್ರಕವಿ ಕುವೆಂಪುರವರ ಕವಿತೆ:
'ಶತ ಶತಮಾನಗಳೇ ಉರುಳಲಿ
ನಾ ಅಳಿದರೂ, ನೀ ಅಳಿದರೂ
ಕೊನೆಗೊಬ್ಬ ಕನ್ನಡಿಗನೇ ಉಳಿದರೂ
ಕನ್ನಡಮಯವಾಗುವುದು ಕನ್ನಡ
ನಾಡೆಲ್ಲಾ ಆ ಒಬ್ಬ ಕನ್ನಡಿಗ ನೀನಾಗು ಬಾ'
"ಕನ್ನಡವೇ ಸತ್ಯ ಕನ್ನಡವೇ ನಿತ್ಯ"

* * * * *

ಬೇರೊಬ್ಬರ ಶ್ರೇಯಸ್ಸನ್ನು ಎಷ್ಟು ಹೆಚ್ಚಾಗಿ ನೀನು ಬಯಸುತ್ತೀಯೋ ಅಷ್ಟರ ಮಟ್ಟಿಗೆ ನಿನ್ನ ಬಾಳು ಸಾರ್ಥಕವಾಗುತ್ತದೆ. – **ಮಾಸ್ತಿ ವೆಂಕಟೇಶ ಅಯ್ಯಂಗಾರ್**

# ನಮ್ಮ ಕಾಲೇಜಿನ ಅನುಭವ

**– ಅನುಷ ಟಿ. ಇ., ತೃತೀಯ ಬಿ.ಕಾಂ.**

ನಾನು ಕಾಲೇಜಿಗೆ ಸೇರಿದಾಗ ಏನು ತಿಳಿಯದ ಹುಡುಗಿ. ಅಲ್ಲಿ ನನಗೆ ಹೊಸ ಸ್ನೇಹಿತರು, ಹೊಸ ಸಹೋದರ, ಸಹೋದರಿಯರು ಹೊಸ ಶಿಕ್ಷಕರು ಸಿಕ್ಕರು. ಭೇದ-ಭಾವ ಇಲ್ಲದ ಆ ದೇವಾಲಯದಲ್ಲಿ ತಿಳಿದುಕೊಳ್ಳುವ ಹಲವು ವಿಷಯಗಳಿವೆ. ಎಲ್ಲಾ ಪ್ರತಿಭೆಗಳಿಗೂ ಸ್ಫೂರ್ತಿ ತುಂಬುವ ಈ ಕಾಲೇಜ್ ಪ್ರತಿಭೆಗಳನ್ನು ಮುನ್ನುಗ್ಗಿಸುತ್ತದೆ. ಅದು ಓದುವುದರಲ್ಲಾಗಲಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಾಗಲಿ, ಕ್ರೀಡಾ ಚಟುವಟಿಕೆ, ಹೀಗೆ ಹಲವು ಚಟುವಟಿಕೆಗಳಿಗೆ ಅವಕಾಶ ಇಲ್ಲಿದೆ. ನಾನು ಈ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಿದೆ. ಸಾಂಸ್ಕೃತಿಕ ಕಾರ್ಯಕ್ರಮವೆಂದರೆ ತುಂಬಾ ಹರುಷದಿಂದ ಹೋಗುತ್ತಿದ್ದೆ. ಎಲ್ಲಾ ಶಿಕ್ಷಕರು ಸ್ನೇಹಿತರಂತೆ ನಮ್ಮ ಜೊತೆ ಇದ್ದು ಅಲ್ಲಿನ ಚಟುವಟಿಕೆಗಳಲ್ಲಿ ಭಾಗವಹಿಸಲು ಸಹಾಯ ಮಾಡುತ್ತಿದ್ದರು. ಭಯವನ್ನು ದೂರಗೊಳಿಸಿದರು. ಅಲ್ಲಿ ಜಾನಪದ ಗೀತೆ ಹಾಡುತ್ತಾ, ಸ್ನೇಹಿತರ ಜೊತೆ ಶಿಕ್ಷಕರ ಜೊತೆ ಕಳೆದ ಕ್ಷಣಗಳು ಮರೆಯಲಾಗದ ಒಂದು ಸುಂದರ ಅನುಭವ.

ಹಾಗೆ ಕ್ರೀಡಾ ಚಟುವಟಿಕೆ ಎಂದರೆ ನನಗೆ ತುಂಬಾ ಇಷ್ಟ. ಅಲ್ಲಿ ನನ್ನ ತರಗತಿ ಸ್ನೇಹಿತರಲ್ಲದೆ ಬೇರೆ ತರಗತಿಯ ಸ್ನೇಹಿತರು, ಸಹೋದರಿಯರು ಸಿಗುತ್ತಾರೆ. ಅಲ್ಲಿನ ಅನುಭವವೇ ಬೇರೆ. ಆಟ ಆಡುವಾಗ ಸಿಗುವ ಸಂತೋಷವೆ ಬೇರೆ. ಅಲ್ಲಿ ನನಗೆ ಧೈರ್ಯ, ತಿಳುವಳಿಕೆ ಸಂತೋಷ ಸಿಕ್ಕಿತು, ಹಾಗೆ ಅದರಲ್ಲಿ ಗೆದ್ದಾಗ ಸಂತೋಷವಾಯಿತು. ಸೋತಾಗ ಬೇಸರವು ಆಯಿತು. ಇನ್ನಿತರ ಚಟುವಟಿಕೆ ಎಂದರೆ ನನಗೆ ಅಚ್ಚು ಮೆಚ್ಚು, ಎನ್‌ಎಸ್‌ಎಸ್, ಸ್ಕೌಟ್ಸ್ & ಗೈಡ್ಸ್ ನನಗೆ ತುಂಬಾ ಇಷ್ಟ. ಎನ್‌ಎಸ್‌ಎಸ್ ಎಂದಾಗ ಇದರಲ್ಲಿ ತಿಳಿದುಕೊಳ್ಳುವುದು ತುಂಬಾ ಇದೆ. ಅದರಲ್ಲಿ ನಾನು ೩ ವರ್ಷ ಹಲವು ವಿಷಯ ತಿಳಿದುಕೊಂಡಿದ್ದೇನೆ. ಎನ್‌ಎಸ್‌ಎಸ್ ವತಿಯಿಂದ ಆದಿಚುಂಚನಗಿರಿಯಲ್ಲಿ ಮಾಡಿದ ಸೇವೆ ಮಹತ್ವ ಪೂರ್ಣವಾದದ್ದು.

ಸ್ಕೌಟ್ಸ್ ಮತ್ತು ಗೈಡ್ಸ್ ಎಂದರೆ ಏನು, ಎಂದು ತಿಳಿಯದ ನಾನು, ಅದರಿಂದ ಹಲವು ವಿಷಯ, ಅನುಭವ ಪಡೆದಿದ್ದೇನೆ. ಇದರಲ್ಲಿ ನಾನು ಹಲವು ಕಡೆ ಸೇವೆ ಮಾಡಿದ್ದೇನೆ. ಹಾಗೆ 'ಪ್ರವೇಶ್' 'ನಿಪುಣ್' ಪರೀಕ್ಷೆಯಲ್ಲಿ ಪಾಸ್ ಮಾಡಿ 'ರಾಜ್ಯಪುರಸ್ಕಾರ್' ಪರೀಕ್ಷೆಯನ್ನು ಪಾಸ್ ಮಾಡಿ ರಾಜ್ಯಪಾಲರ ಕೈಯಿಂದ ಪ್ರಮಾಣ ಪಡೆದಿದ್ದು ನನ್ನ ಒಂದು ಸುಂದರ ಅನುಭವ. ಇದರಲ್ಲಿ ಪಡೆದ ಪ್ರಶಸ್ತಿ ಪತ್ರಗಳನ್ನು ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಡಾ|| ಬಿ.ಕೆ ಲೋಕೇಶ್ ಸರ್ ಅವರು ನಮ್ಮ ಎಲ್ಲಾ ಸ್ನೇಹಿತರ ಮುಂದೆ ನಮಗೆ ಆ ಪ್ರಶಸ್ತಿ ಪತ್ರ ಕೊಡುವಾಗ ಆಗುತಿದ್ದ ಸಂತೋಷವೇ ಬೇರೆ. ಸ್ಕೌಟ್ಸ್ & ಗೈಡ್ಸ್ ಕಡೆಯಿಂದ ನನಗೆ ಕರ್ನಾಟಕವಲ್ಲದೆ ಬೇರೆ ರಾಜ್ಯಕ್ಕೂ ಹೋಗುವ ಅವಕಾಶ ಸಿಕ್ಕಿದೆ. ಇದರಿಂದ ಧೈರ್ಯ ಬಂದಿದೆ. ಪಠ್ಯೇತ್ತರ ಚಟುವಟಿಕೆಯಲ್ಲಿ ಭಾಗವಹಿಸಿ ತರಗತಿಗೆ ಹಿಂದಿರುವಾಗ, ಎಲ್ಲಾ ಶಿಕ್ಷಕರು ಬೈಯದೆ ಎಲ್ಲಾ ರೀತಿಯಲ್ಲೂ ಸಹಾಯ ಮಾಡಿದ್ದಾರೆ. ಹಾಗೆ ನನ್ನ ಸ್ನೇಹಿತರು ಮಾಡಿದ ಪಾಠವನ್ನು ಮತ್ತೊಮ್ಮೆ ನನಗೆ ಹೇಳಿಕೊಡುತ್ತಿದ್ದರು. ಇನ್ನೂ ಒಬ್ಬರು ನನ್ನ ನೋಟ್ಸ್ ಬರೆದುಕೊಟ್ಟಿದ್ದಾರೆ. ನನ್ನ ಸ್ನೇಹಿತರು ನಾನು ಭಾಗವಹಿಸುತಿದ್ದ ಎಲ್ಲಾ ಚಟುವಟಿಕೆಗಳಿಗೆ ಸಪೋರ್ಟ್ ಮಾಡಿದ್ದಾರೆ.

ಈ ನನ್ನ ಚಿಕ್ಕ ಅನುಭವದ ಮಾತಿನಲ್ಲಿ, ಹಿಂದೆ ಬರುವ ಎಲ್ಲಾ ನನ್ನ ಸಹೋದರಿಯರಿಗೆ ಹೇಳುವ ಮಾತೆಂದರೆ, ನಮ್ಮ ಕಾಲೇಜಿನಲ್ಲಿ ಇರುವಂತಹ ಎಲ್ಲಾ ಸೌಲಭ್ಯಗಳನ್ನು ನೀವು ತೆಗೆದುಕೊಳ್ಳಿ, ಓದುವುದಲ್ಲದೆ ಇನ್ನಿತರ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿ, ಇದಕ್ಕೆ ನಿಮಗೆ ಕಾಲೇಜಿನ ಕಡೆಯಿಂದ ನಿಮಗೆ ಸಂಪೂರ್ಣ ಸಪೋರ್ಟ್ ಇರುತ್ತದೆ. ಇದಲ್ಲದೆ ಪ್ರಥಮ ವರ್ಷ ಬರುವವರಿಗೆ ವೆಲ್‌ಕಮ್ ಪಾರ್ಟಿ, ಕೊನೆ ವರ್ಷ ಹೋಗೋರಿಗೆ ಸೆಂಡ್ ಆಫ್ ಪಾರ್ಟಿ, ಎತ್‌ನಿಕ್ ಡೇ ಹೀಗೆ ಹಲವು ಚಟುವಟಿಕೆಗಳಿವೆ. ಗ್ರಂಥಾಲಯದ ಸೌಲಭ್ಯ, ಇನ್ನಿತರ ಸೌಲಭ್ಯಗಳಿವೆ. ನನ್ನ ಈ 3 ವರ್ಷದ ಜರ್ನಿಯಲ್ಲಿ ನನ್ನ ಎಲ್ಲಾ ಚಟುವಟಿಕೆ ಕೆಲಸಕ್ಕೆ ಓದುವುದಕ್ಕೆ ಸಹಾಯ ಮಾಡಿದ ಪ್ರಿನ್ಸಿಪಾಲ್ ಸರ್, ಇನ್ನಿತರ ಎಲ್ಲಾ ಶಿಕ್ಷಕರಿಗೆ ಹಾಗೂ ನನ್ನ ಸ್ನೇಹಿತರಿಗೆ ನನ್ನ ತುಂಬು ಹೃದಯದ ಧನ್ಯವಾದಗಳು. ಕಾಲೇಜಿನಲ್ಲಿ ಕಳೆದ ಒಂದೊಂದು ಕ್ಷಣವೂ ಮರೆಯಲಾಗದ ನೆನಪುಗಳು ಈ ಸಮಯ ಮತ್ತೆ ಸಿಗೋದಿಲ್ಲ.

* * * * *

## ನಿನ್ಕೈಹಿಡಿದು

**– ಚಂದನ ಎಂ.ಎಸ್, ದ್ವಿತೀಯ ಬಿ.ಎ**

ಹಾದಿ ಬೀದಿಯಲ್ಲಿ
ಕಳೆದೋಗುವೆ ಎಂಬ ಭಯದಿಂದ
ನಿನ್ಕೈಹಿಡಿದು ನಡೆಯಲಾರಂಭಿಸಿದೆ ... ಅಂದು
ಆದರೆ
ಜೀವನದಲ್ಲಿ ಮತ್ತೆ ಕಳೆದೋಗಬಾರದೆಂದು
ನಿನ್ಕೈಹಿಡಿಯ ಬೇಕೆನಿಸಿದೆ ಇಂದು...

ಕನಸುಗಳ ನನಸಾಗುವಿಕೆಗಾಗಿ
ನಿನ್ನ ಭರವಸೆಯೊಂದಿಗೆ
ನಿನ್ಕೈಹಿಡಿದು ಮುಂದಿಟ್ಟೆ ಹೆಜ್ಜೆಯನ್ನಂದು..
ನನಸಾಗಿರುವ ಕನಸುಗಳಿಗೆ
ನಿನ್ಪರಿಚಯ ಮಾಡಿ ನನ್ನಪ್ಪನೆಂಬ ಗರ್ವದಿಂದೇಳಿ
ನನ್ನುಸಿರು ಕನಸಾಗುವ ತನಕ ಮುಂದಿಡಬೇಕಿದೆ ಹೆಜ್ಜೆಯನ್ನಿಂದು

ಸಾವಿರ ಮನಗಳು ಸಾವಿರ ಹೇಳಿದರು
ನನ್ಮೇಲಿನ ನಂಬಿಕೆಯಿಂದ ನನ್ನಿಂದೆಯೇ
ದೈವವಾಗಿ ನಿಂತು ಕಾಪಾಡಿ ನನ್ನಹೆಜ್ಜೆಗೆ ಕಾವಲಾಗಿ ನಿಂತೆ ನೀನಂದು..
ಸಾವಿರ ಮನಗಳು ಒಂದೇ ಹೇಳಿದರು
ನಿನ್ಮೇಲಿನ ನಂಬಿಕೆಯಿಂದಲೇ ನಾನಿರುವೆ
ನಿನ್ಹಿಂದಿನ ಸೈನಿಕಳಾಗಿ ನಾ ಕಾಯುವೆ ನಿನ್ಹೆಜ್ಜೆಗಳಿಂದೆಯೇ ಇಂದು..

# ಗೌರವ ತಂದವರು

– ಅರ್ಪಿತ ವಿ.ಆರ್, ದ್ವಿತೀಯ ಬಿ.ಎ

ರಾಮಯ್ಯನವರಿಗೆ ಇಬ್ಬರು ಮಕ್ಕಳು. ಇವರಿಬ್ಬರು ಹತ್ತನೆಯ ತರಗತಿಯಲ್ಲಿ ಓದುತ್ತಿದ್ದರು. ಮೊದಲನೆಯವನು ರಮೇಶ, ಎರಡನೆಯವನು ಸತೀಶ. ರಾಮಯ್ಯನವರಿಗೆ ಮೊದಲನೇಯ ಮಗ ರಮೇಶನ ಮೇಲೆ ಬಹಳ ಪ್ರೀತಿ. ಜೊತೆಗೆ ರಮೇಶ ಓದಿನಲ್ಲಿ ಬಹಳ ಜಾಣನೆಂಬ ಅಭಿಮಾನವಿತ್ತು. ಆದರೆ ಸತೀಶನಿಗೆ ಅಷ್ಟೇನು ಓದಿನಲ್ಲಿ ಆಸಕ್ತಿ ಇಲ್ಲ. ಇದ್ದರೂ ತಲೆಗೆ ವಿದ್ಯೆ ಹತ್ತುತ್ತಿರಲಿಲ್ಲ. ಹೀಗಾಗಿ ರಾಮಯ್ಯನವರು ತಮ್ಮ ಎರಡನೆಯ ಮಗ ಸತೀಶನನ್ನು ಪದೇ ಪದೇ ದಡ್ಡ ದಡ್ಡ ಎಂದು ಬಯ್ಯುತ್ತಿದ್ದರು. ಆದರೆ ಸತೀಶನಿಗೆ ತಂದೆಯ ಮೇಲೆ ಕೋಪವಾಗಲಿ, ಬೇಸರವಾಗಲಿ ಇರಲಿಲ್ಲ.

ತಂದೆಯವರು ನನಗೆ ಬಯ್ಯುವುದು ಸರಿಯೇ, ನನ್ನ ತಲೆಗೆ ವಿದ್ಯೆ ಹತ್ತುತ್ತಿಲ್ಲ. ನಾನೇನು ಮಾಡಲಿ, ಎಷ್ಟು ಓದಿದರೂ ನನಗದು ಅರ್ಥವಾಗುವುದಿಲ್ಲ ಎಂದು ತನಗೆ ತಾನೇ ಸಮಾಧಾನ ತಂದುಕೊಳ್ಳುತಿದ್ದ. ಆದರೆ ಸತೀಶ ಕ್ರೀಡೆಯಲ್ಲಿ ಬಹಳ ಚುರುಕು. ಹಾಗೆಯೇ ಕ್ರಿಕೆಟ್ ಎಂದರೆ ಅವನಿಗೆ ಎಲ್ಲಿಲ್ಲದ ಆಸಕ್ತಿ, ಬ್ಯಾಟ್ ಮಾಡುತಲ್ಲಿದ್ದರೆ ಆತನನ್ನು ಔಟ್ ಮಾಡುವುದೇ ಕಷ್ಟವೆಂದು ಅವನ ಗೆಳಯರು ಮಾತನಾಡಿಕೊಳ್ಳುತಿದ್ದರು. ರಾಮಯ್ಯನವರಿಗೆ ಕ್ರೀಡೆಗಳ ಬಗ್ಗೆ ತಾತ್ಸರವಿತ್ತು. ಮಕ್ಕಳು ಓದಿನಲ್ಲಿ ಹೆಚ್ಚು ಅಂಕಗಳಿಸಬೇಕು. ಮೂರು ಹೊತ್ತು ಯಾವಾಗಲು ಓದುತ್ತಿರಬೇಕು ಎನ್ನುವ ಮನೋಭಾವ ಅವರದಾಗಿತ್ತು.

ರಮೇಶ ಮತ್ತು ಸತೀಶನ ಶಾಲೆಯ ಶಿಕ್ಷಕರನ್ನು ಆಗಾಗ್ಗೆ ರಾಮಯ್ಯನವರು ಭೇಟಿಯಾದಾಗ ಮೇಷ್ಟ್ರಲ್ಲಿ, 'ಮೇಷ್ಟ್ರೇ' ನನ್ನ ಮಗ ರಮೇಶ ಹೇಗೆ ಓದುತ್ತಿದ್ದಾನೆ? ಈ ಸಲ ಅವನು ರ್‍ಯಾಂಕ್ ಬರುತ್ತಾನೆ ಅಲ್ಲವೇ' ಎಂದು ಕೇಳುತ್ತಿದ್ದರು.

ಶಾಲಾ ಮೇಷ್ಟ್ರುಗಳು 'ರಾಮಯ್ಯನವರೇ ನೀವೇನು ಸ್ವಲ್ಪವೂ ಅನುಮಾನ ಪಡುವುದೇ ಬೇಡ. ನೂರಕ್ಕೇ ನೂರರಷ್ಟು ರಮೇಶ ಇಡೀ ನಮ್ಮ ತಾಲ್ಲೂಕಿಗೇ ಅಲ್ಲ ಇಡೀ ಜಿಲ್ಲೆಗೆ ಮೊದಲ ರ್‍ಯಾಂಕ್ ಬಂದೇ ಬರುತ್ತಾನೆ' ಎನ್ನುತ್ತಿದ್ದರು.

ಮೇಷ್ಟ್ರ 'ರಾಮಯ್ಯನವರೇ ಸತೀಶನ ಬಗ್ಗೆ ಏನೂ ಕೇಳಲಿಲ್ಲವಲ್ಲ' ಎಂದು ಪ್ರಶ್ನಿಸಿದಾಗ. 'ಅವನೊಬ್ಬ ಅಪ್ರಯೊಜಕ, ದಡ್ಡ, ಅವನಿಗೆ ಆಟದಲ್ಲಿರುವಷ್ಟು ಆಸಕ್ತಿ ಪಾಠದಲ್ಲಿಲ್ಲ' ಎಂದು ಉದಾಸೀನದ ಮಾತನಾಡುತ್ತಿದ್ದರು.

ಎಸ್.ಎಸ್.ಎಲ್‌ಸಿ ಅಂತಿಮ ಪರೀಕ್ಷೆ ಇಬ್ಬರೂ ಮಕ್ಕಳು ತಂದೆ ಆಶೀರ್ವಾದ ಪಡೆಯಲು ಬರುತ್ತಾರೆ. ತಂದೆ ರಮೇಶನನ್ನು ಅಪ್ಪಿಕೊಳ್ಳುತ್ತಾ ಈ ಬಾರಿ ಒಳ್ಳೆಯ ಅಂಕಗಳಿಸಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆಯಬೇಕು ಎಂದು ಹಾರೈಸಿದರು.

ಸತೀಶ ಆಶೀರ್ವಾದ ಪಡೆಯಲು ಬಂದಾಗ ರಾಮಯ್ಯನವರು 'ನಿನಗೆ ಆಶೀರ್ವಾದ ಮಾಡಿದರೂ ಒಂದೇ ಮಾಡದಿದ್ದರೂ ಒಂದೇ' ಎನ್ನುತ್ತಾರೆ. ಒಂದೆರಡು ತಿಂಗಳಲ್ಲಿ ಪರೀಕ್ಷೆ ಫಲಿತಾಂಶ ಹೊರ ಬಂದಿತ್ತು. ರಮೇಶ ನಿರೀಕ್ಷೆಯಂತೆ ಒಳ್ಳೆಯ ಅಂಕ ಗಳಿಸಿದ್ದ. ಸತೀಶ ಎರಡನೇ ದರ್ಜೆಯಲ್ಲಿ ಉತ್ತೀರ್ಣನಾಗಿದ್ದ.

ಅದೇ ಸಂದರ್ಭದಲ್ಲಿ ಮಾಧ್ಯಮದವರು ರಾಮಯ್ಯನವರ ಮನೆ ಮುಂದೆ ಬಂದಿದ್ದರು. ರಮೇಶ ಅಂಕ ಗಳಿಸಿದ್ದರಿಂದಲೇ ಮಾಧ್ಯಮದವರು ಬರುವಂತಾಯಿತು ಎಂದು ರಾಮಯ್ಯನವರು ಬೀಗುತ್ತಾರೆ. ಆದರೆ ಸತೀಶ ರಾಜ್ಯಮಟ್ಟದ ಕ್ರಿಕೆಟ್ ಟೂರ್ನಿಯಲ್ಲಿ ಅಧಿಕ ರನ್ ಬಾರಿಸಿ ಹೆಸರು ಗಳಿಸಿದ್ದ. ಅವನನ್ನು ಸಂದರ್ಶನ ಮಾಡಲು ಮಾಧ್ಯಮದವರು ಬಂದಿದ್ದರು. ಅದನ್ನು ಕೇಳಿ ರಾಮಯ್ಯನವರು ದಿಗ್ಭ್ರಮೆಗೊಳಗಾಗುತ್ತಾರೆ.

**ನೀತಿ**: ಮಕ್ಕಳ ಬಗ್ಗೆ ಯಾರೂ ಕೂಡ ತಾರತಮ್ಯ ಮಾಡಬಾರದು. ಪ್ರತಿಯೊಬ್ಬರಲ್ಲಿಯೂ ವಿಶೇಷವಾದ ಬುದ್ಧಿವಂತಿಕೆ, ಕೌಶಲ್ಯ ಇರುತ್ತದೆ. ಮಕ್ಕಳ ಅಭಿರುಚಿಗೆ ಪೂರಕವಾದ ಪ್ರೋತ್ಸಾಹ ನೀಡಬೇಕು.

* * * * *


## ಚುಟುಕುಗಳು

**– ಗಿರೀಶ. ಎಂ. ಕಡಕೋಳ, ದ್ವಿತೀಯ ಬಿ.ಎ.**

ಜೀವನದಲ್ಲಿ ಏನೇ ಕಳೆದುಕೊಂಡರು
ಕರುಣೆ–ಮಮತೆಯನ್ನು ನೀಡಿದ
ತಾಯಿ ಪ್ರೀತಿ ಕಳೆದುಕೊಳ್ಳಬೇಡಿ
ಯಾಕಂದ್ರೆ ಈ ಜನ್ಮವಲ್ಲದೆ
ಮುಂದಿನ ಹತ್ತು ಜನುಮವಾದರೂ
ಅಮ್ಮನ ಋಣವ ತೀರಿಸಲಾಗದು

* * *





ಹೆಣ್ಣು ಮಕ್ಕಳ ಹಣೆಗೆ ಕುಂಕುಮ ಚೆಂದ
ಹೆಣ್ಣು ಮಕ್ಕಳ ಕಿವಿಗೆ ಓಲೆ ಚೆಂದ
ಹೆಣ್ಣು ಮಕ್ಕಳ ಮೂಗಿಗೆ ಮೂಗುತಿ ಚೆಂದ
ಹೆಣ್ಣು ಮಕ್ಕಳ ಕೈಗೆ ಬಳೆ ಚೆಂದ
ಹೆಣ್ಣು ಮಕ್ಕಳ ಕಾಲಿಗೆ ಕಾಲುಂಗುರ ಚೆಂದ
ಆದರೆ ನನಗೆ ನನ್ನ ಎಸ್.ಎ.ಸಿ ಕಾಲೇಜು
ನೋಡುವುದೇ ಮನದಾನಂದ

* * *

# ಬದಲಾವಣೆಯತ್ತ ಮುಖ ಮಾಡೋಣ

– ಕಾವ್ಯ ಬಿ.ಎಂ., ತೃತೀಯ ಬಿ.ಎ

'ಇರುವುದೆಲ್ಲವನ್ನು ಬಿಟ್ಟು ಇರದುದರೆಡೆಗೆ ತುಡಿಯುವುದೇ ಜೀವನ' ಹೀಗೆ ಹಾಡಿದ ಕವಿ, ಬದುಕಿನ ಅತಿ ದೊಡ್ಡ ಸತ್ಯವನ್ನು ಬಿಚ್ಚಿಟ್ಟಿದ್ದಾರೆ. ನಮ್ಮ ಆಲೋಚನೆಗಳು, ತುಡಿತ, ಮಿಡಿತಗಳೆಲ್ಲಾ ಬಳ ಇಲ್ಲದಿರುವುದರ ಕಡೆಗೆ, ಬಹುಶಃ ಇದು ಪ್ರಕೃತಿ ನಿಯಮವೋ ಏನೋ..... ನಮ್ಮನ್ನು ಇಷ್ಟಪಡುವವರನ್ನು ಕಂಡರೆ ನಮಗಾಗದು. ನಾವು ಹಾತೊರೆಯುವುದು ಎಲ್ಲೋ ದೂರದಲ್ಲಿರುವವರಿಗಾಗಿ ಎನ್ನುವುದನ್ನು ನಾವು ಭೌತಶಾಸ್ತ್ರದಲ್ಲಿ ಓದಿದ್ದೇವೆ. ಇದು ಅದರಲ್ಲಿ ಮಾತ್ರವಲ್ಲ, ಬದುಕಿನಲ್ಲಿಯೂ ಸತ್ಯ. ನಿತ್ಯ ನಮ್ಮ ಕಾಳಜಿವಹಿಸುವ ಅಪ್ಪ ಅಮ್ಮನ ಮಾತೆಂದರೆ ನಮಗೆ ಅಸಡ್ಡೆ. ಅದನ್ನು ಹೊರಗಿನವರು ಯಾರಾದರೂ ಹೇಳಿದರೆ ಅದಕ್ಕೆ ನಾವು ಕೊಡುವ ಬೆಲೆಯೇ ಬೇರೆ. ಅದಕ್ಕೋಸ್ಕರವೇ 'ಹಿತ್ತಲ ಗಿಡ ಮದ್ದಲ್ಲ' ಎನ್ನುವುದೋ ಏನೋ..!

ಈ ಕ್ಷಣದ ಬದುಕನ್ನು ಬಿಟ್ಟು ಭೂತ ಭವಿಷ್ಯದಲ್ಲೇ ಮುಳುಗಿ ಹೋಗಿರುತ್ತೇವೆ. ಕಳೆದು ಹೋದ ಕಾಲ ಮತ್ತೊಮ್ಮೆ ಮರುಕಳಿಸದು ಎಂಬುದನ್ನು ನಾವು ಆಲೋಚಿಸುವುದೇ ಇಲ್ಲ. 'ನೆನ್ನೆ ನಾಳೆ ಮುಚ್ಚಿಬಿಡಿ ಬಿಡುವಿರದ ಬದುಕು ಸಾಗಿಸಿ' ಇದು ಕೆನಡಾದ ಪ್ರಸಿದ್ಧ ವೈದ್ಯಶಾಸ್ತ್ರಜ್ಞ ಡಾ.ವಿಲಿಯಂ ಒಸ್ಲರ್ ಹೇಳಿದ ಮಾತು. ಆದರೆ ನಡೆದು ಹೋದುದಕ್ಕಾಗಿ ಮರುಗದೆ, ಮುಂದಾಗುವುದಕ್ಕೆ ಇರಲು ನಮಗಾಗದು.

**ಓಶೋ ಹೇಳಿದ ಮಾತು** : ಹುಣ್ಣಿಮೆಯಂದು ಸುಮ್ಮನೆ ಒಂದು ಕೊಳದತ್ತ ನೋಡು. ಆ ಕೊಳ ಶಾಂತವಾಗಿದ್ದರೆ ಅದು ಚಂದ್ರನನ್ನು ಪ್ರತಿಫಲಿಸುತ್ತದೆ. ಮನಸ್ಸು ಕೂಡ ಹಾಗೆಯೇ ಯಾವಾಗ ಅದರಲ್ಲಿ ಆಲೋಚನೆ ಭಾವನೆಗಳ ಅಲೆಗಳ ಅಬ್ಬರವಿರುವುದಿಲ್ಲವೊ ಅದು ಸತ್ಯವನ್ನು ಪ್ರತಿಫಲಿಸುತ್ತದೆ. ನಮ್ಮಲ್ಲಿ ಕೆಲವರು ಜಗತ್ತು ಯಾಕೆ ಹೀಗಿದೆ? ಎಂದು ಯೋಚಿಸುವುದರಲ್ಲಿಯೇ ಸಮಯ ವ್ಯರ್ಥ ಮಾಡುತ್ತಾರೆ. ನಾನು ಯಾಕೆ ಹೀಗಿದ್ದೇನೇ ಎಂದು ಪ್ರತಿಯೊಬ್ಬರೂ ಯೋಚಿಸಿದ್ದರೆ ಬಹುಶಃ ಜಗತ್ತು ಬದಲಾಗುತ್ತಿತ್ತೋ ಏನೋ........

ನದಿ ದಾಟಲು ಈಜು ಬಂದರೆ ಸಾಕು. ನೀರು ಬತ್ತುವ ತನಕ ಕಾಯಬೇಕಿಲ್ಲ, ಆದರೆ ನಾವು ನದಿ ನೀರು ಬತ್ತುವ ತನಕ ಕಾಯ ಬಯಸುತ್ತೇವೆ. ಶವ ಯಾವತ್ತೂ ನೀರಿನಲ್ಲಿ ಮುಳುಗುವುದಿಲ್ಲಾ, ಜೀವಂತ ಮನುಷ್ಯ ನೀರಿನೊಂದಿಗೆ ಹೋರಾಡುತ್ತಾನೆ. ಈ ಕ್ಷಣದಲ್ಲಿ ಬದಲಾಗಲು ಪ್ರಯತ್ನಿಸದವನು ತನ್ನ ಈಡೀ ಜೀವನದಲ್ಲೂ ಬದಲಾಗಲು ಸಾಧ್ಯವಿಲ್ಲ. ತಮ್ಮ ಬದುಕು ಬದಲಾಗಲು ಪ್ರತಿದಿನವೂ, ಪ್ರತಿಕ್ಷಣವೂ ಬದಲಾಗುತ್ತಿರಬೇಕು. ನಾಳೆ ಬದಲಾಗುತ್ತೇನೆಂದು ಯೋಚಿಸಿದರೆ ಆ ನಾಳೆ ಎಂದಿಗೂ ಬರಲಾರದು...!

ನಮ್ಮ ಬದುಕನ್ನು ಒಮ್ಮೆ ತಿರುಗಿ ನೋಡಿ, ಏನೂ ತಿಳಿಯದ ಮುಗ್ಧತೆಯ ಸ್ವಚ್ಛಂದ ಬಾಲ್ಯ....... ಬೆಳೆಯುತ್ತಾ ಹೋದಂತೆ ಸಂಬಂಧಗಳು ನಕ್ಷತ್ರಗಳಷ್ಟು ದೂರ....... ಆಮೇಲೆ ನಮ್ಮ

ಗುರಿ, ಕನಸು ನಿರಾಸೆ... ಮಹಾತ್ವಾಕಾಂಕ್ಷೆ ಅತೃಪ್ತಿಗಳು ಅದರ ನಡುವೆ ನರಳುವ ದಿನಗಳು... ಇಷ್ಟೆನಾ ಬದುಕು?.... ಎಂದು ಒಂದು ಕ್ಷಣ ಅನಿಸದೆ ಇರಲಾರದು ... ಖಂಡಿತವಾಗಿಯೂ ಬದುಕು ಇಷ್ಟೆ ಅಲ್ಲಾ ಬಿಡಿ ಇವನ್ನೆಲ್ಲಾ ಮೀರಿ ಬದುಕಬೇಕು. ಆಗಲೇ ನಮ್ಮ ಬದುಕಿಗೊಂದು ಅರ್ಥ...!

ಈ ಭೂಮಿಯ ಮೇಲೆ ನಾವು ಎಷ್ಟುದಿನ ಬದುಕುತ್ತೇವೆಯೋ ನಮಗಂತು ಗೊತ್ತಿಲ್ಲ. ಆದರೆ ಇರುವಷ್ಟು ದಿನ ಪ್ರಕೃತಿಗೆ ತಲೆಬಾಗಿ ಇರುವುದರಲ್ಲಿಯೇ ನೆಮ್ಮದಿಯ ನಾಳೆಗಳನ್ನು ಕಾಣೋಣ.... ಆಗ ಮಾತ್ರ ಬದುಕು ಸಾರ್ಥಕದತ್ತ ದಾಪುಗಾಲು ಇಡುತ್ತಾ ಸಾಗುತ್ತದೆ...... ಏನಂತೀರಾ...........!

* * * * *

## ನನ್ನ ಸವಿಗನ್ನಡ

**– ಡಾ.ಎಂ.ಕೆ.ಮಂಜುನಾಥ, ಸಹಾಯಕ ಪ್ರಾಧ್ಯಾಪಕ**

ಕರುನಾಡಿನ ಸವಿನುಡಿ ಕನ್ನಡ
ಕನ್ನಡಿಗರ ನರನಾಡಿ ಕನ್ನಡ
ಗಂಧದ ಗುಡಿಯ ಚೆಂದದ ನುಡಿ ಕನ್ನಡ

ಕಾವೇರಿಯಿಂದ ಗೋದಾವರಿವರೆಗೆ ನೆಲೆಸಿದ್ದ ಕನ್ನಡ
ಪಂಪನು ಹೊಗಳಿದ ಬನವಾಸಿ ದೇಶದ ಕನ್ನಡ
ರನ್ನಪೊನ್ನರ ಮಹಾಕಾವ್ಯದಲಿ ಮೆರೆದ ಕನ್ನಡ

ಗಂಗ–ಕದಂಬರು ಕಟ್ಟಿದ ನಾಡಿನ ಕನ್ನಡ
ಚಾಲುಕ್ಯ–ಹೊಯ್ಸಳರ ದೇವಾಲಯ ಬೀಡಿನ ಕನ್ನಡ
ವಿಜಯನಗರ ಸಾಮ್ರಾಜ್ಯದಲಿ ನಲಿದ ಕನ್ನಡ

ಸಮಾನತೆ ದೀಪವ ಬೆಳಗಿದ ಬಸವಣ್ಣನ ಕನ್ನಡ
ದಾಸರು ಕಟ್ಟಿದ ಕೀರ್ತನೆಗಳ ಕನ್ನಡ
ಸರ್ವಜ್ಞನ ನೀತಿಬೋಧನೆಯ ವಚನಗಳ ಕನ್ನಡ

ಜನಪದರು ಹಾಡುವ ಗೀತೆಯ ಕನ್ನಡ
ಪುರಂದರರು ಸೃಷ್ಟಿಸಿದ ಸಂಗೀತದ ಕನ್ನಡ
ಕುವೆಂಪು ರಚಿಸಿದ ಕವಿತೆಯ ಕನ್ನಡ

ಜ್ಞಾನಪೀಠ ಶಿಖರಕೆ ಏರಿರುವ ಕನ್ನಡ
'ವಿಶ್ವಲಿಪಿಗಳ ರಾಣಿ'ಯೆಂಬ ಬಿರುದು ಪಡೆದ ಕನ್ನಡ
ಭುವನೇಶ್ವರಿಯ ಮಡಿಲಲಿ ನೆಲೆಸಿರುವ ಕನ್ನಡ
ಹೀಗೆ ಚಂದ್ರಾರ್ಕವಾಗಿ ಬೆಳಗಲಿ ನಮ್ಮ ಕನ್ನಡ

# ಕಣ್ಣೀರು ನನ್ನ ಗುರು

**– ಸಿಂಧು ವಿ ಜಿ, ದ್ವಿತೀಯ ಬಿ ಎ**

ಹೇ ಅಳುವೇ, ಯಾರಿರದ ವೇಳೆಯಲ್ಲಿ ನೀನೇಕೆ ಜೊತೆಗಿರುವೆ...

ಬಾಲ್ಯದಲ್ಲಿ ಅತ್ತಾಗ ನನ್ನ ಪರವಹಿಸಿ ಮಾತಾಡಲು ಅಪ್ಪ ಎದುರು ಬರುತ್ತಿದ್ದರು. ಅಮ್ಮ ಕೋಪದಲ್ಲಿ ಕಣ್ಣು ಕೆಂಪು ಮಾಡಿದಾಗ ಕಂಬನಿ ಕೆನ್ನೆ ಜಾರಿ ಹೋಗುತ್ತಿತ್ತು. ಶಾಲೆಯಲ್ಲಿ ಕಲಿಕೆಯಲ್ಲಿ ದ್ವಿತೀಯ ಸ್ಥಾನ ಸಿಕ್ಕಾಗ ಅಳು. ಓಟದಲ್ಲಿ ಹಿಂದೆ ಉಳಿದು ಜಾರಿ ಬಿದ್ದಾಗ ಅಳು. 'ಅಳು'ವಿಗೆ ವ್ಯಾಖ್ಯಾನದ ಅವಶ್ಯಕತೆಯೇ ಇಲ್ಲ. ಅಂದು ಭಾವನೆಯ ಪ್ರತಿಬಿಂಬ ಕಣ್ಣಿನ ಸ್ನೇಹಿತ.

ಬೆಳೆದು ಸ್ವಲ್ಪ ದೊಡ್ಡವಳಾದಾಗ ಇದ್ಯಾಕೋ ಅಳು ವಿಚಿತ್ರವಾಗಿದೆಯಲ್ಲ ಎಂದೆನಿಸಿತು, ಕಾರಣ ಅಪ್ಪ ನಮ್ಮನ್ನು ಬಿಟ್ಟು ದೇವರ ಪಾದ ಸೇರಿದ್ದರು. ಅಲ್ಲಿಯವರೆಗೂ ವಸ್ತು, ಬಹುಮಾನಕ್ಕಾಗಿ ಅಳುತ್ತಿದ್ದ ನಾನು, ಅಂದು ಅಪ್ಪ ಬಿಟ್ಟು ದೂರ ಹೋಗುತ್ತಿದ್ದಾರಲ್ಲ ಎಂದು ಅತ್ತೆ. ನಾನು ದೊಡ್ಡವಳಾಗುತ್ತಿದ್ದಂತೆ ಅಳುವಿನ ಮತ್ತೊಂದು ರೂಪದ ಪರಿಚಯವಾಯಿತು. ಈಗ ಅತ್ತರೆ ಏನನ್ನುತ್ತಾರೋ ಎಂಬ ಮುಜುಗರ ಅಳುಮುಂಜಿ ಪಟ್ಟ ಯಾರಿಗೆ ಬೇಕು. ಕಾಲೇಜಿನಲ್ಲಿ ಅತ್ತರಂತೂ ಹುಡುಗರ ಗೇಲಿ ಮಾತು 'ಕಣ್ಣ ಕಾಡಿಗೆ' ಮಿಂದು ಹರಡಿ ನೀ ರಕ್ಕಸಿಯಂತೆ ಕಾಣುವೆ ಗೆಳತಿ ಎಂದು ಹೇಳುವರು.

ಆದರೆ ಈಗ ಅಳುವ ಪ್ರಸಂಗ ಬದಲಾಗಿದೆ. ಗೆಳೆಯ ಮಾತು ಬಿಟ್ಟ ಎಂದು ಅಳು, ಭಾವನೆಗಳಿಗೆ ಬೆಲೆ ಇಲ್ಲವೆಂದು ಅಳು, ಬದುಕೆ ನೀರಸವೆಂಬ ಅಳು, ತಿಳಿದಾಗಿದೆ ಅಳುವಿನ ಹತ್ತಾರು ಮುಖಗಳು. ಈ ಅಳು ನಿಲ್ಲಿಸಲು ಲೇಖನಿ ಹಿಡಿಯಲು ಕಲಿಸಿದೆ. ಈ ಅಳುವೆಂಬ ಸ್ನೇಹಿತ ಭಾವನೆಗೆ ರೂಪ ಕೊಡಲು ನನ್ನ ಪಾಲಿಗೆ ಗುರುವಾಗಿದೆ ಈ 'ಅಳು' ವೆಂಬ ಸರದಾರ.

ಈಗ ಹೇಳಿ ಅಳುವಿಗೆ ಕಾರಣ ಬೇಕೆ..?

* * * * *

ಜೀವನದಲ್ಲಿ  ಸೂರ್ಯ ಮರೆಯಾದನೆಂದು ಅತ್ತರೆ, ಹೊಳೆಯುವ ನಕ್ಷತ್ರಗಳ ವೀಕ್ಷಣೆಗೂ ಕಣ್ಣೀರು ಅಡ್ಡಿಯಾಗುತ್ತದೆ. – **ರವೀಂದ್ರನಾಥ ಟ್ಯಾಗೋರ್**

ಚಿಂತನೆಯ ಮನಸ್ಸು ನಿಮ್ಮ ಮೂಲ ಆಸ್ತಿಯಾಗಿರಬೇಕು, ಆಗ ಜೀವನದಲ್ಲಿ ಏಳು ಬೀಳುಗಳು ಬಂದರೂ ದೃಢವಾಗಿ ನಿಲ್ಲಬಹುದು. – **ಡಾ.ಎ.ಪಿ.ಜೆ ಅಬ್ದುಲ್‌ಕಲಾಂ**

# ಬೆಲೆ ಕಟ್ಟಲಾಗದ ಪ್ರೀತಿ

**– ಸಹನ ಆರ್, ದ್ವಿತೀಯ ಬಿ.ಕಾಂ.,**

ಅಪ್ಪ ಎಂಬ ಪದ ಬಾಯಲ್ಲಿ ತುಂಬಾ ಸುಲಭವಾಗಿ ಹೇಳಬಹುದು. ಆದರೆ ಅಂತೆಯೇ ಅಪ್ಪನ ಪ್ರೀತಿಯನ್ನು ಎಂದಿಗೂ ಸುಲಭವಾಗಿ ವಿವರಿಸಲಾಗುವುದಿಲ್ಲ. ಆದರೂ ವಿವರಿಸಲು ಹೋದರೆ ಕಾಲಚಕ್ರ ಉರುಳುತ್ತಾ ಹೋದಂತೆ, ನಮ್ಮ ಜೀವನ ಅಂತ್ಯಗೊಂಡರೂ, ಇಡೀ ಭೂಮಂಡಲ ಕೊನೆಗೊಂಡರೂ ಅಪ್ಪನ ಪ್ರೀತಿಯ ವಿವರಣೆಗೆ ಮಾತ್ರ ಅಂತ್ಯ ನೀಡಲು ಸಾಧ್ಯವಿಲ್ಲ. ಅಪ್ಪ ಎಂಬ ಪದ ಬರಿ ಎರಡಕ್ಷರ; ಆದರೆ ಪ್ರೀತಿ ಮಾತ್ರ ಆಕಾಶದಂತೆ. ಆ ಪ್ರೀತಿ ಆಕಾಶವನ್ನೇ ಮೀರಿಸಬಹುದೇ ಹೊರತು ಭೂಮಿಗೆ ಕುಸಿದು ಬೀಳಲು ಸಾಧ್ಯವಿಲ್ಲ. ಒಬ್ಬನ ಕೈಯಲ್ಲಿ ಚಂದ್ರಾಯುಧವಿದ್ದರೆ ಹೇಗೆ ಭೂಮಿಯನ್ನು ಗೆಲ್ಲಬಹುದೋ, ಅಂತೆಯೇ ನಮ್ಮ ಜೊತೆ ಅಪ್ಪ ಇದ್ದರೆ ಯಾವ ತೊಂದರೆಗಳು ನಮ್ಮನ್ನು ತಲುಪುವುದಿಲ್ಲ.

ಸ್ನೇಹಿತರೇ ನಮಗೆ ನಮ್ಮ ಗೆಳೆಯ/ಗೆಳತಿ ಒಂದು ಚಿಕ್ಕ ಸಹಾಯ ಮಾಡಿದರೆ ಸಾಕು ಅವರಿಗೆ ಧನ್ಯವಾದ ಅಂತ ಹೇಳುತ್ತೇವೆ. ಆದರೆ ಅಪ್ಪ-ಅಮ್ಮ ನಿಮಗೆ ಎಷ್ಟೆಲ್ಲಾ ಮಾಡಿದ್ದಾರೆ. ಅದನ್ನು ನಮ್ಮ ಕೈಯಲ್ಲಿ ಊಹಿಸಲು ಸಾಧ್ಯವಿಲ್ಲ. ಆದರೆ ನಮ್ಮ ಜೀವನದಲ್ಲಿ ಒಂದು ಸಲವಾದರೂ ಅವರಿಗೆ ಧನ್ಯವಾದ ಹೇಳಿದ್ದೇವಾ? ಅಪ್ಪ ನಮಗೆ ಹುಷಾರಿಲ್ಲದಿದ್ದಾಗ ಒಬ್ಬ ವೈದ್ಯನಾಗುತ್ತಾನೆ, ನಮ್ಮ ಜೊತೆ ಆಟವಾಡುವಾಗ ನಮಗಿಂತ ಚಿಕ್ಕವನಾಗುತ್ತಾನೆ, ಕಷ್ಟದಲ್ಲಿ ಸಿಲುಕಿದಾಗ ಸ್ನೇಹಿತನಂತೆ ಸಲಹೆ ನೀಡುತ್ತಾನೆ. ಬುದ್ಧಿ ಹೇಳುವಾಗ ಒಬ್ಬ ಗುರುವನ್ನೇ ಮೀರಿಸುತ್ತಾರೆ.

ಆಕಸ್ಮಿಕವಾಗಿ ನಮಗೆ ಚೂರು ಕಾಲು ನೋವಾದರೆ ಸಾಕು, ಇಡೀ ರಾತ್ರಿ ನಮಗೆ ಗೊತ್ತಾಗದ ಹಾಗೆ ನಮ್ಮ ಪಕ್ಕದಲ್ಲಿ ಕುಳಿತುಕೊಂಡು ಕಾಲನ್ನು ಒತ್ತುತ್ತಾನೆ. ನಮಗೆ ಬೇಜಾರಾದಾಗ ಸಪ್ಪೆ ಮುಖ ಹಾಕಿಕೊಂಡು ಕುಳಿತುಕೊಂಡಿರುವಾಗ ಬಂದು ನಗಿಸುತ್ತಾನೆ. ನೋಡಿ ಅಪ್ಪನ ಪ್ರೀತಿ, ಮನಸ್ಸು ಎಷ್ಟು ವಿಶಾಲವಾದದ್ದು. ಅಂತಹ ಪ್ರೀತಿಗೆ ನಾವು ಎಂದಿಗೂ ಧಕ್ಕೆ ತರಬಾರದು. ಅವರಿಗೆ ನಮ್ಮಿಂದ ಒಂದು ಹನಿಯಷ್ಟು ನೋವಾಗದೇ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು. ಅಪ್ಪನ ಪ್ರೀತಿ ಮುಂದೆ ಎಲ್ಲವೂ ಸೋತುಹೋಗುತ್ತದೆ. ಆ ಜಾಗವನ್ನು ಯಾರಿಗೂ ತುಂಬಲು ಸಾಧ್ಯವಿಲ್ಲ. ತುಂಬಲು ಹೋದರೂ ಉಗುರಿನಷ್ಟಾದರೂ ವ್ಯತ್ಯಾಸವಿರುತ್ತದೆ. ಅದಕ್ಕಾಗಿ ಅಪ್ಪ ನಮ್ಮ ಜೊತೆ ಇರುವಾಗಲೇ ಅವರ ಪ್ರೀತಿಯನ್ನು ಅರಿತುಕೊಳ್ಳಬೇಕು. ಅಪ್ಪ ಇಲ್ಲದೇ ಹೋದಾಗ ಆ ಪ್ರೀತಿ ಬೇಕೆಂದರೂ ಸಿಗುವುದಿಲ್ಲ. ಅವರ ಜಾಗಕ್ಕೆ ಬೇರೆಯವರು ಬಂದು ಎಷ್ಟೇ ಪ್ರೀತಿ ತೋರಿಸಿದರೂ ನಿಜವಾದ ಅಪ್ಪನಾಗಲು ಎಂದಿಗೂ ಸಾಧ್ಯವಿಲ್ಲ. ಕೊನೆಯದಾಗಿ ಮತ್ತೊಂದು ಸಲ ಎಂದಿಗೂ ನಿಮ್ಮ ಅಪ್ಪನಿಗೆ ನೋವು ಕೊಡಬೇಡಿ, ಇಷ್ಟೆಲ್ಲಾ ಓದಿದ ನಂತರವಾದರೂ ನಿಮ್ಮೆಲ್ಲರ ಅಪ್ಪನಿಗೆ ನೀವು ಇಷ್ಟು ಅಮೂಲ್ಯವಾದ ಪ್ರೀತಿಯನ್ನು ತೋರಿಸಿದ್ದಕ್ಕೆ ಧನ್ಯವಾದ ಹೇಳುತ್ತೀರ ಅಂದುಕೊಂಡಿದ್ದೇನೆ.

ಧನ್ಯವಾದ ಹೇಳಿದ ಮಾತ್ರಕ್ಕೆ ಅಪ್ಪನ ಪ್ರೀತಿ ಕಡಿಮೆಯಾಗುತ್ತೆ ಎಂದು ತಿಳಿಯಬೇಡಿ. ಅಪ್ಪನ ಪ್ರೀತಿ ಎಂದಿಗೂ ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ ಮತ್ತು ಆ ಪ್ರೀತಿಗೆ ನಾವು ಬೆಲೆ ಕಟ್ಟಲು ಸಾಧ್ಯವಿಲ್ಲ.

* * * * *

# ದೇಶವೆಂದರೆ ಜನರು

– ಪ್ರದೀಪ್‌ಕುಮಾರ್‌ಗೌಡ .ಎಸ್, ತೃತೀಯ ಬಿಬಿಎ

ತುಂಬಾ ದಿನಗಳಿಂದ ನನಗೊಂದು ಪ್ರಶ್ನೆ ಕಾಡುತ್ತಿತ್ತು. ಸಮಯ ಬಂದಾಗ ಉತ್ತರ ಸಿಗಬಹುದೆಂದು ಸುಮ್ಮನಿದ್ದೆ. ಕೆಲವು ದಿನಗಳ ಹಿಂದೆ ಏನನ್ನೋ ಓದುತ್ತಿದ್ದಾಗ ದೇಶ ಎಂದರೆ ಕಲ್ಲಲ್ಲ, ಮಣ್ಣಲ್ಲ, ನಕ್ಷೆ, ಭೂಪಟವಲ್ಲ, ದೇಶ ಎಂದರೆ ಜನ, ಬರೀ ಜನ ಎಂದಿತ್ತು. ಇಷ್ಟೊ ಸಣ್ಣದಾದ ವಾಕ್ಯ ರಾಷ್ಟ್ರ ಎಂದರೇನು? ಎಂಬ ನನ್ನ ಪ್ರಶ್ನೆಗೆ ಉತ್ತರ ಕೊಡಬಹುದೆಂದು ನಿರೀಕ್ಷಿಸಿರಲಿಲ್ಲ. ರಾಷ್ಟ್ರಸೇವೆ, ದೇಶ ಭಕ್ತಿ ಎಂಬುದೆಲ್ಲ ದೊಡ್ಡ ದೊಡ್ಡ ಪದಗಳೇ ಅವೆಲ್ಲಾ ನಮ್ಮಂಥ ಸಾಮಾನ್ಯರಿಗೆ ಅರ್ಥವಾಗುವುದು ಕೂಡ ಅಸಾಧ್ಯ.

ಇಂದು ಭಾರತ ಎದುರಿಸುತ್ತಿರುವ ಸವಾಲುಗಳು ಸಾಕಷ್ಟಿವೆ. ಅದರಲ್ಲಿ ಬಡತನವು ಒಂದು. ಇಂದಿಗೂ ಎಷ್ಟೋ ಜನರಿಗೆ ಮಳೆ ಗಾಳಿಗೆ ಭದ್ರವಾಗಿ ನಿಲ್ಲಬಲ್ಲ ಒಂದು ಮನೆಯೂ ಕೂಡ ಇಲ್ಲ! ಅದೆಷ್ಟೋ ಜನ ಬಸ್‌ಸ್ಟಾಂಡಲ್ಲಿ ಮಲಗೆದ್ದು ಪ್ರಯಾಣಿಸುವವರಿದ್ದಾರೆ. ಒಂದು ಹೊತ್ತಿನ ಊಟಕ್ಕೆ ಪರದಾಡುವವರಿದ್ದಾರೆ. ಇನ್ನುಳಿದ ಮಧ್ಯಮ ವರ್ಗದವರ ಸ್ಥಿತಿಯೂ ಉತ್ತಮವಾಗಿಲ್ಲ. ಅವರಿಗೆ ಒಂದಿದ್ದರೆ ಮತ್ತೊಂದರ ಕೊರತೆ. ಇದಕ್ಕೆಲ್ಲ ಕಾರಣವೆಂದರೆ ಬೌದ್ಧಿಕ ದಾರಿದ್ರ್ಯ, ರಾಜಕೀಯ ದಾರಿದ್ರ್ಯ, ಸಾಮಾಜಿಕ ದಾರಿದ್ರ್ಯವೆಂದು ಹೇಳಿಬಿಡಬಹುದು. ಆದರೆ ಇದನ್ನೆಲ್ಲ ಬಗೆಹರಿಸುವುದು ಅಷ್ಟು ಸುಲಭದ ಕೆಲಸವಲ್ಲ ಖಂಡಿತ. ಸಾಕಷ್ಟು ಬಾರಿ ಸಮಾಜದ ಏಳಿಗೆ ಬಗ್ಗೆ ಯೋಚಿಸೋ ನಾವು, ಸ್ವ ಏಳಿಗೆಯ ಬಗ್ಗೆ ಮರೆತು ಬಿಡುತ್ತೇವೆ. ಇದು ಇಂದಿನ ಜನರಲ್ಲಿ ಕಾಣುವ ಸಾಮಾನ್ಯ ರೋಗ ಎಂದರೆ ತಪ್ಪಾಗಲಾರದು. ಪ್ರಜೆಗಳು ತಮ್ಮ ಏಳಿಗೆ ಸಾಧಿಸದ ಹೊರತು ರಾಷ್ಟ್ರದ ಏಳಿಗೆ ಎಂದಿಗೂ ಸಾಧ್ಯವಿಲ್ಲ.

ನಿಜವಾದ ರಾಷ್ಟ್ರ ಸೇವೆ ಮಾಡಬೇಕೆಂದರೆ ಗಡಿಯಲ್ಲಿ ಗನ್ ಹಿಡಿದು ನಿಲ್ಲಬೇಕಿಲ್ಲ. ಹಸಿದವರಿಗೆ ಮನೆಗೆ ಕರೆದು ಒಂದು ಹೊತ್ತಿನ ಊಟ ಕೊಟ್ಟರೆ ಅದು ಕೂಡ ರಾಷ್ಟ್ರ ಸೇವೆಯೇ. ಶಿಕ್ಷಣ ಮಾಡುತ್ತಿರುವ ಒಬ್ಬ ಬಡ ವಿದ್ಯಾರ್ಥಿಗೆ ನೀವೊಂದು ಪುಸ್ತಕ ಪೆನ್ ಕೊಟ್ಟರು ಅದು ರಾಷ್ಟ್ರ ಸೇವೆಯೇ. ಕುಗ್ರಾಮದಲ್ಲಿ ಬಳಲುತ್ತಿರುವ ಒಬ್ಬ ರೋಗಿಯನ್ನು ಆಸ್ಪತ್ರೆಗೆ ಸೇರಿಸಿದರೆ ಅದು ಕೂಡ ರಾಷ್ಟ್ರ ಸೇವೆಯೇ ಆಗುವುದು. ಅದಕ್ಕೆ ಹೇಳೋದು ರಾಷ್ಟ್ರ ಎಂದರೆ ಯಾವುದೋ ದೂರದ ಬೆಟ್ಟವಲ್ಲ, ನಮ್ಮ ಅಕ್ಕಪಕ್ಕದಲ್ಲಿ ವಾಸಿಸುತ್ತಿರುವ ಜನರು. ಆ ಜನರ ಸೇವೆ ಮಾಡಿದರೆ ನಿಜಕ್ಕೂ ರಾಷ್ಟ್ರ ಸೇವೆ ಮಾಡಿದಂತೆಯೇ ಆಗುವುದು. ಅದ್ಯಾವುದು ಆಗದಿದ್ದರೂ ನೀವ್ಯಾರಿಗೂ ತೊಂದರೆ ಕೊಡದೆ ಬದುಕಿದರೂ ಅದೇ ದೊಡ್ಡ ರಾಷ್ಟ್ರ ಸೇವೆ!.

ಈ ಮಾತನ್ನು ಜಗತ್ತಿಗೆ ಮೊಟ್ಟಮೊದಲು ಸಾರಿದವರು ತೆಲುಗು ಭಾಷೆಯ ಕವಿಯಾದ ಶ್ರೀ ಗುರುಜಾಡ ಅಪ್ಪಾರಾವ್. ಅವರ ಮಾತು ಇಲ್ಲಿ ಪ್ರಸ್ತುತ. 'ದೇಶಮಂಟೆ ಮಟ್ಟಿಕಾದೋಯ್ ... ದೇಶಮಂಟೇ ಮನುಷುಲೋಯ್' ಎಂಬುದು ಅವರ ಮಾತು ಅರ್ಥಾತ್: 'ದೇಶವೆಂದರೆ ಮಣ್ಣಲ್ಲವೋ.. ದೇಶವೆಂದರೆ ಮನುಷ್ಯರೋ' ಎಂದು ಹೀಗೆ ನಿಜವಾದ ದೇಶಭಕ್ತಿಯನ್ನು ಎಲ್ಲರಲ್ಲೂ ನೆಲೆಸಲಿ ಎಂದು ಆಶಿಸುತ್ತೇನೆ.

* * * * *

## ನಾಡಪ್ರಭು ಕೆಂಪೇಗೌಡ

**– ಉದಯ್‌ಕುಮಾರ್ .ಕೆ.ಎಸ್, ದ್ವಿತೀಯ ಬಿ.ಕಾಂ**

ತಾಯಿ ಲಿಂಗಾಂಬೆಯ ಗರ್ಭದಿ ಜನಿಸಿ
ಕೆಂಪನಂಜೇಗೌಡರ ಕೀರ್ತಿಯ ಬೆಳಗಿಸಿ
ಕುಲ–ಮತಗಳ ಬೇಧವ ಅಳಿಸಿ
ವೈರಿ ಪಡೆಯ ಮದವಡಗಿಸಿದವರು
ನಾಡಪ್ರಭು ಕೆಂಪೇಗೌಡ...

ಗುಡಿ ಗೋಪುರ ಕಟ್ಟಿದ ಶಿಲ್ಪಿ ನೀವು
ದಾನ ಧರ್ಮ ಉಸಿರೆಂದ ಕರ್ಣ ನೀವು
ನಾಡ ನುಡಿ ರಕ್ಷಿಸಿದ ಯೋಧ ನೀವು
ಸರ್ವ ಧರ್ಮ ಒಂದೇ ಎಂದವರು
ನಾಡಪ್ರಭು ಕೆಂಪೇಗೌಡ...

ನಾಡನ್ನಾಳಿದ ಶ್ರೇಷ್ಠ ಪಾಳೇಗಾರ
ಇಟ್ಟ ಗುರಿಯ ಸಾಧಿಸದೆ ಬಿಡದ ಛಲಗಾರ
ಕೊಟ್ಟ ಮಾತು ತಪ್ಪದ ಸರದಾರ
ಶ್ರೀಕೃಷ್ಣದೇವರಾಯನ ಹೆಗ್ಗಳಿಕೆಗೆ ಪಾತ್ರರಾದವರು
ನಾಡಪ್ರಭು ಕೆಂಪೇಗೌಡ...



ನಾಲ್ಕು ದಿಕ್ಕಿಗೂ ಕಟ್ಟಿದ ನೇಗಿಲ ಹೊನ್ನಾರ
ನವ ಬೆಂಗಳೂರ ಕನಸೊತ್ತ ಹರಿಕಾರ
ಸರ್ವರ ಏಳಿಗೆಗೆ ನೀಡಿದರು ಸಹಕಾರ
ಕನ್ನಡನಾಡೊಳ್ ಖಡ್ಗವ ಝಳಪಿಸಿದರು
ನಾಡಪ್ರಭು ಕೆಂಪೇಗೌಡ...

# ಆಸೆಯ ಮಡಿಕೆ

**– ಮಮತ ಆರ್, ದ್ವಿತೀಯ ಬಿ.ಎ**

ಕನಕಪುರ ಎಂಬ ಹಳ್ಳಿಯಲ್ಲಿ ಒಬ್ಬ ರೈತ ತನ್ನ ಹೆಂಡತಿಯೊಂದಿಗೆ ವಾಸವಾಗಿದ್ದ. ಅವನಿಗೆ ಸ್ವಲ್ಪ ಜಮೀನಿತ್ತು. ಆ ಜಮೀನಿನಿಂದ ಅವರಿಬ್ಬರ ಉದರ ಪೋಷಣೆಯಾಗುತಿತ್ತು. ಆದರೆ ಅದರಿಂದ ರೈತ ಸಂತುಷ್ಟವಾಗಿರಲಿಲ್ಲ. ಅವನಿಗೆ ಇತರರಂತೆ ತಾನೂ ಧನಿಕನಾಗಬೇಕು ಎಂಬ ಇಚ್ಚೆ ಇತ್ತು. ಅದರಿಂದಾಗಿ ಅವನು ಯಾವಾಗಲೂ ದುಃಖಿತನಾಗಿರುತ್ತಿದ್ದ.

ಒಂದು ದಿನ ರೈತ ತನ್ನ ಹೊಲವನ್ನು ಉತ್ತು ಮನೆಗೆ ಮರಳುತ್ತಿದ್ದ, ಬಿಸಿಲು ತುಂಬಾ ಪ್ರಕಾಶಮಾನವಾಗಿತ್ತು. ರೈತನಿಗೆ ತುಂಬಾ ದಣಿವಾಗಿತ್ತು. ದಣಿವಾರಿಸಿಕೊಳ್ಳಲು ಅವನು ಒಂದು ದೊಡ್ಡ ಆಲದ ಮರದ ನೆರಳಗೆ ಹೋದ. ಮರದ ನೆರಳಿನ ಕೆಳಗೆ ಕುಳಿತ ರೈತನಿಗೆ ಗಾಢವಾದ ನಿದ್ದೆ ಆವರಿಸಿತು. ಅವನು ಎಷ್ಟು ಹೊತ್ತು ಹಾಗೆ ಮಲಗಿದ್ದನೋ, ಅವನಿಗೆ ಎಚ್ಚರವಾದಾಗ ಆಗಲೇ ಸಂಜೆಯಾಗಿ ಬಿಟ್ಟಿತ್ತು. ಅವನು ಕಣ್ಣುಜಿಕೊಂಡು ಮನೆಗೆ ಹೊರಡಲು ಸಿದ್ಧನಾದ. ಅವನಿಗೆ ಒಂದು ಧ್ವನಿ ಕೇಳಿಸಿತು. 'ನಿನಗೆ ಸಂಪತ್ತು ಬೇಕೆ?'. ರೈತ ಸುತ್ತಲೂ ನೋಡಿದ, ಆದರೆ ಯಾರೂ ಕಾಣಿಸಲಿಲ್ಲ. ಅವನು ತುಂಬಾ ಹೆದರಿದ. ಆಗ ಅದೇ ಧ್ವನಿ ಮತ್ತೊಮ್ಮೆ ಕೇಳಿಸಿತು. 'ನಿನಗೆ ಸಂಪತ್ತು ಬೇಕೆ? ಎಂದು. ಈ ಬಾರಿ ರೈತ ಹೆದರಲಿಲ್ಲ. ಬಹುಶಃ ದೇವರೇ ತನ್ನ ಮೇಲೆ ಸಂತುಷ್ಟನಾಗಿ ಈ ಮಾತನ್ನು ಕೇಳುತ್ತಿರಬಹುದೆಂದು ಅವನು ಭಾವಿಸಿದ. ಅವನು ತನ್ನ ಧೈರ್ಯವನ್ನು ಒಟ್ಟುಗೂಡಿಸಿ 'ಹಾಂ ಬೇಕು ನನಗೆ ಸಾಕಷ್ಟು ಧನ ಬೇಕು' ಎಂದು ಹೇಳಿದ. ಆಗ ಆ ಧ್ವನಿ ಹೇಳಿತು: 'ನೀನು ಈಗ ಮನೆಗೆ ಹೋಗು ಅಲ್ಲಿ ಬಂಗಾರದ ನಾಣ್ಯಗಳಿಂದ ತುಂಬಿದ ಏಳು ಮಡಕೆಗಳು ನಿನಗಾಗಿ ಕಾದಿವೆ' ಎಂದು. ರೈತ ಲಗುಬಗೆಯಿಂದ ತನ್ನ ಮನೆಗೆ ಹೋದ. ಅಲ್ಲಿ ನಿಜವಾಗಿಯೂ ಏಳು ಮಡಕೆಗಳಿದ್ದವು. ಅವನು ತನ್ನ ಹೆಂಡತಿಯನ್ನು ಕರೆದು ಅವಳಿಗೆ ಮಡಕೆಗಳನ್ನು ತೋರಿಸುತ್ತ ಹೇಳಿದ 'ನೋಡು ದೇವರು ನಮ್ಮ ಇಚ್ಚೆಯನ್ನು ಅರಿತುಕೊಂಡು ಸಂಪತ್ತನ್ನು ನಮಗೆ ದಯಪಾಲಿಸಿದ್ದಾನೆ.' ಉತ್ಸಾಹದ ಬರದಲ್ಲಿ ರೈತ ಪ್ರತಿಯೊಂದು ಮಡಕೆಯ ಮೇಲಿನ ಮುಚ್ಚಳವನ್ನು ತೆಗೆದು ನೋಡತೊಡಗಿದ. ಆರು ಮಡಕೆಗಳು ಚಿನ್ನದ ನಾಣ್ಯಗಳಿಂದ ಪೂರ್ತಿಯಾಗಿ ತುಂಬಿದ್ದವು. ಆದರೆ ಏಳನೆಯ ಮಡಕೆ ಮಾತ್ರ ಅರ್ಧ ತುಂಬಿತ್ತು. ಈಗ ರೈತ ತನ್ನ ಇಡೀ ಜೀವಮಾನ ಸುಖವಾಗಿರುವಷ್ಟು ಸಂಪತ್ತಿತ್ತು. ಆದರೂ ರೈತನು ಸಂತುಷ್ಟನಾಗಲಿಲ್ಲ. ಇನ್ನೊಂದು ಮಡಕೆ ಅರ್ಧ ತುಂಬಿದೆಯಲ್ಲ. ಅದನ್ನು ಪೂರ್ತಿ ತುಂಬುವಂತೆ ಮಾಡುವುದು ಹೇಗೆ ಎಂಬ ಚಿಂತನೆಗೆ ಅವನು ಒಳಗಾದನು.

ಹೇಗಾದರೂ ಮಾಡಿ ಏಳನೆಯ ಮಡಕೆಯನ್ನು ಚಿನ್ನದಿಂದ ಪೂರ್ತಿಯಾಗಿ ತುಂಬಿಬಿಡಬೇಕೆಂದು ಅವನು ನಿರ್ಧರಿಸಿದ. ಗಂಡ–ಹೆಂಡತಿ ಇಬ್ಬರೂ ಹಗಲಿರುಳು ದುಡಿದು ಬಂದ ಹಣವನ್ನು ತಮ್ಮ ಜೀವನಕ್ಕೆ ಬಳಸಿಕೊಳ್ಳದೆ ಅದರಿಂದ ಚಿನ್ನ ಖರೀದಿಸಿ ಆ ಮಡಕೆಗೆ

ಸುರಿಯತೊಡಗಿದರು. ಆ ಪ್ರಯತ್ನದಲ್ಲಿ ಹಲವು ವರ್ಷಗಳೇ ಕಳೆದು ಹೋದವು. ಆದರೆ ಆ ಮಡಕೆ ತುಂಬಲೇ ಇಲ್ಲ.

ಒಂದು ದಿನ ಒಬ್ಬ ಸಾದು ಅವರ ಮನೆಗೆ ಬಂದ. ರೈತ ದಂಪತಿಗಳು ಚಿಂತಿತರಾಗಿರುವುದನ್ನು ಕಂಡು, 'ಯಾಕೆ ಏಳನೆಯ ಮಡಕೆ ತುಂಬಲಿಲ್ಲವೇ' ಎಂದು ಕೇಳಿದ. ಅವನ ಮಾತನ್ನು ಕೇಳಿದ ದಂಪತಿಗೆ ತುಂಬಾ ಆಶ್ಚರ್ಯವಾಗಿತ್ತು. ಈ ವಿಷಯ ಸಾದುವಿಗೆ ತಿಳಿದದ್ದು ಹೇಗೆ? ಎಂದು ಅವರು ಯೋಚಿಸತೊಡಗಿದರು. ಅವರ ಮನಸ್ಸಿನ ಹಿಂಗಿತವನ್ನರಿತ ಸಾದು ಹೇಳಿದ, 'ನನಗೆ ಈ ವಿಷಯ ಹೇಗೆ ತಿಳಿಯಿತು ಎಂದು ಆಶ್ಚರ್ಯವಾಗಿರಬಹುದಲ್ಲವೇ? ಆ ಮಡಕೆಗಳನ್ನು ನಿಮಗೆ ನೀಡಿದವನೇ ನಾನು, ಆ ಏಳನೆಯ ಮಡಕೆ ಇದೆಯಲ್ಲ ಮಾನವನ ಆಸೆಗೆ ಕೊನೆ ಎಂಬುವುದಿಲ್ಲ. ಆದ್ದರಿಂದ ಆ ಮಡಕೆ ಎಂದೂ ತುಂಬುವುದೇ ಇಲ್ಲ. ನೀವು ನಿಮಗೆ ದೊರೆತ ಸಂಪತ್ತಿನಿಂದ ಸುಖವಾಗಿರುವುದನ್ನು ಬಿಟ್ಟು ಆ ಆಸೆಯ ಮಡಿಕೆಯನ್ನು ತುಂಬಿಸಲು ಹೋಗಿ ನಿಮ್ಮ ಜೀವನವನ್ನು ವ್ಯರ್ಥ ಹಾಳುಮಾಡಿಕೊಂಡಿರಿ. ಆಸೆ ಎಂಬುದು ಮನುಷ್ಯನ ಮನಸ್ಸನ್ನು ವ್ಯಾಕುಲಗೊಳಿಸಿ ಅವರ ನೆಮ್ಮದಿಯನ್ನು ಹಾಳುಮಾಡುತ್ತದೆ. ತನ್ನ ಆಸೆಯೂ ಪೂರ್ಣವಾಗದೇ ಮಾನವ ಈ ಲೋಕವನ್ನು ತ್ಯಜಿಸುತ್ತಾನೆ. ಆದ್ದರಿಂದ ನಾವು ನೆಮ್ಮದಿಯಾಗಿರಲು ನಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ನಾವು ಬಯಸಬೇಕು, ಇಷ್ಟು ಹೇಳಿ ಆ ಸಾಧು ಅಲ್ಲಿಂದ ಹೊರಟುಹೋದ.

ಸಾಧು ಹೊರಟು ಹೋದ ಕೂಡಲೇ ಏಳೂ ಮಡಿಕೆಗಳು ಕೂಡಾ ಮಾಯವಾದವು ಆಗ ರೈತ ದಂಪತಿ ತಾವು ಮಾಡಿದ ತಪ್ಪಿಗಾಗಿ ಪಶ್ಚಾತಾಪವಾಗಿ ನೊಂದುಕೊಂಡರು. ಏಳನೆಯ ಮಡಕೆಯನ್ನು ತುಂಬಲು ತಾವು ಖರ್ಚು ಮಾಡಿದಷ್ಟು ಸಮಯವನ್ನು ದೈವ ಕೃಪೆಗೆ ವ್ಯಯಿಸಿದ್ದರೆ ನಮ್ಮ ಜೀವನ ಪಾವನವಾಗಿರುತ್ತಿತ್ತು ಎಂದು ಅಂದುಕೊಂಡರು. ರೈತದಂಪತಿಯಂತೆ ಜೀವನವನ್ನು ಕೇವಲ ಹಣ ಗಳಿಸುವುದರಲ್ಲಿ ಕುಟುಂಬದವರ ಅವಶ್ಯಕತೆಯನ್ನು ಪೂರೈಸದೇ, ಕಾಲ ಕಳೆಯಬೇಡಿ ಭಗವಂತನ ಕೃಪೆಗಾಗಿ ಸ್ವಲ್ಪ ಸಮಯ ಮೀಸಲಿಡಿ.

* * * * *

ಸಾವಿಗೆ ನಾ ಹೆದರುವುದಿಲ್ಲ 'ಯಾಕೆಂದರೆ' ನಾ ಇರುವತನಕ ಅದು ಬರುವುದಿಲ್ಲ, ಅದು ಬಂದಾಗ ನಾ ಇರುವುದಿಲ್ಲ. – **ದ.ರಾ ಬೇಂದ್ರೆ**

ಮಹತ್ವಕಾಂಕ್ಷಿಯಾಗಿರು, ಆದರೆ ಅದಕ್ಕೆ ಯಾವ ಎಲ್ಲೆಯೂ ಇಲ್ಲದಂತೆ ನೋಡಿಕೊ. – **ಡಾ.ಸಿ.ವಿ ರಾಮನ್**

ನೀವು ಏನೇ ಮಾಡುತ್ತಿರಿ, ನಿಮಗೆ ನೀವು ರಿಯಾಯಿತಿ ಇಟ್ಟುಕೊಳ್ಳದಿರಿ. – **ಮಾರ್ಕ್‌ಜುಕರ್‌ಬರ್ಗ್**

ಸಮಯ ಎಂಬುದು ಅತ್ಯುತ್ತಮ ಲೇಖಕ, ಅದು ಯಾವಾಗಲೂ ಪರಿಪೂರ್ಣವಾದ ಅಂತ್ಯವನ್ನೇ ಬರೆಯುತ್ತದೆ. – **ಚಾರ್ಲಿ ಚಾಪ್ಲಿನ್**

# ಅನುಭವ

**– ಬಿಂದುಶ್ರೀ ಕೆ.ಆರ್, ತೃತೀಯ ಬಿ.ಎ**

ಪ್ರತಿಯೊಂದು ಜೀವಿಯ ಜೀವನದಲ್ಲಿ ಪ್ರಭಾವ ಬೀರುವ, ಬದಲಾವಣೆ ತರುವ ಮತ್ತು ಆ ಜೀವಿಯ ಉತ್ತುಂಗ ಮಟ್ಟದ ಏಳಿಗೆಗೂ ಅನುಭವ ಮುಖ್ಯಪಾತ್ರವನ್ನು ವಹಿಸುತ್ತದೆ. ಅನುಭವ ಪ್ರತಿ ಜೀವಿಯ ಶ್ರೇಷ್ಠ ಗುರು ಅಂತನೇ ಹೇಳಬಹುದು. ನಾವು ಹುಟ್ಟಿನಿಂದ ಬೆಳವಣಿಗೆಯ ಜೊತೆಗೆ ನಾವು ಮಾಡುವ ಒಳಿತು ಕೆಡಕು ಎಲ್ಲದರಲ್ಲೂ ಪಾಠ ಕಲಿಸುತ್ತದೆ.

ಆದರೆ ಆ ಪಾಠ ಒಳ್ಳೆದೂ ಆಗಿರಬಹುದು, ಕೆಟ್ಟದೂ ಆಗಿರಬಹುದು. ನಮ್ಮ ಜೀವನದ ಎಷ್ಟೋ ಘಟನೆಗಳಿಂದ ಪಡೆದುಕೊಳ್ಳುವ ಅನುಭವ ಕೆಲವೊಮ್ಮೆ ಪ್ರೀತಿ, ಸಹನೆ, ಕರುಣೆ, ತ್ಯಾಗದ ಪರಿಚಯ ಮಾಡಿಸಿದೆ. ಹಾಗೇ ನಮ್ಮ ಜೀವನದಲ್ಲಿ ಅವುಗಳ ಅಳವಡಿಸಿಕೊಳ್ಳುವ ಪ್ರಾಮುಖ್ಯತೆಯನಲ್ಲಿ ಪರಿಚಯಿಸಿದ್ದರೆ, ಇನ್ನೂ ಕೆಲವು ಅನುಭವಗಳು ಆಸೆ–ದುರಾಸೆ, ಸ್ವಾರ್ಥ, ಮತ್ಸರ, ದ್ರೋಹ ಇತ್ಯಾದಿಗಳ ಕುರೂಪಿ ಮುಖ ಪರಿಚಯವನ್ನು ಮಾಡಿಸಿಬಿಡುತ್ತದೆ .

ಅನುಭವ ನಾವು ನಮ್ಮ ಪ್ರತಿನಿತ್ಯದ ಜೀವನದ, ಪ್ರತಿನಿತ್ಯದ ವಾತಾವರಣದಿಂದ ಕಲಿಯುವ ಒಂದು ಪಾಠ. ಪ್ರತಿ ದಿನ ನಾವು ಕಾಣುವಂತೆ ನೂರಾರು ಘಟನೆಗಳು ಉಂಟಾಗುತ್ತವೆ. ಈ ನೂರಾರು ಘಟನೆಗಳ ತೀವ್ರ ವೀಕ್ಷಣೆಯಿಂದ ನಾವು ಭಿನ್ನ ಭಿನ್ನ ರೀತಿಯ ಅನುಭವಗಳನ್ನು ಪಡೆದುಕೊಳ್ಳುತ್ತ ಬರುತ್ತೇವೆ. ಉದಾಹರಣೆಗೆ ಕೆಲವೊಮ್ಮೆ ನಮ್ಮ ಸುತ್ತಲಿನ ಎಷ್ಟೋ ಜನಗಳು ತಮ್ಮ ನಯವಾದ ಮುಖವನ್ನು ತೋರಿಸಿ ನಿಮ್ಮ ಸ್ನೇಹವನ್ನು ಪಡೆದಿರುತ್ತಾರೆ. ಆದರೆ ಕೆಲವೊಂದು ಘಟನೆಗಳಲ್ಲಾಗುವ ಅನುಭವ ಅವರು ನಿಮ್ಮ ನಂಬಿಕೆಗೆ ಯೋಗ್ಯರಲ್ಲ ಅರ್ಹರಲ್ಲಾ ಎಂಬುದನು ತಿಳಿಸಿಬಿಡುತ್ತಾರೆ. ಅದಕ್ಕಾಗಿಯೇ ನಾವು ಜೀವನದಲ್ಲಿ ಅನುಭವಿಸುವ ಎಲ್ಲಾ ಘಟನೆಗಳಲ್ಲೂ ನಾವು ಪಾಠ ಕಲಿತಿರಬೇಕು. ಒಂದು ಬಾರಿ ಮಾಡಿದ ತಪ್ಪನ್ನೂ ಹಲವು ಬಾರಿ ಮಾಡದಂತೆ ನಮ್ಮ ಅನುಭವಗಳನ್ನು ಸದುಪಯೋಗ ಮಾಡಿಕೊಳ್ಳಬೇಕು. ಹಾಗಂತ ನಮ್ಮ ಜೀವನದಲ್ಲಿ ನಡೆಯುವ ಕೆಲವು ಘಟನೆಗಳಲ್ಲಿ ನಾವು ಪಡೆಯುವ ಕಹಿ ಅನುಭವಗಳು ನಮ್ಮ ಜೀವನದಲ್ಲಿ ದುರಾಸೆ, ಸ್ವಾರ್ಥ, ಮೋಸ ಮಾಡುವ ದಾರಿಗೂ ಎಳೆಯುವ ಪ್ರಯತ್ನವನ್ನು ಮಾಡಬಹುದು. ಆದರೆ ಕಹಿ ಅನುಭವಗಳಿಂದ ನಾವು ಪಾಠ ಕಲಿಯಬೇಕೆ ಹೊರತು ನಮ್ಮತನ/ ಒಳ್ಳೇತನವನ್ನು ಬಿಟ್ಟು ಅಡ್ಡದಾರಿ ಹಿಡಿಯಬಾರದು. ಈ ಮಾತು ಈ ಪೀಳಿಗೆಯ ಯುವಜನಾಂಗಕ್ಕೆ ಬಹುಮುಖ್ಯವಾಗಿದೆ. ಏಕೆಂದರೆ ಯುವ ಜನಾಂಗಕ್ಕೆ ತಿಳಿದಂತೆ ತಾಳ್ಮೆ, ಅನುಭವ ಎರಡೂ ಕಡಿಮೆ. ಈ ವಯಸ್ಸಿನಲ್ಲಿ ಹೆಚ್ಚಾಗಿ ಬಹಳ ಜನ ದುಡುಕು ಸ್ವಭಾವದವರಾಗುವವರೇ ಹೆಚ್ಚು. ಜೀವನವನ್ನು ಆನಂದಿಸುವ ಉತ್ಸಾಹದಲ್ಲಿ ಕೆಟ್ಟ ದಾರಿಗೆ ಇಳಿಯುತ್ತಾರೆ. ಮತ್ತೆ ಅದೇ ಚಟಕ್ಕೆ ದಾಸರಾಗಿ ಬಿಡುತ್ತಾರೆ. ಉದಾ: ಮದ್ಯಪಾನ, ಧೂಮಪಾನ, ಇತ್ಯಾದಿ. ಹಾಗಾಗಿ ನಮ್ಮ ಜೀವನ ನಮಗೆ ಎಂತಹ ಕಹಿ ಘಟನೆಗಳನ್ನು ಒಡ್ಡಿದರೂ ನಾವು ಆ ನೋವಿನಿಂದ ಸಿಕ್ಕ ಅನುಭವಗಳನ್ನು ಒಳ್ಳೆ ರೀತಿಯಲ್ಲಿ ತೆಗೆದುಕೊಳ್ಳಬೇಕೇ ಹೊರತು ಮತ್ತೊಂದು ರೀತಿಯಲಲ್ಲ.

ಹಳೆಯ ಮಾತಿನಂತೆ 'ಸೋಲೇ ಗೆಲುವಿನ ಮೆಟ್ಟಲು' ಎನ್ನುವುದರಲ್ಲಿ ನಾವು ನಮ್ಮ ಸೋಲಿನಿಂದ ಸಿಕ್ಕ ಅನುಭವಗಳನ್ನು ನಮ್ಮ ಗೆಲುವಿಗೆ ಒಳ್ಳೆ ರೀತಿಯಲ್ಲಿ ಉಪಯೋಗಿಸಬೇಕೆ ಹೊರತು ಪಡೆದ ಅನುಭವಗಳ ಅನ್ಯತಾ ಯೋಚನೆ ನಮ್ಮ ದೌರ್ಬಲ್ಯಗಳನ್ನಾಗಿಸಿಕೊಳ್ಳುವುದಲ್ಲ.


ತತ್ವಜ್ಞಾನಿ, ಅರ್ಥಶಾಸ್ತ್ರಜ್ಞ ಚಾಣಕ್ಯನ ಮಾತಿನ ಪ್ರಕಾರ "ನಾವು ಜೀವನದಲ್ಲಿ ಬೇರೆಯವರ ತಪ್ಪುಗಳಿಂದ ಕಲಿಯಬೇಕು. ಏಕೆಂದರೆ ಎಲ್ಲಾ ತಪ್ಪುಗಳನ್ನು ನಾವು ಮಾಡಿ ಕಲಿಯಲು ಜೀವನ ಬಹಳ ಚಿಕ್ಕದು" ಎಂದು.

ಅಂದರೆ ಜೀವನ ಎಲ್ಲಾ ಪಾಠಗಳನ್ನು ನಾವು ನಮ್ಮ ಅನುಭವದಿಂದಲೇ ಕಲಿಯಲಾಗುವುದಿಲ್ಲ. ನಮ್ಮ ಸುತ್ತಲಿನ ಜನರ ಅನುಭವದಲ್ಲೂ ನಾವು ಪಾಠ ಕಲಿಯಬೇಕಾಗುತ್ತದೆ. ನಮ್ಮನ್ನು ನಾವು ತಿದ್ದಿಕೊಳ್ಳಬೇಕಾಗಿರುತ್ತದೆ. ಜೀವನದಲ್ಲಿ ನಾವು ನೋಡಿ ಮಾಡಿ ಹಾಗೂ ಕೇಳಿ ಕಲಿತು ಅನುಭವ ಪಡೆಯಬೇಕು 'ಅನುಭವಗಳಿಂದ ಪಡೆಯುವ ಕಲಿಕೆಯೇ ಜೀವನ'.

* * * * *

## ನನ್ನ ಪ್ರೀತಿಯ ಅಪ್ಪ....

– ಅನುಷ ಟಿ. ಇ. ತೃತೀಯ ಬಿ.ಕಾಂ.



ನನ್ನ ಅಪ್ಪ ಬಡವನಾದ್ರು
ಅವನ ಪುಟ್ಟ ಗುಡಿಸಲಿಗೆ
ನಾನೇ ರಾಜಕುಮಾರಿ

ತಾನು ಹಸಿವಿನಿಂದ ಇದ್ದರು
ತನ್ನ ಕಂದನ ಹೊಟ್ಟೆ ತುಂಬಿಸುವ
ಕಣ್ಣರೆಪ್ಪೆಯ ಹಾಗೆ ಜೋಪಾನ ಮಾಡುವ

ತನ್ನ ಕಂದನ ಅಂಬೆಗಾಲಿನ ಪುಟ್ಟ ಪುಟ್ಟ ಹೆಜ್ಜೆಯ ನೋಡುತ್ತ
ಮೊದಲ ತೊದಲ ಮಾತನ್ನು ಕೇಳುತ್ತ
ಕಿಲಕಿಲ ಎಂದು ನಗುವ ಹೂವಿನ ಮೊಗವ ನೋಡುತ್ತ
ತನ್ನ ನೋವನ್ನು ಮರೆಯುವ

ಮಕ್ಕಳ ಕನಸಿಗೆ ಏಣಿ ಹಾಕುವನು
ಅವರ ಕಷ್ಟಗಳಿಗೆ ಹೆಗಲು ನೀಡುವನು, ನನ್ನ ಅಪ್ಪ
ಇಂತಾ ಅಪ್ಪನನ್ನು ಏಳೇಳು ಜನ್ಮಮದಲ್ಲೂ
ಬಯಸುವಳು..
ಅಪ್ಪನ ಪ್ರೀತಿಯ ಮಗಳು ನಾನು..

# ಅಂದು ಎಲ್ಲವನ್ನೂ ಕೊಟ್ಟವರಿಗೆ ಇಂದು ಯಾರೂ ಇಲ್ಲ

**– ಮಂದಾರ .ಆರ್, ದ್ವಿತೀಯ ಬಿ .ಕಾಂ**

ಎಷ್ಟೋ ಜನರು ತಮ್ಮ ಗೆಳೆಯ ಅಥವಾ ಗೆಳತಿ ಮಾತನಾಡುವುದನ್ನು ಬಿಟ್ಟರೆ, ತಮ್ಮ ಪ್ರೀತಿ ಮುರಿದರೆ, ತಮ್ಮನ್ನು ಪ್ರೀತಿಸುವವರು ಮಾತನಾಡದಿದ್ದರೆ ಅದೇನೋ ನೋವು. ಒಂದಷ್ಟು ಜನ ಅಳುವವರು ಇದ್ದಾರೆ. ಇನ್ನೊಂದಷ್ಟು ಜನ ವರ್ಷಾನುಗಟ್ಟಲೆ ಅದೇ ನೋವಿನಲ್ಲಿ ಇರುವವರು ಇದ್ದಾರೆ. ಹಾಗಾದರೆ ಇವರಿಗೆ ಜನ್ಮ ನೀಡಿದವರ ಗತಿ ಏನು?

ತಾಯಿ ತನ್ನ ಮಕ್ಕಳನ್ನು ಹೆತ್ತು ಹೊತ್ತು ಬೆಳೆಸಿ, ತಂದೆ ಕೇಳಿದ್ದನ್ನೆಲ್ಲಾ ಇಲ್ಲ ಎನ್ನದೆ ಕೊಡಿಸಿ ಸಾಲ-ಸೂಲ ಮಾಡಿ ಮಗಳ ಮದುವೆ ಮಾಡುತ್ತಾರೆ. ಕಷ್ಟಪಟ್ಟು ಮಗನ ಮುಂದಿನ ಭವಿಷ್ಯಕ್ಕಾಗಿ ತನ್ನ ಶಕ್ತಿಯನ್ನೆಲ್ಲಾ ಮೀಸಲಿಟ್ಟು ದುಡಿದು ಕೊನೆಗೆ ತಮ್ಮ ಜೀವಿತಾವಧಿಯಲ್ಲಿ ಮಾಡಿದ ಆಸ್ತಿಯನ್ನೆಲ್ಲಾ ಮಕ್ಕಳಿಗೆ ಕೊಡುತ್ತಾರೆ.

ಇದೂವರೆಗೂ ಪ್ರಿಯತಮ ಪ್ರೇಯಸಿಗಾಗಿ ಪ್ರಾಣ ಬಿಡುವವರು, ತಂದೆ-ತಾಯಿಯ ಪರವಾಗಿ ಪ್ರಾಣ ಬಿಡುವುದು ಹೋಗಲಿ, ಸತ್ತಾಗ ಮುಖನೋಡಲು ಬಂದರೆ ಸಾಕಾಗಿದೆ. ತಂದೆ-ತಾಯಿ ಇಷ್ಟೆಲ್ಲಾ ಕಷ್ಟಪಟ್ಟರೂ ಮಕ್ಕಳು ಮದುವೆ ಆದ ನಂತರ ತಮ್ಮ ಖಾಸಗೀ ಜೀವನಕ್ಕೇ ಅಡ್ಡಿ ಬರುತ್ತಾರೆ ಎಂಬ ಕಾರಣಕ್ಕೆ ಅಥವಾ ಹೆಂಡತಿಯ ಮಾತಿಗೆ ತಲೆದೂಗಿ ಹೆತ್ತವರನ್ನು ಮನೆಯಿಂದ ದೂರ ತಳ್ಳುತ್ತಾರೆ. ಚಿಕ್ಕ ವಯಸ್ಸಿನಿಂದ ಮದುವೆಯವರೆಗೂ ಜೀವನವನ್ನು ಕಟ್ಟಿ ಕೊಟ್ಟ ತಂದೆ-ತಾಯಿ ಇಂದು ಯಾವುದೋ ರಸ್ತೆಯಲ್ಲೋ, ಯಾವುದೋ ದೇವಾಸ್ಥಾನದಲ್ಲೋ ಭಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ .

ನಮ್ಮ ಪ್ರತೀ ಗೆಲುವಿಗೂ ನಿಜವಾಗಿ ಖುಷಿಪಡುವ ಜೀವ ಎಂದರೆ ಅದು 'ಅಪ್ಪ-ಅಮ್ಮ' ನಮ್ಮ ಪ್ರತೀ ಕಣ್ಣ ಹನಿ ತಮ್ಮದೆಂದು ತಿಳಿಯುವ ಮನಸ್ಸು ತಂದೆ-ತಾಯಿಯದು. ನಾವು ಅವರ ನೆನಪು ಮಾಡಿಕೊಳ್ಳದಿದ್ದರೂ ಸಹ ಅವರು ಸದಾ ನಮ್ಮನ್ನು ನೆನಪಿಸಿಕೊಳ್ಳುತ್ತಿರುತ್ತಾರೆ. ಮನೆಯಿಂದ ಹೊರಹಾಕಿದರೂ ಸಹ ಸದಾ ನಮ್ಮ ಶ್ರೇಯಸ್ಸನ್ನೆ ಬಯಸುತ್ತಾರೆ. ನಮ್ಮ ಸುಖ ಜೀವನವನ್ನು ನೋಡಿ ಖುಷಿಪಡುವ ಸಲುವಾಗಿ ನಮ್ಮ ಜೊತೆಯಲ್ಲಿ ಇರಲು ಬಯಸುತ್ತಾರೆಯೇ ಹೊರತು, ನಮಗೆ ಕಷ್ಟ ಕೊಡಬೇಕಂತಲ್ಲ. ತಂದೆ -ತಾಯಿ ಇಷ್ಟೆಲ್ಲಾ ಮಾಡಿದರೂ ಮದುವೆ ಆದ ನಂತರ ವಯಸ್ಸಾದ ಅವರನ್ನು ನೋಡಿಕೊಳ್ಳುವುದು ಕಷ್ಟ ಎಂದು ಅವರನ್ನು ಮನೆಯಿಂದ ಹೊರ ಹಾಕಬೇಡಿ. ಹೀಗೆ ಹೊರಹಾಕುತ್ತಿರುವ ಕಾರಣವೇ, ಎಲ್ಲೋ ಒಂದಿದ್ದ ವೃದ್ಧಾಶ್ರಮಗಳು ಇಂದು ಪ್ರತಿ ಊರಿಗೆ ಒಂದಾಗುತ್ತಿವೆ.

ಪ್ರತೀ ತಂದೆ–ತಾಯಿಗಳು ಕೊನೆಗಾಲದಲ್ಲಿ ಬಯಸುವುದು ನಮ್ಮ ಸಂತೋಷಮಯ ಜೀವನ ಹಾಗೂ ಇರುವಷ್ಟು ದಿನ ನಮ್ಮೊಂದಿಗೆ ಸಮಯ ಕಳೆಯಲು ಬಯಸುತ್ತಾರೆ. ಹುಡುಗ–ಹುಡುಗಿಯು ಬಿಟ್ಟು ಹೋದಾಗ ಆಗುವ ನೋವಿಗಿಂತ ಮಕ್ಕಳು ಬಿಟ್ಟು ಹೋದಾಗ ಆಗುವ ನೋವು ಅದಕ್ಕಿಂತ ಕೋಟಿ ಪಟ್ಟು ಹೆಚ್ಚಾಗಿರುತ್ತದೆ. ಇಲ್ಲಿ ಎಲ್ಲರೂ ಪ್ರೀತಿಯ ನೋವನ್ನು ಅನುಭವಿಸುವವರೆ, ಸುಳ್ಳು ಪ್ರೀತಿಗಾಗಿ ಅತ್ತು ಅಲ್ಲಿ ತಂದೆ–ತಾಯಿಯ ನಿಜವಾದ ಪ್ರೀತಿಗೆ ಸಾವು ತರಬೇಡಿ.

ಅವರಿಗೆ ವಯಸ್ಸಾಗಿದೆ ಹೌದು, ಒಮ್ಮೊಮ್ಮೆ ಮಲ–ಮೂತ್ರ ಕುಳಿತಲ್ಲಿಯೇ ಆಗಬಹುದು. ಅಂತಹ ಪರಿಸ್ಥಿತಿಯಲ್ಲಿ ನಮ್ಮ ಬಾಲ್ಯವನ್ನು ನೆನಪಿಸಿಕೊಳ್ಳೋಣ. ಶಕ್ತಿ ಇಲ್ಲದ ದೇಹಗಳಿಗೆ ಶಕ್ತಿಯಾಗಿ ನಿಲ್ಲೋಣ ಇರುವಷ್ಟು ದಿನ ನೆಮ್ಮದಿ ಮತ್ತು ಖುಷಿಯಿಂದ ನೋಡಿಕೊಳ್ಳೋಣ ಕೊನೆಗಾಲದಲ್ಲಿ ಅವರು ಬಯಸುವುದು ಒಳ್ಳೆಯ ಸಾವು ಅದನ್ನಾದರೂ ಈಡೇರಿಸೋಣ. ನಿಮ್ಮ ಹೆಂಡತಿ ಅಥವಾ ಇನ್ಯಾರೊ ಅಸಡ್ಡೆಯ ಮಾತುಗಳನ್ನಾಡಿಸಿದಾಗ ಅವರಿಗೆ ತಂದೆ–ತಾಯಿಯ ಬೆಲೆ ತಿಳಿ ಹೇಳಿ, ನೆನ್ನೆ ಮೊನ್ನೆ ಬಂದವರಿಗಾಗಿ ಹುಟ್ಟಿಸಿದವರನ್ನೇ ಮನೆಯಿಂದ ಹೊರಹಾಕಬೇಡಿ. ತಂದೆ–ತಾಯಿಯ ಆಶೀರ್ವಾದ ಸ್ವತಃ ದೇವರೇ ಮಾಡುವ ಆಶೀರ್ವಾದದಂತೆ. ಇದರಿಂದ ನಮ್ಮ ಮುಂದಿನ ಜೀವನ ಸೊಗಸಾಗಿರುತ್ತದೆ. ಇದನ್ನು ನೋಡಿ ನಿಮ್ಮ ಮಕ್ಕಳು ನಿಮಗೆ ವಯಸ್ಸಾದ ಕಾಲದಲ್ಲಿ ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುವರು.

ಪ್ರೇಯಸಿ ಅಥವಾ ಪ್ರಿಯತಮನಿಗೆ ನೀಡುವ ಪ್ರೀತಿಯನ್ನು ಮೊದಲು ತಂದೆ–ತಾಯಿಗೆ ನೀಡಿ. ಅವರು ಇರುವುದಕ್ಕೇ ನಾವು ಇಂದು ಭೂಮಿಯ ಮೇಲೆ ಇದ್ದೇವೆ. ಎಂದಿಗೂ ತಂದೆ–ತಾಯಿಯನ್ನು ಮನೆಯಿಂದ ಹೊರಹಟ್ಟಬೇಡಿ. ನಾವು ಏನೇ ಸಾಧನೆ ಮಾಡಿದರೂ ತಂದೆ–ತಾಯಿಯನ್ನು ಹೊರಹಾಕಿದ ಪಾಪ ಸುಮ್ಮನೆ ಬಿಡುವುದಿಲ್ಲ. ಚಿಕ್ಕವರಿದ್ದಾಗ ತಂದೆ–ತಾಯಿ ದೇವರು ಎಂದು ಹೇಳಿದ್ದೇವೆ. ದೊಡ್ಡವರಾದ ಮೇಲೂ ಅದನ್ನು ಪಾಲಿಸೋಣ ತಂದೆ–ತಾಯಿ ಇಲ್ಲವಾದರೂ ಅಕ್ಕ–ಪಕ್ಕ ಇರುವ ವೃದ್ಧರಿಗೆ ಕೈಲಾದ ಸಹಾಯ ಮಾಡೋಣ, ಪ್ರತಿ ತಂದೆ–ತಾಯಿ ಆಶೀರ್ವಾದ ದೇವರ ಆಶೀರ್ವಾದವೇ ಆಗಿರುತ್ತದೆ.

* * * * *

ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಪ್ರಗತಿಗೆ ಇಂಬು ಕೊಡದ ಶಿಕ್ಷಣ ಅಪೂರ್ಣ. **– ಡಾ.ಎಸ್. ರಾಧಾಕೃಷ್ಣನ್**

ವಿದ್ಯಾಭ್ಯಾಸ ಯಾವ ದಿಕ್ಕಿನಲ್ಲಿ ಮನುಷ್ಯನನ್ನು ನಡೆಸುವುದೋ ಅದೇ ಅವನ ಭವಿಷ್ಯವನ್ನು ನಿರ್ಧರಿಸುವುದು. – **ಪ್ಲೇಟೋ.**

# ಮರೆಯಲಾಗದ ಸ್ನೇಹ

– ಯಶೋಧ ಕೆ. ಆರ್, ದ್ವಿತೀಯ ಬಿ.ಕಾಂ

ಜೀವನದ ಹಾದಿಯಲ್ಲಿ ನಾವು ಭೇಟಿಯಾಗುವ ಜನರೆಷ್ಟೋ ಮಂದಿ, ಅದರಲ್ಲಿ ಕೆಲವರ ಭೇಟಿ ತಾತ್ಕಾಲಿಕ. ಇನ್ನೂ ಕೆಲವರ ಭೇಟಿ ಅಪರಿಚಿತ. ಈ ಪರಿಚಯಕ್ಕೆ ಸ್ನೇಹ ಎಂಬ ಭಾವ ಬೆಳೆದು ಅವರೊಂದಿಗೆ ನಮ್ಮ ಪಯಣ ಸಾಗುತ್ತದೆ.

ಸ್ನೇಹ ವಿಶ್ವದ ಅದ್ಭುತವಾದ ಮತ್ತು ಸುಂದರವಾದ ವಿಷಯವಾಗಿದೆ. ಗೆಳೆತನವೆಂದರೆ ಅದು ಒಂದು ಅದ್ಭುತವಾದ ಶಕ್ತಿಯಾಗಿದೆ. ಗೆಳೆತನ ಅನ್ನುವುದು ಬರಿ ಮೂರಕ್ಷರದ ಪದವಲ್ಲ. ಅದರಲ್ಲಿ ನೂರಾರು ಭಾವನೆಗಳು ಅಡಗಿವೆ.

ಗೆಳೆತನವು ರಕ್ತ ಸಂಬಂಧಕ್ಕೂ ಮೀರಿದ ನಂಟು. ನಾವು ನಮ್ಮ ಸ್ನೇಹಿತರ ಜೊತೆಯಲ್ಲಿ ಕಳೆಯುವ ಸಮಯವು ತುಂಬಾ ಅದ್ಭುತ ಮತ್ತು ಮರೆಯಲಾಗದ ನೆನಪುಗಳು. ಆ ನೆನಪುಗಳು ಸದಾ ಹಚ್ಚ ಹಸಿರು. ಆ ನೆನಪುಗಳು ಎಂದಿಗೂ ಮಾಸಿ ಹೋಗುವುದಿಲ್ಲ .

ನಮ್ಮಲ್ಲಿರುವ ಕೆಲವು ದೊಡ್ಡ ಅಸ್ತ್ರಗಳಲ್ಲಿ ಸ್ನೇಹವು ತುಂಬಾ ದೊಡ್ಡ ಅಸ್ತ್ರ. ಇದು ಬುದ್ಧಿ ಶಕ್ತಿ ಬಲ, ಯುಕ್ತಿಗಳಿಗಿಂತಲೂ ದೊಡ್ಡ ಅಸ್ತ್ರವಾಗಿದೆ. ಸ್ನೇಹವು ನಮ್ಮ ಕಷ್ಟದ ಸಮಯದಲ್ಲಿ ನಮಗೆ ಶಕ್ತಿಯಾಗಿ, ನಮಗೆ ತೊಂದರೆ ಉಂಟಾದಾಗ ನಮಗೆ ಬಲವಾಗಿ, ನಾವು ದಾರಿ ತಪ್ಪಿದಾಗ ನಮಗೆ ಬುದ್ಧಿಯಾಗಿ, ಮತ್ತು ಯುಕ್ತಿಯಾಗಿ ನಮ್ಮ ಜೊತೆ ಒಂದು ದೊಡ್ಡ ಅಸ್ತ್ರವಾಗಿ ನಿಲ್ಲುತ್ತದೆ.

ಒಬ್ಬ ಉತ್ತಮ ಸ್ನೇಹಿತ ನಮ್ಮ ಜೀವನದ ಖುಷಿ, ದುಃಖ ಮತ್ತು ನಾವು ಗೆದ್ದಾಗ ನಮ್ಮ ಜೊತೆ ಸಂಭ್ರಮಿಸಿ ನಾವು ಸೋತಾಗ ಕಣ್ಣೀರೊರೆಸುವ ಮತ್ತು ಧೈರ್ಯ ತುಂಬುವ, ನಮ್ಮ ಎಲ್ಲ ಭಾವನೆಯನ್ನು ಅರ್ಥ ಮಾಡಿಕೊಳ್ಳುವ ನಿಸ್ವಾರ್ಥ ಜೀವ ಅದು. ಉತ್ತಮ ಗೆಳತನ ಸಿರಿತನಕ್ಕಿಂತ ಮಿಗಿಲು.

ಗೆಳೆತನ ಹೇಗೆ ಎಂದರೆ ಅದು ಹಾಲು ಮತ್ತು ನೀರಿನ ಸಂಬಂಧ ಹಾಗೇ. ಹೇಗೆ ಎಂದರೆ ನಾವು ಹಾಲಿನಲ್ಲಿ ನೀರನ್ನು ಬೆರೆಸಿದಾಗ ಹಾಲಿನ ಅಸ್ತಿತ್ವವು ಜಾಸ್ತಿಯಾಗುತ್ತದೆ ಮತ್ತು ನೀರಿಗೆ ಹಾಲಿನಷ್ಟೇ ಮಹತ್ವ ಸಿಗುತ್ತದೆ. ಇದು ಮುಗಿಯುವುದಿಲ್ಲ .....

ನಾವು ಹಾಲನ್ನು ಬಿಸಿ ಮಾಡಲು ಇಟ್ಟಾಗ ಅಲ್ಲಿ ಮೊದಲು ನೀರು ಆ ಶಾಖವನ್ನು ತೆಗೆದುಕೊಂಡು ಹಬೆಯರೂಪದಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ಹಾಲು ತನ್ನ ಸ್ನೇಹಿತನನ್ನು ಕಳೆದುಕೊಂಡು ಬರೀ ಹಾಲು ಆದಾಗ, ಆ ಹಾಲು ಕುದಿಯಲು ಶುರುಮಾಡುತ್ತದೆ. ಮತ್ತೆ ಅದು ಶಾಂತವಾಗುವುದು ಆ ಕುದಿಯುವ ಹಾಲಿಗೆ ನೀರನ್ನು ಹಾಕಿದಾಗಲೇ ಅದು ಶಾಂತವಾಗುತ್ತದೆ. ಇದರ ಅರ್ಥ ಏನೆಂದರೆ ಸ್ನೇಹ ಎಂದರೆ ಒಬ್ಬರ ಅಸ್ತಿತ್ವವನ್ನು ಇನ್ನೊಬ್ಬರು ಕಾಪಾಡುವುದು ಆಗಿದೆ .

ಸ್ನೇಹವು ಮಧುರ, ಆದರೆ ಕೆಲವರ ದಾರಿ ಸ್ವಲ್ಪ ಸಮಯ ಬೇರೆಯಾಗುತ್ತದೆ. ಆದರೆ ಅವರ ನೆನಪು ಶಾಶ್ವತ. ಈ ಸ್ನೇಹ ಪ್ರಪಂಚದಲ್ಲಿ ಸ್ನೇಹಿತರು ನಮ್ಮೊಡನೆ ಇರಲಿ ಅಥವಾ ಇಲ್ಲದಿರಲಿ ನೆನಪು ಮಾತ್ರ ಸದಾ ಹಚ್ಚ ಹಸಿರು. ಅವರಿಂದಲೇ ಜೀವನ ಇನ್ನಷ್ಟು ಸುಂದರ.

ಸ್ನೇಹವು ಒಂದು ಪವಿತ್ರವಾದ ಬಂಧನವಾಗಿದೆ. ಉತ್ತಮ ಸ್ನೇಹವು ಅಸಂಖ್ಯಾತ ಪ್ರಯೋಜನಗಳನ್ನು ಹೊಂದಿದೆ. ಸಂತೋಷ, ನೋವು, ಭಾವನೆ, ದುಃಖ ಎಲ್ಲವನ್ನೂ ಹೊಂದಿರುತ್ತದೆ. ಆದರೆ ಹೆಚ್ಚಾಗಿ ಸಂತೋಷವನ್ನೇ ನೀಡುತ್ತದ. ನಮ್ಮ ವ್ಯಕ್ತಿತ್ವವನ್ನು ರೂಪಿಸಲು ಸಹಾಯ ಮಾಡುವ ಮೂಲಕ ಸ್ನೇಹಿತ ನಮ್ಮ ಜೀವನದ ಪ್ರಮುಖ ಭಾಗವಾಗುತ್ತಾನೆ.

* * * * *

# ಕಳ್ಳನ ಕಥೆ

**– ಪ್ರಿಯಾಂಕ ಕೆ.ಆರ್., ಪ್ರಥಮ ಬಿ.ಕಾಂ**

ಇದೊಂದು ವಿಚಿತ್ರವಾದ ಕಥೆ. ಒಮ್ಮೆ ಕಳ್ಳನೊಬ್ಬ ನಡುರಾತ್ರಿ ಮನೆಯೊಂದರ ಕಿಟಕಿಯಿಂದ ಕೆಳಗೆ ಬಿದ್ದು ಕಾಲು ಮುರಿದುಕೊಂಡ. ನ್ಯಾಯಾಲಯಕ್ಕೆ ಹೋದ ಕಳ್ಳ 'ಮನೆಯ ಮಾಲೀಕ ತನಗೆ ಪರಿಹಾರ ಕೊಡಬೇಕು' ಎಂದು ಕೇಳಿಕೊಂಡ. 'ಅಯ್ಯೋ! ಅದ್ರಲ್ಲಿ ನನ್ನದ್ದೇನು ತಪ್ಪು, ಆ ಕಿಟಕಿ ಮಾಡಿದ ಬಡಗಿ ಅವನಿಗೆ ಪರಿಹಾರ ಕೊಡಬೇಕು' ಎಂದು ಮಾಲೀಕ ಹೇಳಿದ. ಇದನ್ನು ಕೇಳಿದ ಬಡಗಿ, 'ಅದು ನನ್ನ ತಪ್ಪಲ್ಲ, ಮನೆ ಕಟ್ಟುವವನ ತಪ್ಪು. ಯಾಕಂದ್ರೆ ಚೌಕಟ್ಟಿಗೆ ಸರಿ ಹೊಂದುವಂತೆ ಆತ ಗೋಡೆ ಕಟ್ಟಿರಲಿಲ್ಲ' ಎಂದ. ಮನೆ ಕಟ್ಟುವವ, 'ನಾನು ತಪ್ಪು ಮಾಡಿದೆ ನಿಜ, ಆದ್ರೆ ಆಗ ರಸ್ತೆಯಲ್ಲಿ ಒಬ್ಬ ಸುಂದರ ಹೆಂಗಸು ಹೋಗ್ತಿದ್ದಳು. ಅವಳನ್ನು ನೋಡ್ತಾ ಹೀಗಾಯ್ತು' ಎಂದ. ಆ ಹೆಂಗಸನ್ನು ವಿಚಾರಣೆಗೆ ಕರೆಯಲಾಯಿತು. 'ಇದ್ರಲ್ಲಿ ತನ್ನ ತಪ್ಪಿಲ್ಲ, ಆ ದಿನ ನಾನು ಧರಿಸಿದ್ದ ಉಡುಪು ತುಂಬಾ ಚಂದ ಇದ್ದದ್ದರಿಂದ ಸುಂದರಿಯಾಗಿ ಕಂಡೆ. ಇಲ್ಲದಿದ್ದರೆ ಯಾರೂ ನನ್ನನ್ನು ನೋಡುತ್ತಿರಲಿಲ್ಲ. ಆ ಉಡುಪಿಗೆ ವಿವಿಧ ಬಣ್ಣದ ಚುಕ್ಕೆ ಚುಕ್ಕೆ ಎದ್ದು ಕಾಣುವಂತೆ ಬಣ್ಣ ಹಾಕಿದ್ರಿಂದ ಅದು ಅಷ್ಟು ಚಂದ ಇತ್ತು' ಎಂದಳು. ಕೊನೆಗೆ 'ಉಡುಪಿಗೆ ಬಣ್ಣ ಹಾಕಿದವನೇ ನಿಜವಾದ ಅಪರಾಧಿ. ಹೀಗಾಗಿ ಕಳ್ಳನ ಕಾಲು ಮುರಿದಿದ್ದಕ್ಕೆ ಅವನೇ ಪರಿಹಾರ ಕೊಡಬೇಕು' ಎಂದು ನ್ಯಾಯಾಲಯ ತೀರ್ಮಾನಿಸಿತು.

ಆಮೇಲೆ ಜನಕ್ಕೆ ಗೊತ್ತಾದ ಸ್ವಾರಸ್ಯಕರ ಸಂಗತಿ ಎಂದರೆ ಅವಳ ಉಡುಪಿಗೆ ಬಣ್ಣ ಹಾಕಿದಾತ ಅವಳ ಗಂಡನೇ ಆಗಿದ್ದ ಮತ್ತು ಅವನೇ ಕಳ್ಳನೂ ಆಗಿದ್ದ ಎನ್ನುವುದು!

* * * * *

# ನಮ್ಮ ರೈತರು

**– ಸಂಜಯ್ ಎಸ್., ದ್ವಿತೀಯ ಬಿ.ಕಾಂ**

ನಮಸ್ತೆ ಗೆಳೆಯರೆ, ನಮಗೆ ತಿಳಿದಿರುವ ಹಾಗೆ ರೈತರೇ ನಮ್ಮ ದೇಶದ ಬೆನ್ನೆಲುಬು. ನಮ್ಮ ದೇಶದ ಆಧಾರವಾಗಿರುವವರು ಇಬ್ಬರು. ಒಬ್ಬ ದೇಶದ ಗಡಿಯಲ್ಲಿ ನಿಂತು ತನ್ನ ಪ್ರಾಣವನ್ನೇ ಲೆಕ್ಕಿಸದೆ ನಮ್ಮನ್ನು ಕಾಪಾಡುವ ಸೈನಿಕ ಮತ್ತು ಇನ್ನೊಬ್ಬ ಹಸಿವಾದಾಗ ಅನ್ನವನ್ನು ನೀಡುವ ರೈತ. ಈಗ ನಾನು ಇವರಲ್ಲಿ ಒಬ್ಬರ ಬಗ್ಗೆ ಹೇಳುತ್ತೇನೆ. ಅವರೇ ನಮ್ಮ ರೈತರು. ಇಂದಿನ ಸಮಾಜದಲ್ಲಿ ನಮ್ಮ ರೈತರು ತುಂಬಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತ ಇವೆಲ್ಲ ಸಮಸ್ಯೆಗಳಿಂದ ರೈತರು ಬೆಳೆಯುವ ಬೆಳೆಗಳು ನಾಶವಾಗುತ್ತಿವೆ. ಇದರಿಂದ ಬೆಳೆಗಳ ಮೇಲೆ ನಂಬಿಕೆ ಇಟ್ಟು ಜೀವನ ನಡೆಸುವ ರೈತರಿಗೆ ಕಷ್ಟವಾಗಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ. ನೋಡಿ ಗೆಳೆಯರೆ, ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡರೆ ನಾವು ನಮ್ಮ ಸಮಾಜದ ಒಬ್ಬ ಅನ್ನದಾತನನ್ನು ಕಳೆದುಕೊಂಡಂತೆ ಆಗುತ್ತದೆ. ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬ ಅನಾಥವಾಗುತ್ತದೆ. ಇದಕ್ಕೆಲ್ಲಾ ಕಾರಣ ಯಾರು? ಯಾರೆಂದು ಹುಡುಕಿದರೆ ಅವರು ಬೇರೆ ಯಾರು ಅಲ್ಲ ನಾವೇ! ಅದು ಹೇಗೆ ಗೊತ್ತಾ? ಹೇಗೆಂದರೆ ನಾವು ರೈತರಿಗೆ ಗೌರವವನ್ನು ಕೊಡುತ್ತಿಲ್ಲ. ರೈತನೆಂದರೆ ಯಾವುದೇ ಕೆಲಸ ಸಿಗದೆ ರೈತ ವೃತ್ತಿಯನ್ನು ಆರಿಸಿಕೊಂಡಿದ್ದಾನೆ ಎಂದು ರೈತನನ್ನು ಕೀಳಾಗಿ ಕಾಣುವವರನ್ನು ನಾವು ಈ ಸಮಾಜದಲ್ಲಿ ಕಾಣಬಹುದಾಗಿದೆ. ಒಂದು ಉದಾಹರಣೆ:

ಒಬ್ಬ ಶ್ರೀಮಂತ ವ್ಯಕ್ತಿ ದೊಡ್ಡ ಮಾಲ್‌ಗಳಿಗೆ ಹೋದರೆ ವ್ಯಾಪಾರಿ ಹೇಳಿದ ಅಥವಾ ಖರೀದಿಸುವ ವಸ್ತುವಿನ ಮೇಲಿದ್ದ ಬೆಲೆಯನ್ನು ಕೊಡುತ್ತಾನೆ. ಅದೇ ಒಬ್ಬ ರೈತ ತರಕಾರಿ ಮಾರುತ್ತ ಕುಳಿತಾಗ ಆ ರೈತನು ಹೇಳಿದ ಬೆಲೆಯನ್ನು ಆ ಶ್ರೀಮಂತ ವ್ಯಕ್ತಿಯು ಕೊಡಲು ಹಿಂದೆ ಮುಂದೆ ನೋಡುತ್ತಾನೆ. ಇದರಿಂದ ನಮಗೆ ಆ ವ್ಯಕ್ತಿಗೆ ರೈತನ ಮೇಲಿನ ಅಭಿಪ್ರಾಯವೇನೆಂದು ತಿಳಿಯುತ್ತದೆ. ನಾನೊಮ್ಮೆ ಒಂದು ಶರ್ಟ್ ಖರೀದಿ ಮಾಡಲು ನಾಗಮಂಗಲದಲ್ಲಿ ಇರುವ ಒಂದು ಬಟ್ಟೆ ಅಂಗಡಿಗೆ ಹೋಗಿದ್ದೆ. ಅಲ್ಲಿ ನನಗೆ ಒಂದು ಶರ್ಟ್ ತುಂಬಾ ಇಷ್ಟವಾಯಿತು. ಅದರ ಬೆಲೆ 495 ರೂಪಾಯಿ ನಾನು ಚೇಂಜ್ ಇಲ್ಲಂತ ಮಾಲೀಕನಿಗೆ 500 ರೂ ಕೊಟ್ಟೆ. ಅವರು ಕೂಡಾ ಚೇಂಜ್ ಇಲ್ಲಂತ 5 ರೂ ಚಾಕಲೇಟ್ ಕೊಟ್ಟರು. ನಂತರ ನಾನು ಹಣ್ಣಿನ ಅಂಗಡಿಗೆ ಹೋಗಿ 1 ಕೆ.ಜಿ ಮಾವಿನಹಣ್ಣನ್ನು ತೆಗೆದುಕೊಂಡಾಗ ಅದರ ಬೆಲೆ ರೂ 95 ಆಗಲೂ ಕೂಡಾ ನನ್ನ ಹತ್ತಿರ ಚೇಂಜ್ ಇಲ್ಲಾ ಅಂತ ವ್ಯಾಪರಿ ರೈತನಿಗೆ 100 ರೂ ಕೊಟ್ಟಾಗ, ಅವರು ಹೋಗಲಿ ಬಿಡಪ್ಪ ಅಂತ ಹೇಳಿ ನನಗೆ 10 ರೂ ಹಿಂದಿರುಗಿಸಿದರು. ಇಲ್ಲಿ ನಾವು ಬಟ್ಟೆ ಅಂಗಡಿ ಮಾಲೀಕನಿಗೂ ಮತ್ತು ಹಣ್ಣಿನ ಅಂಗಡಿಯ ರೈತನಲ್ಲಿ ಇರುವ ವ್ಯತ್ಯಾಸವನ್ನು ಕಾಣಬಹುದು. ಬಟ್ಟೆ ಅಂಗಡಿಯ ಮಾಲೀಕನದ್ದು, ತನ್ನ ಲಾಭ ಮತ್ತು ತನ್ನ ಬಗ್ಗೆ ಮಾತ್ರ ಯೋಚನೆ ಮಾಡುವ ಸ್ವಾರ್ಥ ಗುಣ. ಆದರೆ ನಮ್ಮ ರೈತರು ಹಾಗಲ್ಲ ಅವರು ಯಾವತ್ತು ಸ್ವಾರ್ಥಕ್ಕಾಗಿ ದುಡಿದವರಲ್ಲ.

ಅವರು ಸದಾಕಾಲ ಸಂತೋಷ ಮತ್ತು ಖುಷಿಯಿಂದ ದುಡಿಯುತ್ತಾ ಜೀವನ ನಡೆಸುವವರು ಈ ಗುಣವನ್ನು ಹೊಂದಿರುವ ರೈತನನ್ನು ನಾನು ಹಣ್ಣಿನ ಅಂಗಡಿಯಲ್ಲಿ ಕಂಡೆನು.

ಆದ ಕಾರಣ ನಾವೆಲ್ಲರೂ ನಮ್ಮ ಸಮಾಜದ ರೈತರಿಗೆ ಗೌರವವನ್ನು ಕೊಡಬೇಕು. ರೈತರು ನಮಗೆ ಅನ್ನವನ್ನು ನೀಡುವ ಅನ್ನದಾತರು. ನಮ್ಮ ರೈತರಿಗೆ ಸಮಾಜದ ಎಲ್ಲಾ ಜನರಿಗೆ ಅನ್ನವನ್ನು ನೀಡುವ ಅವಕಾಶ ಸಿಕ್ಕಿದೆ. ಇಂತಹ ಅವಕಾಶ ಎಲ್ಲರಿಗೂ ಸಿಗಲೂ ಸಾಧ್ಯವಿಲ್ಲ. ರೈತರನ್ನು ದೇವರಿಗೆ ಹೋಲಿಸಿದರೆ ತಪ್ಪಿಲ್ಲ. ನಮ್ಮ ರೈತರಿಗೆ ಆದಷ್ಟು ಸಹಾಯವನ್ನು ನಾವು ಮಾಡಬೇಕು. ರೈತರ ಬೆಳೆಗಳಿಗೆ ಉಪಯೋಗಿಸುವ ಗೊಬ್ಬರದ ಬೆಲೆಯನ್ನು ಕಡಿಮೆ ಮಾಡುವುದರ ಮೂಲಕ, ರೈತರಿಗೆ ಬ್ಯಾಂಕ್‌ನಲ್ಲಿ ಕಡಿಮೆ ಬಡ್ಡಿಯಲ್ಲಿ ಸಾಲವನ್ನು ನೀಡುವುದರ ಮೂಲಕ, ಕಾಡು ನಾಡನ್ನು ಉಳಿಸುವ ಮೂಲಕ ಅನೇಕ ರೀತಿಯಲ್ಲಿ ನಾವು ರೈತರಿಗೆ ಸಹಾಯ ಮಾಡಬೇಕು. ಹೀಗೆ ಸಹಾಯ ಮಾಡುವುದರಿಂದ ನಮ್ಮ ಸಮಾಜದ ರೈತರನ್ನು ಮುಂದೆ ಬರಲು ಪ್ರೋತ್ಸಾಹಿಸಬೇಕೆಂಬುದು ನನ್ನ ಅಭಿಪ್ರಾಯ.

* * * * *

## ವನ ಮಹೋತ್ಸವ

**– ಚಂದನ ಕೆ, ತೃತೀಯ ಬಿ.ಎ**

ಓ ಬನ್ನಿ, ಸ್ನೇಹಿತರೆ ಬೇಗ ಬನ್ನಿ
ವನ ಮಹೋತ್ಸವವ ಆಚರಿಸುವ ಬನ್ನಿ

ಪರಿಸರ ಸಂರಕ್ಷಣೆ, ನಮ್ಮೆಲ್ಲರ ಹೊಣೆ
ಎಂಬ ಧ್ಯೇಯವ ಅರಿಯ ಬನ್ನಿ
ಅರಣ್ಯವಿಲ್ಲದಿದ್ದರೆ ಇರಲಾರ ವರುಣ
ಆತನಿಲ್ಲದಿದ್ದರೆ ಖಚಿತ ನಮ್ಮಯ ಮರಣ

ಹಸಿರಿನಿಂದಲೇ ಇಂದು ನಮ್ಮಯ ಉಸಿರು
ಹಸಿರಿಲ್ಲದಿದ್ದರೆ ನಮ್ಮ ಬದುಕೇ ಬಂಜರು
ಇದನರಿತ ನಾವೇ ಇದಕ್ಕೆ ಕಾರಣೀಭೂತರು
ನಾವೆ ಇದನನುಭವಿಸುವ ಧೂತರು

ಇನ್ನಾದರೂ ಬೆಳೆಸುವ ಬನ್ನಿ ಮರವ
ಕಟ್ಟುವ ನಮ್ಮ ಊರಿಗೊಂದು ವನವ
ಮರವನ್ನು ಬೆಳೆಸುತ್ತಾ, ಬರವನ್ನು ಅಳಿಸುತ್ತಾ
ಪ್ರಕೃತಿ ಮಾತೆಗೆ ಕ್ಷಮೆಯಾಚಿಸುವ..

ಓ ಬನ್ನಿ, ಸ್ನೇಹಿತರೆ ಬೇಗ ಬನ್ನಿ
ವನ ಮಹೋತ್ಸವವ ಆಚರಿಸುವ ಬನ್ನಿ

# ಕರೋನ ಯುಗ

**– ಪವಿತ್ರ ಬಿ.ಪಿ., ತೃತೀಯ ಬಿ.ಎಸ್ಸಿ**

ಈ ಲೇಖನದ ಶೀರ್ಷಿಕೆಯನ್ನು ನೋಡಿ ಇದಾವುದಿದು ಕರೋನ ಯುಗ ಎಂದುಕೊಂಡಿರ! ಇದೇ ಪ್ರಸ್ತುತವಾಗಿ ಚಾಲ್ತಿಯಲ್ಲಿರುವ ಯುಗ. ಈಗ ಒಂದು ವರ್ಷದ ಹಿಂದೆಯಷ್ಟೆ, ಆರಂಭವಾದ ಯುಗ ಎಂದು ಭಾವಿಸಿದರು ತಪ್ಪಾಗಲಾರದು. ಕೆಲವರನ್ನು ನೋಯಿಸಿ, ಹಲವರನ್ನು ಸಾಯಿಸಿ, ಇನ್ನೂ ಕೆಲವರಿಗೆ ಜೀವನ ಪಾಠವನ್ನು ಕಲಿಸುತ್ತಿರುವ ಯುಗ. ತಮ್ಮ ಎಡಬಲಗಳ ಕಡೆಗೂ ತಿರುಗದೆ ಶರವೇಗದಲ್ಲಿ ಓಡುತ್ತಿದ್ದವರನ್ನು ಬಡಿದು ಮನೆಗಳಲ್ಲಿ ಬಂಧಿಸಿದ ಯುಗವೇ ಈ ಕರೋನ ಯುಗ.

ನಾವು ಹಲವಾರು ಬಾರಿ ಕೇಳಿದ್ದೇವೆ, ಏನೆಂದರೆ ಇಂತಹ ವರ್ಷದಲ್ಲಿ ಇಂತಹ ದಿನದಂದು ಇಷ್ಟು ಹೊತ್ತಿಗೆ ಭೂಕಂಪನ/ ಪ್ರಳಯ ಸಂಭವಿಸುತ್ತದೆ ಎಂದು ಭವಿಷ್ಯ ನುಡಿದಿದ್ದನ್ನು. ಆದರೆ ಅಂತಹ ದಿನ ಬಂದಾಗ ಯಾವುದೇ ವಿಕೋಪವು ಸಂಭವಿಸದಿದ್ದದ್ದನ್ನೂ ನಾವು ಕಂಡಿದ್ದೇವೆ. ಆದರೆ ಈ ಕರೋನ ಯುಗವು ವಿಕೋಪಕ್ಕಿಂತ ಹೆಚ್ಚಿನ ಭಯಾನಕತೆಯನ್ನು ಸೃಷ್ಟಿಸಿತು.

ಚೀನಿಯರ ಹುಚ್ಚು ಪ್ರಯತ್ನಗಳ ಫಲವಾಗಿ ಜನಿಸಿದ ಈ ಕೋವಿಡ್-19 ವೈರಸ್, ಮಾನವನ ದೇಹವನ್ನು ಹೊಕ್ಕಿ ಅವನ ದೇಹದ ದುರ್ಬಲತೆಯನ್ನೇ ಶಸ್ತ್ರವನ್ನಾಗಿಸಿಕೊಂಡು, ಪ್ರಾಣವನ್ನು ಕಸಿದುಕೊಳ್ಳುವುದಲ್ಲದೆ, ಸಾಂಕ್ರಾಮಿಕ ರೋಗವಾಗಿ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತ ನಮ್ಮ ದೇಶಕ್ಕೂ ಬಂದಪ್ಪಳಿಸಿತು. ಆರಂಭದಲ್ಲಿ ಒಬ್ಬರೋ/ ಇಬ್ಬರಲ್ಲೋ ಕಾಣಿಸಿಕೊಂಡ ಈ ವೈರಸ್ ನಂತರದಲ್ಲಿ ಕದಂಬ ಬಾಹುವಿನಂತೆ ಹಲವರನ್ನು ಬಾಚಿ ತಬ್ಬಿತು, ಮಕ್ಕಳಿಂದ ಇಡಿದು ಮುದುಕರವರೆಗೂ ತಲೆನೋವಾಗಿ ಕಾಡಿತು ಈ ಕೋವಿಡ್-19 ವೈರಸ್. ಅತೀ ಕಡಿಮೆ ಸಮಯದಲ್ಲಿ ಸೋಂಕು ತೀವ್ರವಾಗಿ ಒಬ್ಬರಿಂದ ಒಬ್ಬರಿಗೆ ಅಂಟಿತು. ಆರೋಗ್ಯ ಸಮಸ್ಯೆ ಇದ್ದವರಂತೂ ಬದುಕುಳಿಯುವ ಮಾತು ದುರ್ಲಬವಾಗಿತ್ತು. ಈ ಸೋಂಕಿನ ತೀವ್ರತೆಯನ್ನು ಕಡಿಮೆ ಮಾಡುವ ಸರ್ಕಾರವು ಲಾಕ್ಡೌನ್ ಎಂಬ ಶಸ್ತ್ರವನ್ನು ಬಳಸಬೇಕಾಯಿತು. ನಾವು ನಮ್ಮ ಕಲ್ಪನೆಯಲ್ಲಿಯೂ ಸಹ ಎಂದೂ ಈ ಲಾಕ್‌ಡೌನ್ ಎಂಬ ಪದವನ್ನು ಊಹಿಸಿಕೊಂಡಿರಲೂ ಸಾಧ್ಯವಿಲ್ಲ. ಆದರೆ ಇದು ಚಾಲ್ತಿಗೆ ಬಂದು ಕರೊನಾಗೆ ಕಡಿವಾಣಹಾಕಿತು. ಹಾಗೆ ಈ ಲಾಕ್ಡೌನ್ ನಿಂದಾಗಿ ಜನರ ಜೀವನಶೈಲಿಯೇ ಬದಲಾಗಿ ಹೋಯಿತು. ಮನೆಯಿಂದ ಹೊರಗೆ ಹೋಗಿ ದುಡಿದರೆ ಮಾತ್ರ ಜೀವನವನ್ನು ನಡೆಸಬಹುದು ಎಂದು ಸಾಗುತ್ತಿದ್ದ ನಮಗೆ ಮನೆಯಲ್ಲಿದ್ದರೆ ಮಾತ್ರ ಜೀವವನ್ನು ಉಳಿಸಿಕೊಳ್ಳಬಹುದು ಎಂಬ ಪಾಠವನ್ನು ಕಲಿಸಿತು. ಹಣವಂತರಿಗೆ ಲಾಕ್‌ಡೌನ್‌ನಿಂದಾಗಿ ಅಂತಹ ಸಮಸ್ಯೆಯಾಗದಿದ್ದರೂ, ಅಂದೇ ಕೂಲಿ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದವರಿಗೆ ದಿಕ್ಕೇ ತೋಚದಾಯಿತು.

ನನ್ನ ಪ್ರಕಾರ ಈ ಕರೋನದಿಂದ ಬಾರಿ ನಷ್ಟವನ್ನುನುಭವಿಸಿದ ಕ್ಷೇತ್ರವೆಂದರೆ ಅದು ಶಿಕ್ಷಣಕ್ಷೇತ್ರ. ಏನಿಲ್ಲದಿದ್ದರೇನು ಶಿಕ್ಷಣವಿರಬೇಕು ಎಂಬ ಮಾತಿನಂತೆ ಎಲ್ಲರೂ ಓದಿಗೆ ಮಹತ್ವಕೊಟ್ಟು, ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಮಹಾದಾಸೆಯನ್ನು ಹೊತ್ತ ಪೋಷಕರು ತಮ್ಮ ದುಡಿಮೆಯ ಫಲವನ್ನೆಲ್ಲ ಮಕ್ಕಳ ಓದಿಗಾಗಿ ಮೀಸಲಿಡುತ್ತಿದ್ದರು. ಆದರೆ ಈ ವೈರಸ್‌ನಿಂದಾಗಿ ಸರ್ಕಾರವು ಶಾಲೆಯ ಬಾಗಿಲನ್ನು ಮುಚ್ಚಿಸಬೇಕಾಯಿತು. ಇದರಿಂದ ಮಕ್ಕಳ ಬಾಲ್ಯದ ಸವಿ ನೆನಪಾಗುಳಿಯುವ ಕ್ಷಣಗಳೆಲ್ಲವೂ ಕೇವಲ ಬಂಧನದಡಿಯಲ್ಲಿ ಕಮರಿಹೋದವು. ಇಂದೂ ಆ ದಿನಗಳನ್ನು ನೆನೆದರೆ ಮನಸ್ಸಿಗೆ ಬೇಸರವಾಗುತ್ತದೆ. ಈ ಬೇಸರಕ್ಕೆ ಮದ್ದಿನಂತೆ ಬಂದದ್ದು ಆನ್‌ಲೈನ್ ತರಗತಿಗಳು. ಮನೆಯಲ್ಲಿ ಇದ್ದು ಇದ್ದು ಜಡ್ಡಿಡಿದಿದ್ದ ನಮ್ಮ ದೇಹಕ್ಕೆ ಚೈತನ್ಯ ಮೂಡಿಸಿದ್ದು ಈ ಆನ್‌ಲೈನ್ ತರಗತಿಗಳು.

ಒಂದು ಕಣ್ಣಿಗೆ ಕಾಣದ ವೈರಸ್ ಬಂದು ನಮ್ಮ ಕಣ್ಣಿಗೆ ಕಟ್ಟಿದ ಕಪ್ಪುಪಟ್ಟಿಯನ್ನು ಸರಿಸಿ ನಾವು ಎಲ್ಲವನ್ನು ಜಯಿಸಬಲ್ಲೆವು ಎಂದು ಬೀಗುತ್ತಿದ್ದ ನಮಗೆ, ಹಾಗೆ ವೈಜ್ಞಾನಿಕ ಸಂಶೋಧನೆಯಲ್ಲಿ ನಾವೇ ನಿಸ್ಸೀಮರು ಎಂದೆನಿಸಿಕೊಂಡವರಿಗೆ, ಕೇವಲ ಈ ಕರೋನಕ್ಕೆ ಔಷಧಿಯನ್ನು ಕಂಡುಹಿಡಿಯುವಲ್ಲಿ ಯಾವುದೇ ಸಾಹಸಮಾಡಲಾಗಲಿಲ್ಲ. ನಮ್ಮ ಗ್ರಹದಲ್ಲಿ ಮಾತ್ರವಲ್ಲ ಬೇರೆಗ್ರಹದಲ್ಲೂ ಜೀವಿಸಬಹುದು ಎಂದೂ ಸಂಶೋಧಿಸಲು ಹೊರಟ ನಮಗೆ ಈ ಗ್ರಹದಲ್ಲೇ ನಮ್ಮ ಜೀವವನ್ನು ಉಳಿಸಿಕೊಳ್ಳಲು ಸೆಣಸಾಡಬೇಕಾಯಿತು. ಇದು ಎಂತಹ ಕಾಕತಾಳೀಯವಲ್ಲವೇ! ಆದ್ದರಿಂದ ಇರುವುದಷ್ಟರಲ್ಲಿ ಜೀವನ ನಡೆಸುತ್ತ ತೃಪ್ತಿಯ ಭಾವವನ್ನು ಬೆಳೆಸಿಕೊಂಡರೆ ಮಾತ್ರ ಜೀವವನ್ನು ಉಳಿಸಿಕೊಳ್ಳಬಹುದು ಎಂಬ ಪಾಠವನ್ನು ಕಲಿಸಿತು ಈ ಕರೋನಾ ಯುಗ.

* * * *

ನಾನು ನನ್ನನ್ನು ಯಾರೊಂದಿಗಾದರೂ ಹೋಲಿಸಿಕೊಳ್ಳುವ ಪ್ರಯತ್ನವನ್ನು ಎಂದಿಗೂ ಮಾಡಿಲ್ಲ. – **ಸಚಿನ್ ತೆಂಡೂಲ್ಕರ್**

ಮನುಷ್ಯರಲ್ಲಿ ಪರಿಪೂರ್ಣತೆಯನ್ನು ಹಿಗ್ಗಿಸುವುದೇ ಶಿಕ್ಷಣ. – **ಸ್ವಾಮಿ ವಿವೇಕಾನಂದ**

ಶಿಕ್ಷಣವೆಂದರೆ, ಮನಸ್ಸು, ದೇಹ, ಬುದ್ಧಿಗಳೊಂದಿಗೆ ದೊರೆಯುವ ಸಂಸ್ಕಾರ. – **ಹರ್ಡೇಕರ್ ಮಂಜಪ್ಪ**

ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಗಳಾಗಬೇಕು, ಬರಿಯ ಗೋಣಿ ಚೀಲಗಳಾಗಬಾರದು – **ಕುವೆಂಪು**

**ನುಡಿಮುತ್ತುಗಳ ಸಂಗ್ರಹ : ಜಿ.ರಾಜಣ್ಣ, ಸಹಾಯಕ ಪ್ರಾಧ್ಯಾಪಕ**

# ಆರೋಗ್ಯವಂತ ದೇಹಕ್ಕೆ ಸಮತೋಲನ ಆಹಾರ ಅವಶ್ಯಕ

**– ಸಂಧ್ಯಾ ಎಂ.ಜಿ, ದ್ವಿತೀಯ ಬಿ.ಕಾಂ**

'ಮಾನವರು ತಮಗಿರುವ ಸಾಮರ್ಥ್ಯಕ್ಕೆ ತಕ್ಕನಾಗಿ ಸೇವಿಸುವ ಆಹಾರದ ಪ್ರಮಾಣವನ್ನು ಸಮತೋಲನ ಆಹಾರ' ಎನ್ನವರು. ಹೀಗೆ ಒಂದು ಮಿತಿಯಲ್ಲಿ ಆಹಾರ ಸೇವಿಸುವುದರಿಂದ ಮಾನವನ ಆರೋಗ್ಯವು ಉತ್ತಮವಾಗಿರುತ್ತದೆ ಮತ್ತು ಕೇವಲ ಸಮತೋಲನ ಆಹಾರದಿಂದ ಆರೋಗ್ಯ ಸುಸ್ಥಿತಿಯಲ್ಲಿರುತ್ತದೆ ಎಂದು ಹೇಳುವುದು ಅಷ್ಟು ಸಮಂಜಸವಲ್ಲ. ಏಕೆಂದರೆ ಅಪೌಷ್ಠಿಕ ಆಹಾರವನ್ನು ಸಮತೋಲನದಲ್ಲಿ ಸೇವಿಸುವುದರಿಂದ ಯಾವ ಪ್ರಯೋಜನವಿಲ್ಲ. ಪೌಷ್ಠಿಕ ಆಹಾರವನ್ನು ಸಮತೋಲನದಿಂದ ಸೇವಿಸಿದರೆ ಮಾತ್ರ ಮನುಷ್ಯ ಆರೋಗ್ಯವಾಗಿರಬಹುದು ಎಂಬುದು ಸಮಂಜಸ ಹಾಗೂ ಯೋಚನಾತ್ಮಕ ಸಂಗತಿಯಾಗಿದೆ.

ಮಾನವರಿಗಿಂತ ಪ್ರಾಣಿಗಳೇ ಆಹಾರ ಸೇವನೆಯಲ್ಲಿ ಉತ್ತಮ ಎಂದು ಹೇಳಿದರೆ ತಪ್ಪಾಗಲಾರದು. ಉದಾ:– ಒಂದು ಸಿಂಹದ ಹತ್ತಿರ ಒಂದು ಜಿಂಕೆಯನ್ನು ಕರೆದುಕೊಂಡು ನಿಲ್ಲಿಸಿ, ಮೊದಲೇ ಸಿಂಹಕ್ಕೆ ಸಾಕಷ್ಟು ಆಹಾರ ನೀಡಿದ ಮೇಲೆ ತಿನ್ನು ಎಂದರೆ ಅದು ಜಿಂಕೆಯು ತನ್ನ ಆಹಾರವಾಗಿದ್ದರೂ ಅದು ಜಿಂಕೆಯನ್ನು ತನ್ನ ಆಪ್ತಮಿತ್ರನಂತೆ ಕಾಣುತ್ತದೆ. ಅದೇ ರೀತಿ ಒಂದು ಇರುವೆಗೂ ಹೊಟ್ಟೆ ತುಂಬಿದ್ದಾಗ ಅದರ ಮುಂದೆ ಸಕ್ಕರೆ ಚೆಲ್ಲಿದರೆ ಅದು ನಾಳೆಗೆ ಆಗಬಹುದು ಎಂದು, ನಾಳೆ ಯಾರು ಆಹಾರಕ್ಕೆ ಅಲೆಯುವವರು ಎಂಬ ಮುಂದಾಲೋಚನೆಯಿಂದ ರಕ್ಷಿಸಿಡಬಹುದು. ಆದರೆ ಈ ಮಾನವ ಇರುವುದನ್ನೆಲ್ಲಾ ಯಾರಿಗೂ ಕೊಡದಂತೆ ದುರಾಸೆಯಿಂದ ತಾನೊಬ್ಬನೇ ತಿಂದು ನಂತರ ಒದ್ದಾಡುತ್ತಾನೆ. ಇದೇ ಮಾನವನ ಆಹಾರ ಅಸಮತೋಲನ ಸ್ಥಿತಿ. ಮನುಷ್ಯರು ಆಹಾರ ಸೇವನೆಯಲ್ಲಿ ಎಂದಿಗೂ ಸಮತೋಲನ ಕಾಪಾಡುವುದಿಲ್ಲ. ಆದ್ದರಿಂದ ಯಾವ ಜೀವಿಗೂ ಬಾರದ ರೋಗವು ಜಗತ್ತಿನಲ್ಲಿ ಮಾನವರಿಗೆ ಉದ್ಭವಿಸುತ್ತಿದೆ.(ಉದಾ:– ಕರೋನಾ) ಎಂದು ಹೇಳಿದರೆ ತಪ್ಪಾಗಲಾರದು.

'ಒಂದು ಹೊತ್ತು ಉಂಡವನು ಯೋಗಿ
ಎರಡು ಹೊತ್ತು ಉಂಡವನು ತ್ಯಾಗಿ
ಮೂರು ಹೊತ್ತು ಉಂಡವನು ಭೋಗಿ
ನಾಲ್ಕು ಹೊತ್ತು ಉಂಡವನ್ನ ಎತ್ತಿಕೊಂಡು ಹೋಗಿ'

ಎಂದು ಹೇಳುವಂತೆ ಮಾನವರ ಆಹಾರ ಸಮತೋಲನತೆಯನ್ನು ವಿವರಿಸಲಾಗುತ್ತದೆ. ಮಾನವರು ಯಾವ ವಿಷಯದಲ್ಲಾದರೂ ತ್ಯಾಗಿಗಳಾಗಬಹುದು. ಆದರೆ ಭೋಜನದ ವಿಷಯದಲ್ಲಿ ಎಂದಿಗೂ ತ್ಯಾಗಿಗಳಾಗುವುದಿಲ್ಲ. ದೇವರಿಗೆ ನೈವೇದ್ಯ ಮಾಡುತ್ತೇವೆಂದು ಹೇಳುತ್ತಾರೆ. ನಂತರ ಪರೋಕ್ಷವಾಗಿ ದೇವರ ಹೆಸರಿನಲ್ಲಿ ಮಾಡಿದ್ದು ಮಾನವರಿಗೆ ನೈವೇದ್ಯವಾಗಿ

ಬಿಡುತ್ತದೆ. ಆಕಸ್ಮಾತ್ ದೇವರು ತನಗಿಟ್ಟ ನೈವೇದ್ಯವನ್ನು ತಿಂದರೆ ಇನ್ನೊಂದು ಸಲ ಪೂಜೆ ಮಾಡಿದಾಗ ದೇವರ ಪ್ರತಿಮೆ ಅಲ್ಲಿದ್ದರೆ, ಅಡಿ ದೂರದಲ್ಲಿ ನೈವೇದ್ಯವಿಡುವುದಂತೂ ಖಂಡಿತ. ಇನ್ನೂ ನಮ್ಮ ಹಳ್ಳಿಗಳಲ್ಲಂತೂ ಹಸಿರುಮುನಿ ಮಾಡುತ್ತೇವೆಂದು ಮಾಡುತ್ತಾರೆ. ಹೂವು, ಹಣ್ಣು, ಮುಂತಾದ ನೈವೇದ್ಯವನ್ನ ಒಂದು ಎಲೆಯ ಮೇಲೆ ಬಡಿಸಿ ಪೂಜೆಯಾದ ಮೇಲೆ ತೆಗೆದುಕೊಂಡು ಬಿಡುತ್ತಾರೆ. ಸ್ವಲ್ಪ ಅಲ್ಲೆ ಹಾಕು ಎಂದು ಹೇಳುತ್ತಾರೆ. ಆಕಸ್ಮಾತ್ ನಾವೇನಾದರೂ ಒಂದು ಹಿಡಿ ತೆಗೆದು ಹೊಲಕ್ಕೆಹಾಕಿದರೆ ನಮಗೆ ಮಂಗಾಳಾರತಿ, ಆಗಿ ಸುಪ್ರಭಾತಗಳು ಕೇಳ ಬರುತ್ತವೆ. ಹೀಗೆ ಮನುಷ್ಯ ಆಹಾರದ ವಿಷಯದಲ್ಲಿ ದುರಾಸೆಯುಳ್ಳವನಾಗಿದ್ದಾನೆ. ಮನುಷ್ಯ ಜೀವಿಸಲು ಆಹಾರ ಮುಖ್ಯವೆಂದು ವಿಜ್ಞಾನ ಹೇಳದರೆ, ಮನುಷ್ಯನ ಅಜ್ಞಾನ ಜೀವನದ ಆಧಾರವೇ ಆಹಾರ ಎಂದು ಹೇಳುತ್ತದೆ. ಇತಿ–ಮಿತಿಯಲ್ಲಿ ಆಹಾರ ಸೇವಿಸುವುದನ್ನು ಬಿಟ್ಟು ಸಿಕ್ಕಿತೆಂದು ರಾಶಿರಾಶಿ ತಿಂದು ಅನಾರೋಗ್ಯ ಪೀಡಿತನಾಗುತ್ತಾನೆ.

'ಅತಿಯಾದರೆ ಅಮೃತವೂ ಕೂಡ ವಿಷ ಎಂಬಂತೆ' ಅತಿಯಾಗಿ ಸೇವಿಸಿದರೆ ಪೌಷ್ಠಿಕ ಆಹಾರವು ಸಹ ಅಪೌಷ್ಠಿಕವಾಗಿ ಮನುಷ್ಯರನ್ನು ದುರ್ಬಲರನ್ನಾಗಿ/ ಅಬಲರನ್ನಾಗಿ ಮಾಡಿಬಿಡುತ್ತದೆ. ವಯಸ್ಸಿನಲ್ಲಿ ಎಷ್ಟು ತಿನ್ನಬೇಕು ಅಷ್ಟು ತಿಂದು ಆರೋಗ್ಯದಿಂದಿರುವುದು ಉತ್ತಮ. ನಮ್ಮ ಹಿರಿಯರು ಹೇಳುತ್ತಾರೆ, ನಾವು ಹರೆಯದಲ್ಲಿದ್ದಾಗ ಕಲ್ಲು ತಿಂದರು ಅರಗಿಸಿಕೊಳ್ಳುತ್ತಿದ್ದೆವು. ನೀವೇನೂ ಹಕ್ಕಿ ಮರಿಯಂತೆ ಇಷ್ಟಿಷ್ಟೇ ತಿನ್ನುತ್ತೀರೆಂದು ಟೀಕಿಸುತ್ತಾರೆ. ಹೀಗೆ ಮಾನವರು ಇತಿ–ಮಿತಿಯಲ್ಲಿ, ಸಮತೋಲನ ಆಹಾರ ಸೇವಿಸುವ ಹಕ್ಕಿಯನ್ನು ಹಂಗಿಸುತ್ತಾರೆ. ಆದ್ದರಿಂದ ಯಾರ ಮಾತಿಗೂ ಕಿವಿಗೊಡದೆ ನಾವು ಸಮತೋಲನ ಮತ್ತು ಪೌಷ್ಠಿಕ ಆಹಾರ ಸೇವಿಸಬೇಕು. ಇದರಿಂದ ಉತ್ತಮ ಆರೋಗ್ಯ ನಮ್ಮದಾಗುತ್ತದೆ.

* * * * *

ಶಿಕ್ಷಣವೆಂದರೆ ಬರೀ ಓದಲ್ಲ, ಬರೀ ಪುಸ್ತಕ ಜ್ಞಾನವೂ ಅಲ್ಲ, ಅವನ ಮಾನವತೆಯ ವಿಕಾಸ – **ಸ್ವಾಮಿ ವಿವೇಕಾನಂದ**.

ಪ್ರಪಂಚದಲ್ಲಿ ಮರಣವಿಲ್ಲದ ವರ ಪಡೆದಿರುವ ವಸ್ತು 'ಪುಸ್ತಕ'. – **ಗಯಟೆ**

ಮನಸ್ಸು ಎಲ್ಲಕ್ಕೂ ಮೂಲ; ಅದನ್ನು ಸರಿಪಡಿಸಿಕೊಳ್ಳದ ಹೊರತು ಇನ್ನಾವುದೂ ಸರಿಯಾಗದು. – **ಡಿ.ವಿ.ಜಿ**

ಮನುಜ ಮತ, ವಿಶ್ವ ಪಥ, ವಿಜ್ಞಾನದೃಷ್ಟಿ, ವಿಚಾರ ಬುದ್ಧಿ – ಇವು ನಮ್ಮ ಹೃದಯದ ನಿತ್ಯಮಂತ್ರಗಳಾಗಬೇಕು. – **ಕುವೆಂಪು**

ಜ್ಞಾನವೆಂಬುದು ಒಂದು ಖಜಾನೆ, ಅಭ್ಯಾಸವೆಂಬುದು ಅದರ ಕೀಲಿ. – **ಥಾಮಸ್ ಫುಲ್ಲರ್**

# 'ನಿರ್ಮಾ ಡಿಟರ್‌ಜೆಂಟ್' ಜನಮಾನಸದಲ್ಲಿ ನೆಲೆ ಪಡೆದ ಕಥೆ

**– ಮಂಜುಳ ಬಿ.ಆರ್, ಕುಸುಮ ಕೆ.ಆರ್, ಪ್ರಥಮ ಎಂ.ಕಾಂ**

ಸ್ನೇಹಿತರೆ, ಜೀವನದಲ್ಲಿ ಏನಾದರೂ ಸಾಧಿಸಬೇಕು ಅನ್ನೋ ವ್ಯಕ್ತಿಗೆ ನೂರಾರು ಪೆಟ್ಟುಗಳು ಬಿದ್ದು ಬರೆಯನ್ನು ಎಳೆದು ಬಿಡುತ್ತವೆ. ಅದನ್ನೆಲ್ಲಾ ಸಹಿಸಿಕೊಂಡು ಮುನ್ನಡೆದವನು ಮಾತ್ರ ಸಾಧಕನಾಗಿ ಯಶಸ್ವಿಯಾಗಲು ಸಾಧ್ಯ. ಅಹಮದಾಬಾದ್‌ನ ಒಂದು ಬಡ ಕುಟುಂಬದಲ್ಲಿ ಹುಟ್ಟಿದ ಕರ್ಸನ್‌ಬಾಯ್ ಪಟೇಲ್ ರಾಸಾಯನಿಕ ಶಾಸ್ತ್ರ ವಿಷಯದಲ್ಲಿ ಬಿಎಸ್ಸಿ., ಪದವಿ ಗಳಿಸುತ್ತಾರೆ. ನಂತರ ಅಹಮದಾಬಾದ್‌ನ ಲ್ಯಾಬ್‌ವೊಂದರಲ್ಲಿ ಸಹಾಯಕನಾಗಿ ಹುದ್ದೆಯನ್ನು ಪಡೆದಿರುತ್ತಾರೆ. ಆದರೆ ಈ ಕೆಲಸದಲ್ಲಿ ಅವರಿಗೆ ನೆಮ್ಮದಿ ಇಲ್ಲದೆ ಇರುವ ಕಾರಣ, ಸದಾ ಏನಾದರೊಂದು ಸಾಧನೆ ಮಾಡಬೇಕೆಂಬ ಉದ್ದೇಶ ಹೊಂದಿರುತ್ತಾರೆ. ಕೆಮಿಸ್ಟ್ರಿ ವಿದ್ಯಾರ್ಥಿಯಾದ ಕಾರಣ, ಕರ್ಸನ್‌ಬಾಯ್ ಪಟೇಲ್ ಬಿಡುವಿನ ವೇಳೆಯಲ್ಲಿ ಕೆಮಿಕಲ್‌ಗಳನ್ನು ಬಳಸಿಕೊಂಡು ಏನಾದರೂ ಪ್ರಯೋಗ ಮಾಡುತ್ತಾ ಇದ್ದರು.

ಇದು ದಿನನಿತ್ಯದ ಹವ್ಯಾಸವಾಗಿ ಬೆಳೆದಾಗ, ಒಂದು ದಿನ ಕರ್ಸನ್‌ಬಾಯ್‌ರವರಿಗೆ ಕಡಿಮೆ ಖರ್ಚಿನಲ್ಲಿ ಉತ್ತಮ ಗುಣಮಟ್ಟವುಳ್ಳ ಡಿಟರ್‌ಜೆಂಟ್ ಪೌಡರ್‌ವೊಂದನ್ನು ತಯಾರಿಸಬೇಕು ಎಂಬ ಯೋಚನೆ ಬರುತ್ತದೆ. ಈ ಯೋಚನೆಯನ್ನು ಮರುದಿನದಿಂದಲೇ ಯೋಜನೆಯಾಗಿ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುತ್ತಾರೆ. ಸಂಜೆ ಕೆಲಸದ ಬಳಿಕ ತನ್ನ ಮನೆಯ ಆವರಣದಲ್ಲಿ ಖಾಲಿ ಇರುವ ಜಾಗದಲ್ಲಿ ಕೆಮಿಕಲ್ ಹಾಗೂ ಇತರ ಪರಿಕರಗಳನ್ನು ಬಳಸಿಕೊಂಡು ಡಿಟರ್‌ಜೆಂಟ್ ತಯಾರಿಸುವ ನಿಟ್ಟಿನಲ್ಲಿ ನಾನಾ ಬಗೆಯ ವಿಧಾನಗಳನ್ನು ಪ್ರಯೋಗ ಮಾಡುವುದಕ್ಕೆ ಶುರು ಮಾಡುತ್ತಾರೆ. ಅದು ಹೇಗೋ ಹಲವು ಪ್ರಯತ್ನ ಪ್ರತಿಫಲವಾಗಿ ಹಳದಿ ಬಣ್ಣದ ಡಿಟರ್‌ಜೆಂಟ್ ಪೌಡರ್ ಒಂದನ್ನು ತಯಾರಿಸಿಬಿಡುತ್ತಾರೆ. ಇಷ್ಟು ಮಾತ್ರವಲ್ಲ ಪೌಡರನ್ನ ಗ್ರಾಹಕರಿಗೆ ತಲುಪಿಸಲು ಪ್ರತಿನಿತ್ಯ ಸೈಕಲ್‌ನಲ್ಲಿ ಕೆಲಸಕ್ಕೆ ಹೋಗುವ ಸಮಯದಲ್ಲಿ ಒಂದು ಲಕೋಟೆಯಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ಪ್ರಾರಂಭಿಸಿದರು.

ಕರ್ಸನ್‌ಬಾಯ್ ತಯಾರಿಸಿದ ಹಳದಿ ಬಣ್ಣದ ಪೌಡರ್ ಒಂದು ಸಣ್ಣ ಪ್ಯಾಕೆಟ್‌ನಲ್ಲಿ ಸಾಮಾನ್ಯ ಜನರಿಗೆ ಬರಿ 3 ರೂಪಾಯಿಗೆ 1 ಕೆ.ಜಿ ಯಂತೆ ಮಾರುತ್ತಿದ್ದರು. ಈ ಪೌಡರ್ ಬಗ್ಗೆ ಅವರಿಗೆ ಎಷ್ಟು ವಿಶ್ವಾಸ ಇತ್ತು ಎಂದರೆ ಗ್ರಾಹಕರಿಗೆ ಇಷ್ಟವಾಗದಿದ್ದಲ್ಲಿ ಹಣವನ್ನು ವಾಪಸ್ ಕೊಡುತ್ತಾ ಇದ್ದರು. ಅದೇ ಸಮಯದಲ್ಲಿ ಹಿಂದೂಸ್ಥಾನ್ ಲಿವರ್ ಕಂಪನಿ ಡಿಟರ್‌ಜೆಂಟ್ ಪೌಡರ್ ಮಾರುಕಟ್ಟೆಯಲ್ಲಿ ಸಾಕಷ್ಟು ಜನಪ್ರಿಯವಾಗಿತ್ತು. ಆದರೆ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿದ್ದ ಕರ್ಸನ್‌ಬಾಯ್ ತಯಾರಿಸುತ್ತಿದ್ದ ಪೌಡರ್ ಉತ್ತಮ ಗುಣಮಟ್ಟದಿಂದ ಜನರ ಮನಗೆದ್ದಿತ್ತು.

ಇದೇ ಸಂದರ್ಭದಲ್ಲಿ ಕರ್ಸನ್‌ಬಾಯ್ ತನ್ನ ಡಿಟರ್‌ಜೆಂಟ್ ಪೌಡರ್ ಜನಪ್ರಿಯತೆಯನ್ನು ಕಂಡು ಅದನ್ನು ಇನ್ನಷ್ಟು ಮುಂದುವರಿಸುವುದಕ್ಕೆ ಕೈಯಲ್ಲಿದ್ದ ಸರ್ಕಾರಿ ಕೆಲಸವನ್ನು ಬಿಟ್ಟು ಹೊರಬರುತ್ತಾರೆ. ಕರ್ಸನ್‌ಬಾಯ್ ಪಟೇಲ್ ಜೀವನದಲ್ಲಿ ಹೆಚ್ಚು ಪ್ರೀತಿಸುತ್ತಾ ಇದ್ದಿದ್ದು ತನ್ನ ಮಗಳು ನಿರುಪಮಾರನ್ನ. ಆಡಿಸಿ ಮುದ್ದಿಸಿ ಬೆಳೆಸಿದ ಮಗಳು ನಿರುಪಮಾರನ್ನು ಈ ಲೋಕವೇ ಗುರುತಿಸುವ ಹಾಗೇ ಆಗಬೇಕು ಮತ್ತು ಆ ರೀತಿ ಆಕೆಯನ್ನು ಮಾಡಬೇಕು ಎಂಬುದು ಅವರ ಕನಸಾಗಿತ್ತು. ಆದರೆ ಆ ಕನಸುಗಳು ಸಾಕಾರಗೊಳ್ಳುವ ಮುನ್ನವೇ ಕಮರಿ ಹೋಗುವಂತೆ, ಕರ್ಸನ್‌ಬಾಯ್ ಅವರ ಜೀವನದಲ್ಲೂ ಆಯಿತು. ನಿರುಪಮಾ ಕಾರಿನ ಅಪಘಾತದಲ್ಲಿ ಗಂಭೀರ ಗಾಯಗೊಂಡು ಸಾವನ್ನು ಅಪ್ಪಿದಳು. ಕರ್ಸನ್‌ಬಾಯ್ ಜೀವನದಲ್ಲಿ ಕರಾಳ ನೋವಿನ ನೆನಪಾಗಿ ಉಳಿಯುತ್ತದೆ. ಅವರು ತಮ್ಮ ಮಗಳನ್ನು ಪ್ರೀತಿಯಿಂದ 'ನಿರ್ಮಾ' ಎಂದು ಕರೆಯುತ್ತಿದ್ದರು. ಕರ್ಸನ್‌ಬಾಯ್ ತಾನು ತಯಾರಿಸಿದ ಡಿಟರ್‌ಜೆಂಟ್ ಪೌಡರ್‌ಗೆ 'ನಿರ್ಮಾ' ಎಂದು ಹೆಸರಿಟ್ಟರು.

'ನಿರ್ಮಾ ಪೌಡರ್' ನೋಡುನೋಡುತ್ತಿದ್ದಂತೆಯೇ ಗುಜರಾತ್‌ನಲ್ಲಿ ತನ್ನ ಹಲವು ಶಾಖೆಗಳನ್ನು ಪ್ರಾರಂಭಿಸಿತು. ಮಾರುಕಟ್ಟೆಯಲ್ಲಿ ಉತ್ತಮ ರೀತಿಯಲ್ಲಿ ಹೆಸರು ಗಳಿಸಿತು. ನಿರ್ಮಾ ಪೌಡರ್ ಮಾರುಕಟ್ಟೆಯಲ್ಲಿ ಹೆಸರು ಗಳಿಸಿದರೂ ಅಕ್ಕಪಕ್ಕದ ಅಂಗಡಿಗಳಿಗೆ ನಿರ್ಮಾ ಪೌಡರ್ ಅನ್ನು ಸಾಲವಾಗಿ ನೀಡಲಾಗುತ್ತಿತ್ತು. ಸರಿಯಾದ ಸಮಯಕ್ಕೆ ಅಂಗಡಿ ಮಾಲೀಕರು ಹಣವನ್ನು ನೀಡವುದಕ್ಕೆ ಹಿಂದೇಟು ಹಾಕುತ್ತಿದ್ದರಿಂದ ನಿರ್ಮಾದ ಸಂಸ್ಥಾಪಕರಾದ ಕರ್ಸನ್‌ಬಾಯ್ ತನ್ನೆಲ್ಲಾ ಉದ್ಯೋಗಿಗಳಿಗೆ ಇನ್ನು ಮುಂದೆ ಸಾಲವಾಗಿ ಪೌಡರ್ ಅನ್ನು ನೀಡುವುದನ್ನು ನಿಲ್ಲಿಸಬೇಕೆಂದು ಆರ್ಡರ್ ಮಾಡುತ್ತಾರೆ.

ಕರ್ಸನ್‌ಬಾಯ್ ಅಂದಿನ ಕಾಲದಲ್ಲಿ ಜನಮನದಲ್ಲಿ ಬೇರೂರಿದ್ದ ದೂರದರ್ಶನದಲ್ಲಿ ನಿರ್ಮಾದ ಕುರಿತು ಜಾಹೀರಾತನ್ನು ನೀಡುತ್ತಾರೆ. 'ಸಬ್ ಕಿ ಪಸಂದ್ ನಿರ್ಮಾ ವಾಷಿಂಗ್ ಪೌಡರ್, ನಿರ್ಮಾ ವಾಷಿಂಗ್ ಪೌಡರ್' ಈ ಹಾಡಿನ ಜಾಹೀರಾತು ಬಂದಾಗ ಪ್ರತಿಯೊಬ್ಬರ ತುಟಿ ತನ್ನಷ್ಟಕ್ಕೆ ಮುಂದುವರೆದು ನಿರ್ಮಾದ ಜಾಹೀರಾತನ್ನು ಹಾಡುವಷ್ಟು ಪ್ರಸಿದ್ಧಿಯಾಯಿತು. ಎಲ್ಲಾ ಕಡೆ ನಿರ್ಮಾದ ಬೇಡಿಕೆ ಹೆಚ್ಚಾಗುತ್ತದೆ.

ನಿರ್ಮಾದ ಜಾಹೀರಾತು ಜನಪ್ರಿಯ ನಟನಟಿಯರಿಂದಾಗುತ್ತೆ. ನಿರ್ಮಾ ಮಾರುಕಟ್ಟೆಯಲ್ಲಿ ಬೇಡಿಕೆಯ ಬ್ರಾಂಡ್ ಆಗುತ್ತದೆ. ಇನ್ನು ನಿರ್ಮಾ ಬ್ರಾಂಡ್ ಎಷ್ಟು ಜನಪ್ರಿಯವಾಗುತ್ತೆ ಅಂದರೆ ಮಾರುಕಟ್ಟೆಯಲ್ಲಿ ನಿರ್ಮಾ ಹೆಸರಲ್ಲಿ ನಿರ್ಮಾ ಉಪ್ಪು, ನಿರ್ಮಾ ಸಕ್ಕರೆ, ನಿರ್ಮಾ ಸೋಪು, ನಿರ್ಮಾದ ವಿವಿಧ ವಸ್ತುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟವು. ಇವರ ಮಗಳ ಹೆಸರು 'ನಿರ್ಮಾ' ರೂಪದಲ್ಲಿ ಪ್ರಸಿದ್ಧಿಯನ್ನು ಗಳಿಸುತ್ತದೆ. ನಿರ್ಮಾ ಪ್ಯಾಕೆಟ್‌ನಲ್ಲಿ ಮಗಳ ರೇಖಾ ಚಿತ್ರವನ್ನು ಸೃಷ್ಟಿಸುತ್ತಾರೆ. ಒಂದು ಖಾಲಿ ಜಾಗದಲ್ಲಿ ಒಂಟಿ ಹುಡುಗನ ಯೋಜನೆಯಿಂದ ಆರಂಭವಾದ

ನಿರ್ಮಾ ಹಲವು ಸಮಾಜಮುಖಿ ಕೆಲಸವನ್ನು ಮಾಡುತ್ತೆ. ಅಹಮದಾಬಾದ್‌ನಲ್ಲಿ ನಿರ್ಮಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ್ದಾರೆ.


ಇವತ್ತು ಸುಮಾರು 17,000ಕ್ಕೂ ಹೆಚ್ಚು ಮಂದಿ ನಿರ್ಮಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ವಾರ್ಷಿಕವಾಗಿ ಕೋಟಿಗಟ್ಟಲೆ ಆದಾಯವನ್ನು ನಿರ್ಮಾ ಗಳಿಸುತ್ತಾ ಇದೆ. ಇದಿಷ್ಟು ನಿರ್ಮಾ ಸಂಸ್ಥೆ ಬಗ್ಗೆ ಇರುವಂತಹ ಮಾಹಿತಿ ಸ್ನೇಹಿತರೆ. ಪ್ರತಿಯೊಂದು ಉತ್ಪನ್ನವು ತನ್ನದೇ ಆದ ಇತಿಹಾಸವನ್ನು ಹೊಂದಿರುತ್ತದೆ, ಜೊತೆಗೆ ಹಲವಾರು ವ್ಯಕ್ತಿಗಳ ಪರಿಶ್ರಮವನ್ನು ಹೊಂದಿರುತ್ತದೆ.

* * * * *

## ಕೊರೊನಾ

**– ಶಶಿಕಲಾ.ಕೆ.ಎನ್., ತೃತೀಯ ಬಿ.ಕಾಂ**

ಮುಂದುವರೆಯುತ್ತಿರುವ ನನ್ನ ದೇಶದಲ್ಲಿ
ಹಿಂದೆ ಎಂದೂ ನೋಡಿರದ
ಮುಂದೆಯು ಎಂದೂ ನೋಡಲಾಗದ
ರೋಗ ನೀ ಕೊರೊನಾ...



ಹಿಂದೆಲ್ಲಾ ಕಾಡಿಸಿ ಪೀಡಿಸಿ
ನಾನೇ ಎಂದು ಮೆರೆದ ಪ್ಲೇಗ್‌ನಂತಹ
ರೋಗವನ್ನೇ ಬಡಿದೋಡಿಸಿರುವ
ನನ್ನ ಜನರಿಗೆ ನೀ ಯಾವ ಲೆಕ್ಕ ಕೊರೊನಾ...

ಎಲ್ಲರ ನಿದ್ರೆ ಗೆಡಿಸಿ ನಿದ್ರಿಸುತ್ತಿರುವ ನಿನ್ನ
ಎದ್ದಿರುವ ನನ್ನ ಜನರು ನಿನ್ನ ಗುರುತುಳಿಯದಂತೆ
ಕನಸಿನಲ್ಲಿಯೂ ನೀ ಬಾರದಂತೆ
ಬಡಿದೋಡಿದಸದೆ ಬಿಡುವರೇ.. ಕೊರೊನಾ

ಇಡೀ ನಾಡನ್ನೇ ಅಂಟಿಕೊಳ್ಳುತ್ತಿರುವ ಕೊರೊನವೇ
ಮುಟ್ಟಿದರೆ ಅಂಟಿಕೊಳ್ಳುವ ಪಿಶಾಚಿ ನೀನು
ಮುಟ್ಟದಿದ್ದರೆ ಇದ್ದಲ್ಲೇ ಸಾಯುವ ಹೇಡಿ ನೀನು
ನೋಡುತ್ತಿರು ತಟ್ಟಿ ಓಡಿಸುತ್ತದೆ ನನ್ನ ದೇಶ ನಿನ್ನನು...

# ಅನ್ನದಾತನ ವೇದನೆ

– ಶೋಭ ಎಸ್, ಸಹಾಯಕ ಪ್ರಾಧ್ಯಾಪಕಿ



ಯಾಕಪ್ಪ ರೈತ ಈ ಪರಿಯ ಕೋಪ
ಜೀವವನ್ನೇ ಕಳೆದುಕೊಳ್ಳುವುದು ತುಂಬಾನೆ ಪಾಪ!
ನೇಗಿಲಯೋಗಿ, ಕಾಯಕ ಯೋಗಿ ಇಂತಿಪ್ಪ
ಬಿರುದುಗಳು ಇದ್ಯಾಗ್ಯೂ
ನೇಣಿಗೆ ಕೊರಳಿಟ್ಟು ಒಡಲೊಳಗೆ ವಿಷವಿಟ್ಟು
ಕಳೆದುಕೊಂಡೆ ಪ್ರಾಣ, ದೇಶಕ್ಕೆ ನೀನಾದೆ ತ್ರಾಣ

ಐಟಿ ಬಿಟಿಗಳಲ್ಲಿ ಭತ್ತವ ಬೆಳೆಯೋದಿಲ್ಲ
ಮಣ್ಣಲ್ಲೆ ಬರಬೇಕು ನಾವು ತಿನ್ನೋ ಅನ್ನ
ನಿನ್ನ ಕಸುವು ಹರಿದರೇನೆ ಬರುವುದು ಚಿನ್ನ
ಕೊರೆದೇ ಬಿಟ್ಟರೋ ನಿನ್ನ ಬದುಕಿಗೆ ಕನ್ನ

ಬಿಟ್ಟಿ ಕೂಳಿಗೆ ಕೈಚಾಚಿದವನಲ್ಲ
ಸಬ್ಸಿಡಿ ಸಾಲಕ್ಕೆ ಅಡಿಯಾಳಾಗಿಸಿದರು ನಿನ್ನ
ಪುಕ್ಕಟೆ ಅನ್ನ ಕೊಟ್ಟಾಗ
ಅನ್ನಕ್ಕೆ ಎಲ್ಲಿ ಬೆಲೆ ನೀವೆ ಹೇಳಿ ಸ್ವಾಮಿ

ನಿನ್ನ ಹೆಸರೇಳಿ ಗದ್ದುಗೆ ಹಿಡಿದವರು
ಮುದ್ದೆ ಉಂಡು ಮಲಗಿಹರು
ಕೈ ಬಾಯಿ ಬೆಣ್ಣೆ ಮಾಡಿಕೊಂಡು
ನೆಕ್ಕುತಿಹರು ಎಲ್ಲೈತೆ ಅವರಿಗೆ ನಿನ್ನ ಚಿಂತೆ

ಮುಂದೆಂದೋ ಅಧಿಕಾರ ಬರುವುದೋ ಇಲ್ಲವೋ
ಎಂದು ಬಾಚುತಿಹರು ಹಣದ ಕಂತೆ ಕಂತೆ
ವಿಧಾನ ಸೌಧ ವಿಶ್ರಾಂತಿ ಗೃಹವಂತೆ
ಅಧಿಕಾರದ ಅಮಲಿನಲ್ಲಿ ತೇಲುತಿಹರು

# ಕನ್ನಡ

– ಚಂದನ ಕೆ, ತೃತೀಯ ಬಿ.ಎಸ್ಸಿ.,

ಕನ್ನಡ ಸಾಹಿತ್ಯ ಸಮ್ಮೇಳನ
ನಾವೆಲ್ಲ ಒಂದಾಗಿ ಆಚರಿಸೋಣ
ಕನ್ನಡ ಸಾಹಿತ್ಯ, ಕನ್ನಡ ಮಾಣಿಕ್ಯ
ಕನ್ನಡ ನುಡಿಯೇ ಶಿವಸತ್ಯ

ಕನ್ನಡಮ್ಮನೆಂದಿಗೂ ಮರಿಬೇಡ
ನೀನಿರುವ ನೆಲ ಕನ್ನಡ
ನೀ ಕುಡಿಯುವ ಜಲ ಕನ್ನಡ
ನೀ ನುಡಿಯೋ ನುಡಿ ಕನ್ನಡ
ಎಲ್ಲವೂ ಇಲ್ಲಿ ಕನ್ನಡವೆ

ಕನ್ನಡಾಂಬೆಯು ನಿನ್ನ ಹೆತ್ತತಾಯಿಯು
ಕನ್ನಡಾಂಬೆಯು ನಿನ್ನ ಅನ್ನದಾತೆಯು
ಕನ್ನಡಾಂಬೆಯು ನಿನಗೆ ಅನ್ನ, ಅಕ್ಷರ
ಆರೋಗ್ಯವನ್ನು ಕೊಟ್ಟು ಸಲಹುವಳು
ಕನ್ನಡಾಂಬೆಗೆ ಎಂದಿಗೂ ದ್ರೋಹ ಬಗೆಯದಿರು

ಕರುನಾಡಲ್ಲಿಯೆ ಹುಟ್ಟಿ ಕರುನಾಡಲ್ಲಿಯೆ ಬೆಳೆದು
ಕರುನಾಡನೆಂದಿಗೂ ಮರೆಯದಿರು
ಕರುನಾಡಲ್ಲಿ ಹುಟ್ಟಿದ ನಾನೆ ಧನ್ಯಳು
ತಾಯಿ ಭುವನೇಶ್ವರಿಯ ಮಗಳು
ಎಂದು ಸದಾ ಸಂತಸಪಡುತ್ತಾ ಬಾಳು

ತಾಯಿ ಭುವನೇಶ್ವರಿಯ ಮಡಿಲು
ಸ್ವರ್ಗ ಸುಖಕ್ಕಿಂತಲೂ ಮಿಗಿಲು
ಆಕೆಯ ಋಣವನ್ನೆಂದಿಗೂ ತೀರಿಸಲಾಗದು
ಸಿರಿಗನ್ನಡಂ ಗೆಲ್ಗೆಯೆಂದು
ಸಿರಿಗನ್ನಡಂ ಬಾಳ್ಗೆಯೆಂದು

ಭಕ್ತಿಯಿಂದ ನಾಡದೇವಿಗೆ ಶರಣಾಗು
ಆ ತಾಯಿಯು ನಿನ್ನ ಕಾಯುವಳು
ನಿನಗೆ ಕರುಣೆಯ ತೋರುವಳು
ಆಕೆಯು ಸಂತಸ ಪಡುವಳು

# ನನ್ನವಳು

**– ಚಂದ್ರಶೇಖರ್ ಕೆ.ಎಸ್, ದ್ವಿತೀಯ ಬಿ.ಎ**

ನನ್ನವಳು ನನ್ನವಳು ಯಾರಿವಳು?
ಎಂದು ನಿಮಗೆ ಚಿಂತೆಯನುಟ್ಟಿಸಿರಬಹುದವಳು
ರಂಬೆಯೂರ್ವಶಿಯೇ ಮೇನಕೆ ಮನೋರಮೆಯೇಯವಳು
ಎಂದೆಲ್ಲ ಚಿಂತಿಸದಿರು ಚಿಂತೆಗೆ ಸಿಗದವಳು
ಹೆಣ್ಣವಳು, ಮಣ್ಣವಳು, ಹೊನ್ನವಳು ನನ್ನವಳು

ವಸಂತದಲಿ ಹಸಿರುರಂಗಿನ ಸೀರೆನುಟ್ಟವಳು
ಮೂಡಣ ಸೂರ್ಯನ ತಿಲಕವಾಗಿಸಿಕೊಂಡವಳು
ವೈಶಾಖ-ಜ್ಯೇಷ್ಠ ಮಾಸದ ಜಾಜಿ ಮುಡಿದವಳು
ಚಳಿ-ಮಳೆ-ಬೇಸಿಗೆಗಾಲಗಳ ವೇಷವೆತ್ತವಳು
ಯೌವ್ವನ ತುಂಬಿದ ಹಚ್ಚ ಬೆಡಗಿ ನನ್ನವಳು

ಷಡ್ರಸಗಳ ಹಣ್ಣುಗಳಲ್ಲಿಟ್ಟವಳು
ಕಂಪು, ಹನಿ, ವರ್ಣಗಳ ಕುಸುಮಕ್ಕಿಟ್ಟವಳು
ಒಡಲಲಿ ಜಲವನ್ನಿಟ್ಟು ಜೇನಗೂಡಲಿಟ್ಟಳು
ಪ್ರಾಣಿಗಳಿಗೆ ನಡಿಗೆಕೊಟ್ಟು ಹಕ್ಕಿಗಳಿಗೆ ರೆಕ್ಕೆ ಇಟ್ಟವಳು
ಸ್ವರ್ಗನರಕವಿಲ್ಲೆಯಿಟ್ಟು ಆಯ್ಕೆಕೊಟ್ಟವಳು ನನ್ನವಳು

ಮನುಜನಿಗೆ ಆಲೋಚನೆ ತುಂಬಿದವಳು
ಬದುಕಿಗೆ ಬೇಕಾದ ಸರ್ವಸಂಪತ್ತನ್ನಿಟ್ಟವಳು
ತಾನು ಬದುಕು ತನ್ನವರ ಬದುಕಲ್ಬಿಡೆಂದವಳು
ಬದುಕದೆ ಬಂಡುಕೋರರಾದವರ್ಮೇಲೆ ಕೆಂಡಕಾರಿದವಳು
ಸಹಿಸಿದಂತಿದ್ದರು ಸಹಿಸದವಳು ನನ್ನವಳು

ಬಳಲಿದವರಿಗೆ ನೆರಳನೆರೆದವಳು
ದಣಿದವರ ದಾಹ ನೀಗಿಸಿದವಳು
ಹಸಿದವರಿಗೆ ಫಲಹಾರವಿತ್ತವಳು

ಜೀವಸಂಕುಲವ ಪ್ರೀತಿಸಿ ಸಲಹಿದವಳು
ಸರ್ವಸುಗುಣ ಸಹೃದಯಿ ನನ್ನವಳು

ಸುನಾಮಿಯಾದವಳು, ಚಂಡಮಾರುತವಾದವಳು
ಭೂಕಂಪವಾದವಳು, ಜ್ವಾಲಾಮುಖಿಯಾಗಿ ಚಿಮ್ಮಿದವಳು
ಆಮ್ಲಮಳೆಗರೆದವಳು ಸುಡಬಿಸಿಲನೆರಚಿದವಳು
ಅತೀವೃಷ್ಟಿ ತಂದವಳು ಅನಾವೃಷ್ಟಿಯಾದವಳು
ಅಪಕಾರ್ಯವೆಸಗುವರ ಅಳಿಸದಿರವಳೆ ನನ್ನವಳು

ಮೇಲುಕೀಳೆಂಬ ಜಾತಿ-ಬೇದ ಪಡೆದವಳು
ಬಡವ-ಬಲ್ಲಿದ, ಹೆಣ್ಣು-ಗಂಡುಗಳೆನ್ನದವಳು
ತನಗಿಷ್ಟು ತಮಗಿಷ್ಟು ನಿನಗಿಷ್ಟೆನ್ನದವಳು
ಗಾಳಿ ಬೆಳಕು ಕತ್ತಲ ಸಮವಾಗಿಟ್ಟವಳು
ಸಕಲ ಸಂಪತ್ತಿನ ಅಕ್ಷಯ ಕಣಜ ನನ್ನವಳು

ಜ್ಞಾನಿಗಳಿಗೆ ಪರಿಸರದಂತೆ ಕಂಡವಳು
ಪ್ರೇಮಿಗಳಿಗೆ ವನಸಿರಿಯಂತೆ ಕಂಡವಳು
ಕವಿಗಳೆದುರು ವಸುಂಧರೆಯಂತೆ ನಿಂತವಳು
ಪರಿವುಳ್ಳವರಿಗೆ ಪ್ರಕೃತಿಯಂತೆ ಕಂಡವಳು
ನನಗೆ ನನ್ನವಳಂತೆ ಕಂಡವಳು ನನ್ನವಳು

ಬೇಡದಿದ್ದರು ಬೇಕಾದುದ್ದನ್ನೆಲ್ಲ ನೀಡುವಳು
ನೊಂದುಬೆಂದವಳು ಅಳಿದುಳಿದವಳು
ಹಸಿರುಸಿರಿವಳು ನಾಳೆಯ ನನಸಿವಳು
ಇವಳುಳಿಸಿ ಇವಳೆಳಸಿ ಯಾಕೆಂದರಿವಳು
ನಿಮ್ಮವಳು, ಬೇಕವಳು, ನನ್ನವಳು

ಯಾರು ಪ್ರಪಂಚದ ಸುಖವನ್ನು ಹೆಚ್ಚಿಸಲು ಯತ್ನಿಸುತ್ತಾರೋ ಅವರು ತಮ್ಮ ಸುಖವನ್ನು ಹೆಚ್ಚಿಸಿಕೊಳ್ಳುತ್ತಾರೆ. – **ಡಾ. ಕೆ ಶಿವರಾಮ ಕಾರಂತ**

# ನಲುಗಿ ಹೋದ ಉಸಿರು

– ದಿವ್ಯ ಡಿ., ದ್ವಿತೀಯ ಬಿ.ಎಸ್ಸಿ




ನಾನೇನೂ ಅಲ್ಲ,
ನಾನೇ ಎಲ್ಲಾ ಅಂದವರೂ ಮಣ್ಣಾದರು
ಎಷ್ಟು ಹಣವಿದ್ದರೇನಂತೆ,
ಹಣವಿದ್ದರೂ ಇಲ್ಲದಿದ್ದರೂ ಜೀವ ಹೋಯಿತಲ್ಲಾ!

ಒಂದು ಹೊತ್ತು ಹೊಟ್ಟೆ ತುಂಬಿಸೋಕೆ ದುಡಿದು
ದಿನವನ್ನೇ ದಣಿವಿನಿಂದ ಕಳೆಯುತ್ತಿದ್ದರು
ಒಂದು ಹೊತ್ತು ಅನ್ನಕ್ಕೆ ಕಷ್ಟಪಟ್ಟ ಜನ
ಇನ್ನು ಸ್ವತಂತ್ರವಾಗಿ ಉಸಿರಾಡಲು ಹಣ ಬೇಕೆಂದಾಗ..!

ಮಹಾಮಾರಿನೇ ತಾರತಮ್ಯ ಮಾಡಲಿಲ್ಲ
ಬಂದು ವಕ್ಕರಿಸಿತು ಬಡವ ಶ್ರೀಮಂತ ಎನ್ನದೆ
ಮತ್ಯಾಕೆ ಆಸ್ಪತ್ರೆಯಲ್ಲಿ ದುಡಿದ್ದವನಿಗೆ ಮಾತ್ರ ಚಿಕಿತ್ಸೆ
ಮತ ಕೇಳುವಾಗ ಬಡವರೆಲ್ಲರೂ ಶ್ರೀಮಂತರಂತೆ ಕಂಡರಾ?

ಮೃತದೇಹಗಳಿಗೆ ಸಿಗಲಿಲ್ಲ ಅಂತ್ಯ ಸಂಸ್ಕಾರ
ತನ್ನ ಸಂಬಂಧಿಕರಿದ್ದರೂ ಸಹ
ಸಂಬಂಧನೇ ಪಡದವರಿಂದಾಯಿತು
ಏನಿದ್ದರೇನಂತೆ ಎಲ್ಲ ಮಣ್ಣು ಸೇರಿತು
ಯಾರನ್ನ ದೂರುವುದು?

ಕಣ್ಣಿಗೆ ಕಾಣದೆ ಕೊಲ್ಲುತ್ತಿರುವ ಕರೋನವನ್ನಾ
ಕಣ್ಣಿಗೆ ಕಂಡರೂ ಕಾಣದಂತಿರೋ ರಾಜಕಾರಣಿಗಳನ್ನಾ
ಅಥವಾ ಮಕ್ಕಳನ್ನು ಅನಾಥರನ್ನಾಗಿ ಬಿಟ್ಟು ಮಣ್ಣು ಸೇರಿದವರನ್ನಾ
ಅದೆಷ್ಟೊ ಮನೆಗಳಲ್ಲಿ ಬೆಳಕು ಆರಿಹೋಯಿತಲ್ಲಾ....

# ದೇವರಿಗೊಂದು ಅರ್ಜಿ

– ನಿರ್ಮಲ ಕೆ.ಎನ್, ಪ್ರಥಮ ಬಿ.ಕಾಂ.

ಓ ದೇವರೇ... ನಂಬಿರುವವರು ನೀನಿರುವೆ ಎಂದು ಈ ಜನರು
ಆದರೆ ಕಂಡಿರುವರೇ ಇದುವರೆಗೂ ನಿನ್ನನ್ನು ಆ ಜನರು...

ಹೇಳುವರು ನೀನು ಎಲ್ಲೆಡೆಯೂ ಇರುವೆ ಎಂದು
ನನಗೂ ಸಹ ತಿಳಿದಿಲ್ಲ ನೀನೆಲ್ಲಿರುವೆ ಎಂದು....
ನಂಬಿರುವವರು ನೀ ಅವರನ್ನು ಕಾಯುತ್ತಿರುವೆ ಎಂದು
ಉಳಿಸಿಕೊಳ್ಳುವೆಯಾ ಅವರ ನಂಬಿಕೆಯ ನೀನಿಂದು?

ಪ್ರೀತಿಸುವವರ ಮನದಲ್ಲಿರುವೆಯಾ?
ಕಂಗೊಳಿಸುವ ಪ್ರಕೃತಿಯಲ್ಲಿರುವೆಯಾ?
ಜ್ಯೋತಿಯ ಬೆಳಕಿನಲ್ಲಿರುವೆಯಾ?
ಉಸಿರಾಡುವ ಗಾಳಿಯಲ್ಲಿರುವೆಯಾ?
ಸುಡುವ ಬೆಂಕಿಯಲ್ಲಿರುವೆಯಾ?
ಹರಿವ ಝರಿಯಲ್ಲಿರುವೆಯಾ?
ಎಲ್ಲಿಯಾದರೂ ಇರು .. ಹೇಗಾದರೂ ಇರು ..
ನಿನ್ನ ನಂಬಿದವರ ಕೈ ಬಿಡದಂತಿರು...




ಕಾಡುತಿರುವುದು ವೈರಸ್ ಕಾಣದೊಂದು ..
ಕರೆದರು ಅದನ್ನು ಕೊರೊನ ಎಂದು..
ತಿಳಿಸುತ್ತಿದೆ ಸಂಬಂಧಗಳ ಬೆಲೆಯನ್ನಿಂದು
ಹೇಳುತ್ತಿದೆ ಹಣವೇ ಎಲ್ಲವೂ ಅಲ್ಲವೆಂದೂ..
ಅಡಗಿಸುತ್ತಿದೆ ಅಹಂಕಾರದಿಂದ ಮೆರೆದವರ ಸೊಕ್ಕನಿಂದು
ಕರೆದೊಯ್ಯುತ್ತಿದೆ ಎಲ್ಲರನ್ನು ಕಾಣದ ಲೋಕಕ್ಕಿಂದು....

ನಂಬಿರುವವರು ನೀನಿರುವೆ ಎಂದು ಕಾಯುತ್ತಿ ನೀ ಬರುವೆ ಎಂದು
ತಿಳಿದಿರುವವರು ನೀ ನೋಡುತ್ತಿರುವೆ ಇದೆಲ್ಲವನೆಂದು...
ಬೇಡುತ್ತಿರುವವರು ನಮ್ಮನ್ನು ಕಾಪಾಡೆಂದು
ಗೋಳಿಡುತ್ತಿರುವವರು ನಮ್ಮವರ ಉಳಿಸೆಂದು
ಉಳಿಸಿಕೊಳ್ಳುವೆಯಾ ಅವರ ನಂಬಿಕೆಯ ಇಂದು
ಗಳಿಸಿಕೊಳ್ಳುವೆಯಾ ಅವರ ಪ್ರೀತಿಯ ನೀನಿಂದು ಎಂದೆಂದೂ...

# ಮಾತು

– ಸಂಜಯ್ ಎಸ್., ದ್ವಿತೀಯ ಬಿ.ಕಾಂ, 'ಸಿ' ವಿಭಾಗ

ಮಾತು ಮನ ಕೆಡಿಸಬಹುದು
ಮಾತು ಮನ ಕೊಡಿಸಬಹುದು
ಮಾತು ನಮ್ಮೊಳಗಿರಬಹುದು
ಮಾತು ಪರರೊಂದಿಗೆ ಇರಬಹುದು
ಮಾತನಾಡಿದರೆ ನೀನು ಪ್ರಮುಖನಾಗಬಹುದು
ಮಾತನಾಡದಿದ್ದರೆ ನೀನು ಪ್ರಯೋಜನವಿಲ್ಲದಿರಬಹುದು
ಮಾತು ಒರಟಾಗಿರಬಹುದು
ಮಾತು ಮೆದುವಾಗಿರಬಹುದು
ಮಾತು ಹೆಚ್ಚಾದರೆ ವಾಚಾಳಿ ಎನ್ನಬಹುದು
ಮಾತು ಕಡಿಮೆಯಾದರೆ ಮೌನಿ ಎನ್ನಬಹುದು
ಮಾತಿನಿಂದ ಏನನ್ನು ಅಳೆಯುವ ಜನ ತುಂಬಿರಬಹುದು
ಮಾತು ವಿರೋಧಿಗಳನ್ನು ಹುಟ್ಟುಹಾಕಬಹುದು
ಮಾತು ಮಿತ್ರರನ್ನು ಪರಿಚಯಿಸಬಹುದು
ಮಾತಿನಿಂದ ಕೆಲಸಗಳು ಬೇಗ ಆಗಬಹುದು
ಮಾತಿನಿಂದ ಕೆಲಸಗಳು ತಡವಾಗಬಹುದು
ಮಾತು ಪ್ರಶ್ನೆಗಳನ್ನುಂಟು ಮಾಡಬಹುದು
ಮಾತು ಉತ್ತರಗಳನ್ನು ನೀಡಬಹುದು
ಮಾತು ಮತ್ತೊಬ್ಬರಿಗೆ ಖುಷಿ ನೀಡಬಹುದು
ಮಾತು ಮತ್ತೊಬ್ಬರಿಗೆ ದುಃಖಕೀಡು ಮಾಡಬಹುದು
ಮಾತನಾಡಿದರೆ ನಿನ್ನ ಸಮಸ್ಯೆ ತಿಳಿಯಬಹುದು
ಮಾತನಾಡು, ಆದರೆ ಸಮಯಕ್ಕೆ ಸಂದರ್ಭಕ್ಕೆ ವ್ಯಕ್ತಿಗೆ ತಕ್ಕನಾಗಿ ಮಾತನಾಡು

ಜ್ಞಾನವು ಸುಮ್ಮನೆ ನಮ್ಮ ಬಳಿ ಬರುವುದಿಲ್ಲ, ಅದು ಒಂದು ಮಹಾನ್ ಪ್ರಯತ್ನದ ಫಲ.
**– ಡಾ.ಬಿ.ಆರ್. ಅಂಬೇಡ್ಕರ್**

# ಮಗುವೊಂದಾಗಬೇಕಿತ್ತು ನಾ..

– ಚಂದನ ಎಂ.ಎಸ್, ದ್ವಿತೀಯ ಬಿ.ಎ

ಮಗುವೊಂದಾಗ ಬೇಕಿತ್ತು ನಾ...!!
ಇನ್ನೂ ಮಗುವೊಂದಾಗ ಬೇಕಿತ್ತು..

ನನ್ನವರ ಹುಸಿ ನುಡಿಯ
ಭರವಸೆಯಿಂದ ಮೋಸದ ಹಾದಿಯ
ತುಳಿಯುವ ಮುನ್ನ
ಮಗುವೊಂದಾಗ ಬೇಕಿತ್ತು ನಾ!!

ಕಗ್ಗತ್ತಲ ಕಾಡಿನಲಿ
ಒಬ್ಬಂಟಿಯ ಜೀವನದ
ಅರ್ಥದನ್ವೇಷಣೆಯ ಕೈಗೊಳ್ಳುವ ಮುನ್ನ
ಮಗುವೊಂದಾಗ ಬೇಕಿತ್ತು ನಾ...

ಕಲುಷಿತದಿ ಹೊರಳಾಡಿ ಅಲ್ಲಿಯೇ
ತೇಲಾಡಿ ತನ್ಮೈಯಲ್ಲಿನ ಪಂಕವ
ಮತ್ತೊಬ್ಬರಿಗೆ ಅಂಟಿಸಲು ಯತ್ನಿಸುವ ಆದಿಯಲ್ಲೇ
ಮಗುವೊಂದಾಗ ಬೇಕಿತ್ತು ನಾ...

ಯಾರದೋ ಕನಸಿಗೆ, ಯಾರದೋ ಮನಸಿಗೆ
ಮೀನಿನ ಗಾಳದಂತೆ ಬಳಸಿ ಕೊಳ್ಳುವವರ
ನಡುವೆ ಸಿಕ್ಕಿ ಬಳಲುವ ಮುನ್ನ
ಮಗುವೊಂದಾಗ ಬೇಕಿತ್ತು ನಾ...!!

ಕನಸುಗಳು ನನಸಿನ ಹೊಸ್ತಿಲಲ್ಲಿ
ನಿಂತು ಕೈಚಾಚಿ ಬಿಗಿದಪ್ಪಿಕೊಳ್ಳಲು
ಅವಣಿಸುವಾಗ ಬೆನ್ನಿಂದೆ ಚೂರಿ ಹಿಡಿದು
ಕನಸಿನೊಂದಿಗೆ ನನಸಿನ ಜೀವವನ್ನೇ ಜವನಿಗೆ
ಉಡುಗೊರೆಯಾಗಿ ನೀಡುವ ಮುನ್ನ
ಮಗುವೊಂದಾಗ ಬೇಕಿತ್ತು ನಾ...!!

ಅರಿತು, ಬೆರೆತು, ತಿಳಿದು, ತಿಳಿಯದೇ
ಮಾಡಿದ ತಪ್ಪು ಒಪ್ಪುಗಳಿಗೆ ಮನಸ್ಸಿಲ್ಲದ
ಮನಸ್ಸಿನಿಂದ ಶಿಕ್ಷೆ ಸ್ವೀಕರಿಸುವಾ ಮುನ್ನ
ಮಗುವೊಂದಾಗ ಬೇಕಿತ್ತು ನಾ...!!

ಎಲ್ಲಾ ತಿಳಿದಿದ್ದರೂ, ಏನೂ ತಿಳಿದಿಲ್ಲವೆಂಬಂತೆ
ನಟಿಸಲು, ಹೇಳ ಬಯಸಿದರೂ ಬಾಯಿಕಟ್ಟಾಕಿದಂತೆ
ಮೂಕ ಪ್ರೇಕ್ಷಕನಂತೆ ಅಭಿನಯಿಸಲು, ಆಗಬೇಕಿತ್ತು
ಇನ್ನೂ ನಾ ಮಗುವೊಂದು...!

## ಸಾವಲ್ಲೂ ನೀ ಕಾಣು ಸಗ್ಗವ...

– ಕುಮಾರ ಜಿ.ಕೆ, ಸಹಾಯಕ ಪ್ರಾಧ್ಯಾಪಕ

ಹಾಲ್ಬೆಳದಿಂಗಳ ತಿಳಿ ತಿಂಗಳ
ಬೆಳದಿಂಗಳಲ್ಲಿ
ಹಸಿರುಟ್ಟ ವನ ಸಿರಿಯ ನೀರ್ಝರಿಯಲಿ
ಕಲರವವು ಮೂಡಿ, ಸೋನೆಯ ಹನಿಯು ಕೂಡಿ
ಮಾರ್ದನಿಸುತಿದೆ ಪ್ರಕೃತಿಯ ಒಡಲಲಿ...

ಬಾನಿಗೆ ಬಣ್ಣವ ಹೂವಿನಲಿ ಮಕರಂದವ
ಮುಗುಳು ನಗೆಯಲಿ ಸೌಂದರ್ಯವ
ಈ ಮನದೊಳಗೆ ಪ್ರೀತಿಯ ಮಾಧೂರ್ಯವ
ತಂದಿಟ್ಟವರಾರು? ಉತ್ತರವ ಕೊಡುವವರಾರು?

ಸಾಗರನ ಕೂಗಿನ ಓಗೊಡದೆ ನದಿಯು
ಧುಮ್ಮಿಕ್ಕಿ ಹರಿಯುವುದೆಂತೊ?
ಸಾಗರ ನದಿಯ ಸೇರದೆ
ಓಡಿ ಸೇರುವುದಿನ್ನೇತಕೊ?

ಒಡಲೊಳಗೆ ಪ್ರೀತಿ
ಬದುಕುವ ರೀತಿ
ಕಾಣದ ಕೈಗಳ ಭೀತಿ
ಕಲಿಸಿದ ಬಾಳಿಗೊಂದು ನೀತಿ ...
ಅಳಿದು ಹೋಗುವ ಬದುಕ್‌ಲ್ಲಿ
ಉಳಿಸಿ ಹೋಗು ನಿಸರ್ಗವ
ಅಳಿದು ಹೋದರು ಬದುಕು
ಸಾವಲ್ಲೂ ನೀ ಕಾಣುವೆ ಸಗ್ಗವ..

# ಚುಟುಕುಗಳು

– ಅಶ್ವತ್‌ಕುಮಾರ್ ಬಿ.ಕೆ, ಸಹಾಯಕ ಪ್ರಾಧ್ಯಾಪಕ

ಗುರಿಯಿಲ್ಲದ ಬದುಕಲ್ಲಿ
ಗುರುವ ಹುಡುಕಿ ನಡೆದೆ
ಗುರುವೆ ನೀ ಸಿಕ್ಕಾಗ
ಗುರಿಯ ದಾರಿಯ ತೋರಿದೆ
ಆ ದಾರಿಯಲ್ಲಿ ನಾ ನಡೆದು
ಗುರಿಯ ದಾರಿ ಮುಟ್ಟಿದೆ.

* * *

ಸೋಲಿಗೆ ಹೆದರಿ ಸಾಯದಿರು
ಗೆಲುವಿಗೆ ತುಂಬಾ ಖುಷಿ ಪಡದಿರು
ಏನಾದರೂ ಹತಾಶಭಾವ ಹೊಂದದಿರು
ಸೋಲೆಂದು ಶಿಕ್ಷೆಯಲ್ಲ ಗೆಲುವೆಂದೂ ಶಾಶ್ವತವಿಲ್ಲ
ಹೋರಾಟದ ಬದುಕಲ್ಲಿ ಯಾವುದು ನಿಶ್ಚಿತವಲ್ಲ

* * *

ಸಾಧನೆಯ ತವಕದಲ್ಲಿ
ಸಾವಿನ ಅಂಜಿಕೆಯಿಲ್ಲ
ಸೋಲುವುದಾದರೂ ಯಾರಿಗೆ
ಸೇರುವುದಾದರೂ ಎಲ್ಲಿಗೆ
ಸಾಗು ನೀ ಮುಗುಳುನಗೆಯೊಂದಿಗೆ

* * *

ಖಾಲಿ ಜೀವನದಿ
ಯಾರಿಲ್ಲ ನಮಗೆ
ವಿದ್ಯೆಯನ್ನು ಸಂಪಾದಿಸು
ಯಾರು ಬೇಕಿಲ್ಲ ನಮಗೆ

* * *

## ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ದಿವ್ಯನುಡಿಗಳು

❖ ಧರ್ಮವು ಋಷಿಮುನಿಗಳ ಅನುಭವಜನ್ಯ ಜ್ಞಾನ. ಈ ಜ್ಞಾನವೇ ಮನುಕುಲದ ದಾರಿದೀಪ. ಜೀವಜಗತ್ತಿನ ಉಳಿವಿಗೆ ಆಧಾರಸ್ತಂಭವಾಗಿರುವ ಧರ್ಮದ ಪ್ರಕಾರ ಕಾರ್ಯನಿರ್ವಹಣೆ ಮಾಡಬೇಕು.

❖ ಕಣ್ಣುಗಳಿಗೆ ಕವಿದ ಕತ್ತಲೆಯನ್ನು, ಮನಸ್ಸಿಗೆ ಮೆತ್ತಿದ ಮಲವನ್ನು ನಿರ್ಮೂಲನಗೊಳಿಸಿ, ಅಸಂಸ್ಕೃತ ವ್ಯಕ್ತಿಯನ್ನು ಸುಸಂಸ್ಕೃ ತನನ್ನಾಗಿ ಪರಿವರ್ತಿಸಿ ಸನ್ಮಾರ್ಗ ತೋರಿಸುವವನೇ ಗುರು.

❖ ಧರ್ಮದ ಬದುಕಿನಲ್ಲಿ ಮುಂದುವರಿಯಲು ಮೊದಲು ತನ್ನ ಅಂತರಂಗವನ್ನು ಶುದ್ಧ ಮಾಡಿಕೊಳ್ಳಬೇಕು. ತನ್ಮೂಲಕ ಸಮಾಜದಲ್ಲಿ ಇತರರಿಗೆ ಮಾದರಿಯಾಗಿ ಬದುಕಬೇಕು.

❖ ಧರ್ಮವೇ ಭಾರತದ ಉಸಿರು. ಧರ್ಮಕ್ಕೆ ಚ್ಯುತಿ ಬಂದರೆ ಜನಜೀವನದಲ್ಲಿ ಅಶಾಂತಿ ಬೆಳೆಯುತ್ತದೆ

# ಆಕಾಶ-ಭೂಮಿ ಎಂಬ ಪ್ರೇಮಿಗಳ ಕಥೆ

**- ರಮ್ಯ ಬಿ.ಪಿ, ತೃತೀಯ ಬಿ.ಕಾಂ.,**

ಈ ಸುಂದರ ಪ್ರಪಂಚದಲ್ಲಿ ಭೂಮಿಯು
ಆಕಾಶಕ್ಕೆ ತುಂಬಾ ಹತ್ತಿರವಾಗಿದ್ದಳು
ತಿರುಗುತ್ತಾ ತಿರುಗುತ್ತಾ ಕೆಳಗೆ ಬಿದ್ದಳು
ಬಿದ್ದ ಈಕೆ ದೂರಾದಳು...

ದೂರಾದ ಇವರು ಸಾಕಷ್ಟು ನೊಂದರು
ನೊಂದ ಇವರು ಪ್ರಪಂಚಕ್ಕೆ ನೆರವಾದರು
ನಿಸ್ವಾರ್ಥ ಸ್ವಭಾವದ ಈ ಪ್ರೇಮಿಗಳು
ನಮಗೀಗ ಇವರು ಮಾದರಿಯಾದರು...

ಈಡೀ ಭೂಮಂಡಲವನ್ನೇ ಬೆಳಗುವ ಆಕಾಶ
ಆಕಾಶವ ಸದಾ ತಂಪಾಗಿ ನೋಡಿಕೊಳ್ಳುವ ಭೂಮಿ
ಪರಸ್ಪರ ಅವಲಂಬಿಸಿರುವ ಇವರಿಬ್ಬರು
ನಾ ಕಂಡ ಪ್ರಪಂಚದ ಮೊದಲ ಪ್ರೇಮಿಗಳಾದರು...

ಒಮ್ಮೆ ನಾ ಕೇಳಿದೆ ಇವರಿಬ್ಬರನ್ನು
ದೂರವಿರುವ ನಿಮ್ಮಿಬ್ಬರ ನೆಮ್ಮದಿಗೆ ಕಾರಣವೇನೆಂದು
ಹೇಳಿದರು ನಮ್ಮ ನಡುವೆ ಯಾರು ಬರಲಾರರೆಂದು
ಬಂದರು ಮರೆಮಾಚಲಾರರು ಎಂದು ನಂಬಿದ್ದರು...


ವಿಶಾಲವಾದ ಸ್ಥಳದಲ್ಲಿ ನಾ ನಿಂತೆ
ದೂರದಲ್ಲಿ ಜೊತೆಯಾದಂತೆ ಇವರಿಬ್ಬರ ಕಂಡೆ
ನೋಡಲೆಂದೇ ಇವರಿಂದಲೇ ನಾ ಹೊರಟೆ
ಕೊನೆ ಎಂಬುದೇ ಇಲ್ಲದ ಪ್ರೀತಿಗೆ ನಾ ಸೋತೆ...

ಜೀವನದಲ್ಲಿ ನಾವು ಯಾರನ್ನೂ ದ್ವೇಷಿಸಬೇಕಿಲ್ಲ, ಒಳ್ಳೆಯವರಿಂದ ಒಳ್ಳೆಯತನ ಕಲಿಯೋಣ, ಕೆಟ್ಟವರಿಂದ ಪಾಠ ಕಲಿಯೋಣ. – **ಗೌತಮ ಬುದ್ಧ**

ಪರಾಜಯ ಮತ್ತು ಅಸಫಲತೆ ಕೆಲವೊಮ್ಮೆ, ವಿಜಯದ ಕಡೆಗಿನ ನಮ್ಮ ನಡೆಯನ್ನು ಮತ್ತಷ್ಟು ಬಲಿಷ್ಠಗೊಳಿಸುತ್ತವೆ. – **ಲಾಲಾ ಲಜಪತ್‌ರಾಯ್**

# ಅನ್ನದಾತ

– **ಉದಯ್‌ಕುಮಾರ್ ಕೆ.ಎಸ್., ದ್ವಿತೀಯ ಬಿ.ಕಾಂ.,**



ರೈತ... ರೈತ.. ರೈತ..
ಅನ್ನ ನೀಡುವ ತಾತ
ಭೂಮಿಗೆ ಬಿತ್ತುವ ಬೀಜ
ಇವನೇ ಭೂತಾಯಿಯ ತೇಜ
ನೇಗಿಲ ಹಿಡಿದು ನಿಂತನು ಯೋಗಿ
ದಿನವಿಡೀ ತನ್ನ ಕಾಯಕದಲ್ಲಿ ಭಾಗಿ
ಓ ರೈತ.. ನೀ ದೇವದೂತ

ಎಲ್ಲರೂ ಬಯಸುತ್ತಾರೆ ವಿವಿಧ ಪ್ರೊಫೇಷನ್ನು
ನಾವು ತಿಂದು ಬದುಕಲೇಬೇಕು ನೀನು ನೀಡಿದ ಕೂಳನ್ನು
ಬರಲಾರದ ಮಳೆಗೆ ಅಂಗಲಾಚಿ ಬೇಡುವನು ದೇವರನ್ನು
ಬಂದ ಮೇಲೆ ಇವರ ಮುಖವಾಗುವುದು ಹಸನು
ಬೇಕು ಇವರಿಗೆ ನ್ಯಾಯ
ಇವರ ಹೆಸರಿನಲ್ಲಿ ಆಗುತ್ತಿದೆ ಅನ್ಯಾಯ
ಓ ರೈತ.. ನೀ ಅನ್ನದಾತ

ನಿನ್ನ ನೋವನ್ನು ನೀನೇ ಅರಿಯುವೆ
ತನ್ನ ಬೆವರನ್ನು ಹೊಲದಲ್ಲಿ ಸುರಿಯುವೆ
ನಿನಗಿಲ್ಲ ಸರಿಸಾಟಿ ಯಾರಾರು
ನೀನೇ ನಮ್ಮ ನಿಜವಾದ ಕಣ್ಮುಂದಿನ ದೇವರು
ಓ ರೈತ.. ನೀ ದೈವಾಂಶ ಸಂಭೂತ

ಮಾಹಿತಿಯನ್ನು ನೀವು ಹೇಗೆ ಸಂಗ್ರಹಿಸುತ್ತೀರಿ, ನಿರ್ವಹಿಸುತ್ತೀರಿ ಮತ್ತು ಅದನ್ನು ಹೇಗೆ ಬಳಸಿಕೊಳ್ಳುತ್ತೀರಿ ಎಂಬುದು ನಿಮ್ಮ ಸೋಲು ಅಥವಾ ಗೆಲುವನ್ನ ನಿರ್ಧರಿಸುತ್ತದೆ.

– **ಬಿಲ್‌ಗೇಟ್ಸ್**

ಮೂರ್ಖತನದ ವಿರುದ್ಧ ಯಾವುದೇ ಲಸಿಕೆ ಇಲ್ಲ. – **ಆಲ್‌ಬರ್ಟ್ ಐನ್‌ಸ್ಟೀನ್**

## ಚುಟುಕುಗಳು

– ಸಿಂಧು ಯು.ಟಿ, ದ್ವಿತೀಯ ಬಿ.ಎಸ್ಸಿ.,

ಮೌನವನ್ನು ತಿಳಿದವನು ಜ್ಞಾನಿಯಾದ
ಜ್ಞಾನವನ್ನು ತಿಳಿದವನು ವಿದ್ಯಾವಂತನಾದ
ವಿದ್ಯೆವನ್ನು ಪಡೆದವನು ಶಿಕ್ಷಕನಾದ
ಶಿಕ್ಷಣವನ್ನು ಪಡೆದವನು ವಿದ್ಯಾರ್ಥಿಯಾದ
ವಿದ್ಯಾರ್ಥಿಯನ್ನು ಅರಿತವನು ಪ್ರಜೆಯಾದ
ಪ್ರಜೆಯನ್ನು ಅರಿತವನು ಭಾರತೀಯನಾದ

* * *

ನೆನಪಿನ ಹಾದಿ ಮುಂದಿದೆ
ಮರುಗದಿರು ಮನವೆ
ಈ ಕಲಿಯುಗದಲ್ಲಿ ಕಲಿತು
ಕಲಿಸುತ್ತಾ ಕಲಿಯುವೆ
ನನ್ನ ಸಮಯ ಬರುವುದು
ಅಲ್ಲಿಯ ತನಕ ಕಾಯುವೆ

* * *

ಬಡವನ ಮನಸ್ಸಿನ ಕಣ್ಣಿನಲ್ಲಿ ನಗುವಿನ ಕಿರಾಟ
ಶ್ರೀಮಂತನ ಆಸೆಯ ಕಣ್ಣಿನಲ್ಲಿ ದುಡ್ಡಿನ ಓಡಾಟ
ಸಮಾಜದ ಸ್ಥಿತಿಯ ಕಣ್ಣಿನಲ್ಲಿ ಅರಿಯುವ ಪಾಠ
ನಮ್ಮ ನಿಮ್ಮ ಪರದೆ ಕಣ್ಣಿನಲ್ಲಿ ಘಾತಕರ ಕಾದಾಟ
ಎಲ್ಲವನ್ನೂ ಆಡಿಸುವ ಕಣ್ಣಿನಲ್ಲಿ ಈಶ್ವರನ ಆಟ

* * *

## ಚುಟುಕುಗಳು

– ಗಿರೀಶ. ಎಂ. ಕಡಕೋಳ, ದ್ವಿತೀಯ ಬಿ.ಎ

ತಂದೆಯಿಂದ ಪಡೆದ ಗತ್ತು
ತಾಯಿ ಕೊಡುವ ಕೈ ತುತ್ತು
ಶಿಕ್ಷಕರಿಂದ ಕಲಿತ ಶಿಸ್ತು
ಸ್ವತಃ ದುಡಿದು ತಿನ್ನುವುದು
ಜೀವನದ ನಿಯತ್ತು

* * *

ಜೀವ ಹೋಗುವ ಈ ದೇಹ
ನಾಶವಾಗಿ ಹೋಗುವ ಈ ಸಿರಿಸಂಪತ್ತು
ಅಳಿಸಿ ಹೋಗುವ ಈ ಸೌಂದರ್ಯ
ಬದುಕಿನ ಈ ಮೂರು ದಿನಗಳ
ನಡುವೆಳೆದು ತೂಗಿ ನೋಡಿದಾಗ
ಉಳಿಯುವುದು ಒಂದೇ ಅಮರ ಸ್ನೇಹ

* * *

# ENGLISH SECTION

## Challenges Leads to Opportunities

**• M.P. Sunilkumar, Asst. Professor**

These words add more meaning, at a time when we are cruising through, more troubled waters. As educated individuals, we are tested for our wisdom and courage under any circumstances. The present pandemic situation, as lead us to think about the blank future ahead. Challenges are truly opportunities. Opportunities : to grow, to learn, to strengthen ourselves, to test ourselves and our faith.

There are more than seven thousand orphan diseases, which the medical science is unable to find answer for it. In the present situation we have raised again like a phoenix bird from it's ashes. The corona virus pandemic situation has a lot of dark sides. Around the world, people get ill and die, Educational institution, has closed their doors for the students. The healthcare system is overloaded, employees have lost their jobs, companies have turned bankrupt, stock market has entirely collapsed and countries have to spend more amounts of their reserved funds on medical aid. We have to look on the bright sides of life. We have to not forget, to make best use of the situation, to engage ourselves in reading activities, think innovative, and try to solve the present situation in our own way. The good old SWOT analysis tells us, there are not only threats, but also opportunities. Through virtual platform many companies are planning to hire 1,00,000 employees. Children are getting themselves hooked to reading activities. The doctors are working around the clock, to find remedies for the present pandemic situation. The fact that, the corona virus disrupts day to day lives, it also provides an opportunity to reflect on things and to reconsider what we do, how we do it and

why we do it. Things we took granted- like roaming with our friends are suddenly not possible.

People have changed their mode of working and work from home instead of at the office. Lot of our routine work is interrupted by this novel disease. We have to change our habits, to rethink, and make some alternations, in our way of approach, to the present global pandemic situation.

It is a challenge for the employees to work from home without the direct supervision of the superiors, or the head of the institutions. Many innovative ways are employed by our teaching fraternities to make learning process, more enjoyable by using various methods. There is a huge challenge for the teachers to make their students hooked to their mobiles, in order to teach in online mode. This gives an opportunity to create innovations now that can be maintained, after the crisis. Restaurants are shifting to delivery mode. Schools suddenly do much of teaching and even some of them testing online.

In many countries it is not allowed, anymore to meet with group of persons, many meeting are cancelled. The current crisis has forced us to rethink, how we deal with meetings. Mostly the meetings are mostly virtual and shorter. The present situation has provided an excellent opportunity, for resolving one of the most disliked parts of organizational life. We have to make systematic changes, so that meetings will be more effective.

Not being able, to visit our friends or family has increased isolation and feelings of loneliness in some cases. The feeling of " we're in this together" can be witnessed by mutual helping of all the countries , expanding their help in this difficult situation for which we need to be grateful for them in supplying medical aid, to us in this pandemic situation. Though, we have lost our near and dear ones, we need to move on with our life. Life is neither tempest, nor Midsummer's Night Dream, nor Macbeth, nor Comedy of Errors. So, enjoy as you like it.

* * * * *

# Benefaction of Vedic Era Towards Gender Equalities: An Epitome

• **Naveriya Banu, Asst. professor**

It is veracious, that the concept of women, in Manu smruthi “Yatra nari astu pujyante Ramante tatra devatae” was truly persisted in Vedic India. More than 3000 years ago, the Vedic period encountered for gender equalities, women granted an equal rank compared to men and they had enjoyed a great liberty in an outright of socioeconomic and financial aspects of Vedic era. These equality and liberty shaped 27 among them Gargi, Maitreyi, Lopamudra, Ghosha are notable in Vedic age. The concerned study is basically about to assessing the benefaction (i.e. contribution) of the Vedic era in gender equalities and how the Vedic India can be an epitome (i.e. Model) for modern India in eradication of gender disparities.

The prime notion of the study is to reveal modernproblems and its Vedic solution towards women issue in general.Today, the women of modern India are facing plenty of problems; the present study takes into account the problem of gender inequalities at distinct levels of the society. Gender inequality nothing but unequal treatment or perceptions of individuals based on their gender. In India we are perceiving gender inequality on part of women only; here an attempt has been made to mark out the facts prevailing in Vedic culture in order to resolve the problems of gender inequalities in present era. The methodology used in this study is ‘hermeneutics’ based on studying the Vedas which states the concept of gender equalities. The analytical outcome of the study contains findings and suggestions as an inference.

India is a country, which is having marvelous history throughout the globe. It encountered for number of ancient civilizations like Stone Age, Bronze Age, Vedic period, urbanization and so on. Each epoch has gain worldwide memento on its own influential prospects. When we contemplate on Vedic period of India, it was considered golden era for humankind, the contributions of Vedic era to Indian culture are

eternal. People enjoyed an excellent social life in those days.

Vedic period is acknowledged as evergreen era because it was resulted for gender equality; Women occupied an immense position in Vedic society, in fact they were superior to men and it is surprise to know that the women had an opportunity to take part in all aspects of rituals and to choose their life partner, by the way of a type of marriage called 'Svayamvara'. These elucidate the place and autonomy relished by Vedic women.

The present study attempts to identify, observe the contributions of Vedic era towards gender equality, with reference to some selected quotations from Veda. It uses Hermeneutic research methodology, which widely practiced in social science. Eventually an abbreviated attempt is exercised to present some practical recommendations along with inference.

## Rights of Woman given in the Vedic era.

Parents should gift their daughter intellectuality and power of knowledge when she leaves for husband's home. They should give her a dowry of knowledge.

In this mantra of Brahmcharya Sukta, it is emphasized that girls too should train themselves as students and only then enter into married life. The Sukta specifically emphasizes that girls should receive the same level of training as boys.

Women should take part in the legislative chambers and put their views on forefront.

The right is equal in the father's property for both son and daughter.

There should be women in army. Let the women be encouraged to participate in war.

From the above statements, we can realize that the Vedic age is a best example for gender equality. The present attempt had drawn the following recommendations to enhance the gender equality in present scenario so that it will leads to equitable treatment of women in various aspects of the society.

## Recommendations :

